REGISTERED NO. M. 1393.

ಕಂಠೀರವ

ಅರ್ಧಾಣೆ

ESTD. 1919 ಸ್ಥಾಪನೆ.

ವಾರಕ್ಕೆರಡಾವರ್ತಿ ಪ್ರಕಟವಾಗುವ ಶ್ರೇಷ್ಠವರ್ಗದ ಕನ್ನಡ ವಾರ್ತಾಪತ್ರಿಕೆ.

KANTEERAVA, MANGALORE

The only Nationalist Kanarese BI-WEEKLY with the largest circulation.

ಸಂಪುಟ ೧೪ | ಮಂಗಳೂರು, ೧೯೩೭ನೇ ಇಸವಿ ಜನವರಿ ತಾರೀಕು ೧೫ನೇ ಶುಕ್ರವಾರ | ಸಂಚಿಕೆ ೮೨

VOL. XVIII | MANGALORE, FRIDAY, JANUARY 15, 1937 | NO. 82

THE

Canara Banking Corporation, Udipi, Ltd.

(Incorporated in British India)

ನೋಟೀಸು.

ನಿರಖು ಠೇವಣಾತಿಗಳು

ನಮ್ಮ ಎಲ್ಲಾ ಕಾರ್ಯಾಲಯಗಳಲ್ಲಿ, ಇದೇ ತಾ. 1—1—1937ರಿಂದ ಈ ಕೆಳಗಿನ ಬಡ್ಡಿ ದರಗ್ಳ ಮೇಲೆ ಸ್ವೀಕರಿಸೋಣಾಗುತ್ತದೆ:—

3 ತಿಂಗಳಿಗೆ ಸಾಲಿಯಾನಾ	2½%
6 ,, ,,	3 %
9 ,, ,,	3½%
12 ಮತ್ತು 24 ತಿಂಗಳಿಗೆ ಸಾಲಿಯಾನಾ	4 %

(ಬಡ್ಡಿ ಪಾವತಿ ಅರ್ಧ ವರ್ಷಕ್ಕೊಮ್ಮೆ)

ಪೊಪ್ಯುಲರ್

- ಬ್ರಿಟಿಷ್ ಕರ್ನಾಟಕದ ಪ್ರಥಮ ವಿಮಾಸಂಸ್ಥೆ—ದಕ್ಷಿಣ ಕನ್ನಡದ ಆದರ್ಶ ವಿಮಾಸಂಸ್ಥೆ.
- ಪ್ರಥಮ ವರ್ಷದಿಂದಲೇ ವಿಮಾನಿಧಿ ಸ್ಥಾಪಿತವಾಗಿದ್ದು ಇದು ವರ್ಷಂಪ್ರತಿ ಬೆಳೆಯುತ್ತಾ ಇದೆ.
- ಪ್ರಥಮ ಮೌಲ್ಯವೇತನದಲ್ಲಿಯೇ ಬೋನಸ್—ಅಖಿಲ ಕರ್ನಾಟಕದಲ್ಲಿ ಪ್ರಥಮ ಬಾರಿಯೇ ಬೋನಸನ್ನು ಹಂಚಿದ ಸಂಸ್ಥೆಯೆಂದರೆ ಇದೊಂದೇ.

ವಿಮೆಯನ್ನು ಮಾಡಲೂ, ಮಾಡಿಸಲೂ ಇದೀಗ ನಿಮ್ಮ ಸಂಸ್ಥೆ.
ಸುಲಭವಾದ ವಿಮಾಕಂತುಗಳು—ಸರ್ವರಿಗೂ ಅನುಕೂಲವಾದ ಆತ್ಯಾಧುನಿಕ
ಶಾಸ್ತ್ರೀಯ ವಿಮಾಪದ್ಧತಿಗಳು—ಅಡಳಿತೆಯು ಸುವ್ಯವಸ್ಥಿತ—
ಭದ್ರತೆಯು ವಿಶ್ವಾಸಾರ್ಹ.

ಯೋಗ್ಯ ವಿಜಂಟಿರುಗಳಿಗೆ ಧಾರಾಳ ಕಮಿಶನ್.

ಮಾಹಿತಿಪತ್ರ ಇತ್ಯಾದಿ ಹೆಚ್ಚಿನ ವಿವರಗಳಿಗೆ ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆಯಿರಿ.

Asiatic Government Security
LIFE ASSURANCE CO., LTD.,

Established 1913. **Life Branch 1922.**

The Pioneer Insurance Institution in Mysore State transacting business throughout India. Varied plans of Assurances for both male and female lives at competitive rates. Attractive Policies with liberal privileges including Disability Benefits. Substantial Bonus. Profitable Agency Connections.

For Prospectus and Agency terms apply to:

Head Office: "Asiatic Buildings" Bangalore City,

OR

to any of the Company's undernoted Branches:

Madras Branch:	**187, Mount Road.**
Bombay Branch:	**Hornby Road, Fort.**
Calcutta Branch:	**15, Clive Street.**

V. RANGASWAMI, B. A., B. L.,
General Manager.

The Premier Bank of India, Ltd., Madras

ದಿ ಪ್ರಿಮಿಯರ್ ಬೇಂಕ್ ಒಫ್ ಇಂಡಿಯಾ, ಲಿಮಿಟೆಡ್,

ಹೆಡ್ ಆಫೀಸ್:—ತಂಬುಚೆಟ್ಟಿ ಸ್ಟ್ರೀಟು, ಮದ್ರಾಸು.

ಚೇರ್‌ಮೇನ್—ಡಾಕ್ಟರ್ ಯು. ಎಲ್. ನಾರಾಯಣ ರಾವ್,
(ಭುಜಂಗನಿವಾಸ, ತ್ಯಾಗರಾಯನಗರ.)

ಕಾಯಂ ಠೇವಣಾತಿಗಳು ವರುಷ ಒಂದಕ್ಕೆ ಶೇಕಡಾ 5½ ಸಲೆಯಲ್ಲಿಯೂ, ಎರಡು ವರುಷಗಳಿಗೆ ಶೇಕಡಾ 6ರ ಸಲೆಯಲ್ಲಿಯೂ ಸ್ವೀಕರಿಸಲ್ಪಡುತ್ತವೆ. ಆರು ತಿಂಗಳ ಗೊಮ್ಮೆ ಬಡ್ಡಿಯು ಕೊಡಲಾಗುವುದು. ಬ್ಯಾಂಕಿನ ಇತರ ಎಲ್ಲಾ ವಹಿವಾಟುಗಳೂ ನಡೆಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಹೆಡ್ಡಾಫೀಸಿಗೆ ಬರೆದುಕೊಳ್ಳುವುದು.

S. V. RAO, D. Com.,
Managing Director.

Bala Sahitya Mandala, Limited,
KODIALBAIL, MANGALORE.

Arrivals of the week—Collins reward books prices from 3ds upwards.
(Very attractive and fitting presents to kiddies)

Only a few copies of the following:—

"Jawaharlal's Autobiography"	Rs.	7— 0—0
"Jawaharlal's India and the World"	Rs.	3—12—0
Letters to Daughter by Jawaharlal	Rs.	1— 8—0

Works of—Leo Tolstoy

The Supreme Dictionary (the cheapest & best dictionary with illustration) contains 1200 pages Rs. 2—10—0. A. B. C. of English usage—priced Re. 1—4—0.

Kannada section

1. Books prescribed for the Vidwan exam. both preliminary and Final are available with us at all times.
   Not least of all—Books of general interest treating on all subjects of all Karnataka.
2. **Stationery.** Black Bird Fountain pens (in assorted colours), Ever Sharp Fountain pens, Parker and Parkette, Warris (the latest pen—most reliable) priced Rs. 2—8—0. Besides stationery very attractive and useful. New year and Christmas cards and Diaries expected next week.

ಮೂಲವ್ಯಾಧಿಗೆ ಹೆಡನ್ಸಾ ಚಿಕಿತ್ಸೆ

ಯಾವುದೇ ಸ್ಥಿತಿಯಲ್ಲಿಯಾದರೂ ಮೂಲವ್ಯಾಧಿಯನ್ನು ಗುಣಪಡಿಸುವುದು.

ಮೂಲವ್ಯಾಧಿಗೆ ಅತ್ಯುತ್ತಮ, ಪೂರ್ಣ ಭರವಸೆಯುಳ್ಳ ಮತ್ತು ಬಹು ಬೇಗ ಗುಣಪಡಿಸುವ ಚಿಕಿತ್ಸೆಯಿದು. ರಕ್ತ ಬರುವುದನ್ನು ನಿಲ್ಲಿಸುವುದು, ಬಿರುಕುಗಳನ್ನು ಮುಚ್ಚುವುದು, ಹುಣ್ಣುಗಳನ್ನೂ ಗಾಯಗಳನ್ನೂ ಗುಣಪಡಿಸುವುದು. ಅನೇಕ ಚಿಕಿತ್ಸಾಲಯಗಳಲ್ಲಿ ಇದನ್ನುಪಯೋಗಿಸುತ್ತಿರುವರು.

ಯೂರೋಪಿನ ಪ್ರಸಿದ್ಧ ವೈದ್ಯರೂ, ಶಸ್ತ್ರಚಿಕಿತ್ಸಕರೂ ಬಹಳ ಶಿಫಾರಸು ಮಾಡಿದ್ದಾರೆ.

ಯಾವ ಕೆಮಿಸ್ಟ್ ಅಂಗಡಿಯಲ್ಲಾದರೂ ಸಿಗುತ್ತದೆ.

Madras Stockists:—

Messrs. DADHA & CO., 52, Nainiappa Naick Street, Madras.

ಮೋಸಹೋಗ ಬೇಡಿ.

ಶ್ರೀ ಅಂಬಾಳ್ ಮದರಾಸು ನಶ್ಯವು ಅನೇಕ ದೇಶಗಳಿಂದ ಅಸಮಾನವಾದ ಮತ್ತು ಶಾಶ್ವತವಾದ ಕೀರ್ತಿಯನ್ನು ಹೊಂದಿ ಜಗತ್ಪ್ರಸಿದ್ಧವಾಗಿರುವುದನ್ನು ಆರಿತು ಕೆಲವರು ಹಣಾಪೇಕ್ಷೆಯುಳ್ಳವರಾಗಿ ಕಿರಿದು ಹೊಗೆಸೊಪ್ಪನ್ನು ತರಿಸಿ ಅವುಗಳಲ್ಲಿರುವ ಮಣ್ಣು, ದುಂಬು, ಮಸಿಗಳನ್ನು ತೆಗೆಯದೆ ಬೆರಕೆ ತುಪ್ಪವನ್ನು ಸೇರಿಸಿ ನಶ್ಯವನ್ನು ತಯಾರಿಸಿ ವ್ಯಾಪಾರಸ್ಥರಲ್ಲಿ ಹೋಗಿ ಕಡಿಮೆ ಬೆಲೆಗೆ ಸಾಲವಾಗಿ ಕೊಟ್ಟು ಬರುವರು. ಕೆಲವು ವ್ಯಾಪಾರಸ್ಥರು ಸರಸವಾಗಿಯೂ ಸುಳ್ಳವಾಗಿಯೂ ಸಿಗುವುದರಿಂದ ಮೇಲ್ಕಂಡ ಹಲ್ಯಾ ನಶ್ಯವನ್ನು ತರಿಸಿ ಇದೇ ಹಸನಾದ ಮದರಾಸು ನಶ್ಯವೆಂದು ಬೆಕರಿ ಮಾಡಿ ಬರುತ್ತಿರುವರು. ಸಹೋದರರೇ! ಮೋಸಹೋಗಬೇಡಿ. ಇಂಥಾ ಪೋಲಿ ನಶ್ಯವನ್ನು ಉಪಯೋಗಿಸಿದರೆ ಮೇಲ್ಕಂಡ ನಶ್ಯದಲ್ಲಿರುವ ಹುಣ್ಣು, ಮಸಿ ಮೊದಲಾದವುಗಳು ಮೂಗಿನ ಮೂಲಕ ಮೆದುಳಿಗೆ ಹೋಗಿ ಮೆದುಳನ್ನು ಬಲೆಯೋಪಾದಿಯಲ್ಲಿ ಮುಚ್ಚಿಕೊಂಡು ಅಜ್ಞಾನವನ್ನುಂಟುಮಾಡುವುದು, ನಾನಿಕದ್ವಾರವನ್ನು ಬಂಧಿಸುವುದು. ಮೂಗಿನಲ್ಲಿ ವ್ರಣವನ್ನುಂಟುಮಾಡುವುದಲ್ಲದೆ ಪಂಚೇಂದ್ರಿಯಗಳ ಶಕ್ತಿಯನ್ನು ಕುಂಠಿಸುವದು. ಅದುದರಿಂದ ಅಪ್ಪರೇ, ಅನೇಕ ವರ್ಷಗಳಿಂದ ಅನೇಕ ಡಾಕ್ಟರುಗಳಿಂದಲೂ, ಜಡ್ಜಿಗಳಿಂದಲೂ, ಇನ್ನೂ ಅನೇಕ ಶ್ರೀಮಂತರಿಂದಲೂ ಶ್ಲಾಘಿಸಲ್ಪಟ್ಟಿರುವ ಶ್ರೀ ಅಂಬಾಳ್ ಅಂಡ್ ಕಂಪೆನಿ, ಪೋಸ್ಟ್ ಬಾಕ್ಸ್ ನಂ. ೩, ಮದರಾಸು, ಇವರ ಮದರಾಸು ನಶ್ಯ, ಸುಗಂಧ ನಶ್ಯವನ್ನೇ ಉಪಯೋಗಿಸಿ ಆನಂದಪಡಿರಿ. ಎಲ್ಲಾ ವ್ಯಾಪಾರಸ್ಥರಲ್ಲಿಯೂ ಸಿಗುವುದು.

ನ್ಯೂ ಮೋಡಲ್ ಮಾಲ್ ಕ್ಲಾಕ್

3 ವರುಷಗಳ ಗ್ಯಾರಂಟಿ.

(ದಿವಸಕ್ಕೆ ಒಂದಾವರ್ತಿ ಬೀಗ ಕೊಡುವುದು.)

ಈ ಗಡಿಯಾರಗಳು ಹೊಸ ರೀತಿಯಾಗಿ ತಯಾರು ಮಾಡಿ ತರಿಸಿದ್ದೇವೆ. ಸೀಮೆಯ ನಿಕ್ಕಲ್ ಲೋಹದ ಸ್ಟ್ಯಾಂಡಿನಲ್ಲಿ ತಯಾರಿಸಿದ್ದೇವೆ. ಈ ಗಡಿಯಾರವು ಖರಾರು ಗಂಟೆಯನ್ನು ತೋರಿಸುವುದು. ಖಾತ್ರಿಯಾದ 3 ವರುಷಗಳ ಗ್ಯಾರಂಟಿ ಕೊಡುವೆವು. ಈ ಗಡಿಯಾರಗಳನ್ನು ಗುಡಿ, ಸ್ಕೂಲು, ರೀಡಿಂಗ್ ರೂಮ್ ಹಾಲುಗಳಲ್ಲಿ ಮುಂತಾದ ಜಾಗದಲ್ಲಿ ಗೋಡೆಗೆ ತಗಲಿಸಿದರೆ ಅಂದವಾಗಿರುವುದು. ಕ್ರಯ ಗಡಿಯಾರ 1ಕ್ಕೆ ರೂ. 3—೦—೦. ಟಪ್ಪಾಲು ಖರ್ಚು ಪ್ರತ್ಯೇಕ.

ವಿ. ಎಸ್. ವಾಚ್ ಕಂಪೆನಿ,

8, 25—1/2. ಇರುಳಪ್ಪನ ಬೀದಿ, ಮದ್ರಾಸು.

For your Diamonds enquire at
Sowcar
SRINIVAS RANGA PAI,
Sowcar Mahal,
Car Street,
MANGALORE.

ನಿಮ್ಮ ಅದೃಷ್ಟವೆಲ್ಲವೂ
ನಿಮ್ಮ ಆರೋಗ್ಯದ ಮೇಲಿದೆ
ಪ್ರಪಂಚಪ್ರಸಿದ್ಧವಾದ ನಮ್ಮ

ಆತಂಕನಿಗ್ರಹ

ಮಾತ್ರೆಗಳನ್ನು ಉಪಯೋಗಿಸಿ

ನಿಮ್ಮ ಶರೀರವನ್ನು ಆರೋಗ್ಯ ಸ್ಥಿತಿಯಲ್ಲಿಡಿ. ಇದರ ಸೇವನೆಯಿಂದ ನೀವು ಆರೋಗ್ಯದೃಢಕಾಯರಾಗುವಿರಲ್ಲದೆ, ಬುದ್ಧಿ, ಚಟುವಟಿಕೆ ಹೆಚ್ಚುತ್ತದೆ. ಶಕ್ತಿವರ್ಧಕ ಔಷಧವೆಂದರೆ ಆತಂಕನಿಗ್ರಹ ಮಾತ್ರೆಗಳು. ಲಕ್ಷಾಂತರ ಜನರು ಉಪಯೋಗಿಸಿ ನೋಡಿದ್ದಾರೆ. ಇಂದೇ ಕೊಂಡು ಉಪಯೋಗಿಸಿ ನೋಡಿ. ೪೨ ಮಾತ್ರೆಗಳುಳ್ಳ ಡಬ್ಬಿಗೆ ಬೆಲೆ ೧ ರೂ. ಇತರ ವಿಚಾರಗಳಿಗೆ ಮುಫತ್ತಾಗಿ ಸಿಗುವ ನಮ್ಮ ಪುಸ್ತಕವನ್ನು ಓದಿ.

ಆತಂಕನಿಗ್ರಹ ಫಾರ್ಮೆಸಿ,

೬೪, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ಏಜಂಟರು—

ತುಳುವ ಸಭೆಯ ವರದಿ.

ತಾ. ೨—೧—೧೯೨೬ನೇ ಶನಿವಾರ ಅಪರಾಹ್ನ ೪ ಘಂಟೆ ೩ಕ್ಕೆ ಪೊಳಲಿಯ ವಕೀಲ್ ದಾಸಣ್ಣಾಳ್ವರ ಕಟ್ಟೋಣದಲ್ಲಿ ಕೂಡಿದ ತುಳುವ ಮಹಾಸಭೆಯ ಕಾರ್ಯನಿರ್ವಾಹಕ ಕಮಿಟಿಯ ನಿರ್ಣಯಗಳು.

ಹಾಜರಿ:—೧. ಬಡಕಬೈಲು ಪರಮೇಶ್ವರಯ್ಯ; ೨. ಕರಿಯಂಗಳ ಗುತ್ತು ಶೀತಾರಾಮ ಪಾಲ್ಕರು; ೩. ಬಡಕಬೈಲು ತಿಮ್ಮಪ್ಪ ರೈ; ೪. ಯಂ. ಕೆ. ಪಂಡಿತ ವೆಂಕಪ್ಪ ಪೂಜಾರಿ; ೫. ಎನ್. ಎ. ಶೀನಪ್ಪ ಹೆಗ್ಗಡೆ.

ಆದ ನಿರ್ಣಯಗಳು.

(೧) ತುಳುವ ಮಹಾಸಭೆಯ ಉಪಶಾಖೆಗಳಾಗಿ ಜಿಲ್ಲೆಯ ಮುಖ್ಯ ಸ್ಥಳಗಳಲ್ಲಿ ತುಳುನಾಡ್ ಪ್ರಚಾರಮಂಡಲಗಳನ್ನು ಸ್ಥಾಪಿಸುವ ಬಗ್ಗೆ ಪ್ರತಿ ಒಂದು ತಾಲೂಕಿಗೆ ೪ ಜನರಂತೆ ಆರಿಸಬೇಕಾಗಿ ನಿರ್ಣಯಿಸಲಾಯಿತು. (೨) ನಮ್ಮ ತುಳುನಾಡಿನ ಸೋಡ್ತಿ ಕಮಿಟಿ ಮೆಂಬರರೊಡನೆ ಮತ್ತು ಸಹಾಯಕರೊಡನೆ ಸೋಡ್ತಿಯಲ್ಲಿ ಬಹುಮಾನ ಪಡೆದವರು ತುಳು ಭಾಷಾಭಿವೃದ್ಧಿ ಹಾಗೂ ತುಳುವ ಸಾಹಿತ್ಯ ಪ್ರಚಾರಕ್ಕಾಗಿ ತುಳುವ ಮಹಾಸಭೆಗೆ ರೂಪಾಯಿಗೆ ೧ ಪೈಯಂತೆ ಧರ್ಮಸಹಾಯ ಮಾಡುವರೆ ಸೋಡ್ತಿ ತೆಗಿಯುವ ಮುಂಜೆ ರೇಫಲ್ ಕಮಿಟಿಯವರಿಗೆ ಮತ್ತು ಕೂಡಿದ ಮಹಾಸಭೆಯವರಿಗೆ ವಿನಂತಿಪತ್ರವನ್ನು ಆಯಾ ಕಮಿಟಿಯ ಕಾರ್ಯದರ್ಶಿಯವರ ಮೂಲಕ ಕಳುಹಿಸಬೇಕಾಗಿ ನಿರ್ಣಯಿಸಲಾಯಿತು. A ೧. ಪಿ ಹೋಲೀ ರೇಫಲ್ ಕಮಿಟಿ, ಪಣಂಬೂರು; ೨. ಎಲ್ಲೂರು ಕಸಬಾ ಶಾಲೆಯ ಸೋಡ್ತಿ ಕಮಿಟಿ, ಕಾಪು; ೩. ಮೂಲ್ಕಿ ಸ್ರೇಂಡ್ ರೇಫಲ್ ಕಮಿಟಿ, ಮೂಲ್ಕಿ; ೪. ಸ್ರೇಂಡ್ ವಿದ್ಯಾದಾಯಿನಿ ರೇಫಲ್ ಕಮಿಟಿ, ಇಡ್ಯ, ಸುರತ್ಕಲ್; ಇವರಿಗೆ ವಿನಂತಿಪತ್ರ ಕಳುಹಿಸಬೇಕಾಗಿ ನಿರ್ಣಯಿಸಲಾಯಿತು. (೩) ಜಿಲ್ಲಾ ತುಳು ಪ್ರಚಾರಕ ಕಮಿಟಿಗೆ ಈ ಕೆಳಗಿನವರನ್ನು ಮೆಂಬರರನ್ನಾಗಿ ಆರಿಸಲಾಯಿತು.

ಮಂಗಳೂರು ತಾಲೂಕಿಗೆ:—೧. ಎಚ್. ಕೃಷ್ಣಪ್ಪ ತಿಂಗಳಾಯರು; ೨. ಎಚ್. ನಾರಾಯಣರಾಯರು; ೩. ಎಫ್. ಎಫ್. ಒಡೆಯರ್; ೪. ಬಿ. ಪರಮೇಶ್ವರಯ್ಯ; ೫. ಅಮ್ಮೆಂಬಳ ಶಂಕರನಾರಾಯಣರಾವು; ೬. ಬೊಂಡಲ ಜನಾರ್ಧನ ಶೆಟ್ಟಿ; ಕಾಸರಗೋಡು ತಾಲೂಕಿಗೆ:—೧. ರಾಮು ಶರ್ಮರು; ೨. ಕಯ್ಯಾರು ಕಿಂಞಣ್ಣ ರೈ; ೩. ಪಿ. ಎಲ್. ಪುಣಿಂಚಿತ್ತಾಯರು; ೪. ಗಣಪತಿ ಶಾಸ್ತ್ರಿಗಳು; ಉಡುಪಿ ತಾಲೂಕಿಗೆ:—೧. ಮುದ್ರಾಡಿ ಜನಾರ್ಧನ ಆಚಾರ್ಯರು; ೨. ಎಸ್. ಯು. ಪಣಿಯಾಡಿ; ೩. ಸತ್ಯಮಿತ್ರ ಬಂಗೇರರು; ೪. ಯಂ. ವಿಟ್ಟಲ ಹೆಗ್ಡೆಯರು; ಕಾರ್ಕಳ ತಾಲೂಕಿಗೆ:—೧. ಎನ್. ಎಸ್. ಜೈನಿ, ನೆಲ್ಲಿಕಾರ್; ೨. ಪಂಡಿತ ಕೆ. ನಾರಾಯಣರಾವು; ೩. ಜಿನರಾಜ ಇಂದ್ರ, ಮೂಡಬಿದರೆ; ೪. ಯನ್. ಎಸ್. ಕಿಲ್ಲೆ; ಪುತ್ತೂರು ತಾಲೂಕಿಗೆ:—೧. ಯನ್. ಮಾರಪ್ಪ ಶೆಟ್ಟಿ; ೨. ಪಾಡೂರು ಮುಖ್ಯಪ್ರಾಣ ತಂತ್ರಿಗಳು, ರಾಮ್ಮಂಜ; ೩. ಕೆಮ್ಮಿಂಜೆ ಶೇಷಪ್ಪಯ್ಯ, ಪುತ್ತೂರು; ೪. ಬಿ. ವೆಂಕಪ್ಪ ರೈ, ಉಪ್ಪಿನಂಗಡಿ; ಬೊಂಬ್ಯಾಗೆ:—೧. ಕೊಡ್ಮಣ್ಣಗುತ್ತು ಮುತ್ತಯ ಶೆಟ್ಟಿ; ೨. ಬಿ. ನಾರಾಯಣ ರೈ; ೩. ಟಿ. ಎಸ್. ರಾವು, ಪೊಳಲಿ; ೪. ಮೂಲ್ಕಿ ದೊಂಬಯ ಶೆಟ್ರು. (೪) ಈ ಮೆಂಬರರು ತುಳುನಾಡಿನ ಜನರಿರುವ ಆಯಾ ಕಡೆಯಲ್ಲಿ ತುಳುನಾಡ್ ಪ್ರಚಾರ ಮಂಡಲಗಳನ್ನು ಸ್ಥಾಪನೆ ಮಾಡುವರೆ ಅಧಿಕಾರ ಕೊಡಲಾಯಿತು; ೫. ತುಳುವ ಮಹಾಸಭೆಯ ಹಳೇ ಮೆಂಬರರಿಗೆ ೫ ಜನ ಹೊಸ ಮೆಂಬರರನ್ನು ಸೇರಿಸುವಾಗ್ಯೆ ರಸೀದಿ ಪುಸ್ತಕಗಳನ್ನು ಕಳುಹಿಸಿಕೊಡಬೇಕಾಗಿ ನಿರ್ಣಯಿಸಲಾಯಿತು.

ತುಳುವ ಮಹಾಸಭೆ ಪೊಳಲಿ, ತಾ. ೮—೧—೩೭. } **ಎನ್. ಎ. ಶೀನಪ್ಪ ಹೆಗ್ಡೆ,** ಕಾರ್ಯದರ್ಶಿ.

ಸ್ವೀಕಾರ

೯. ದಿ ನೊರ್ದರ್ನ್ ಇಂಡಿಯಾ ಇನ್ಶೂರೆನ್ಸ್ ಕೊ., ಲಿಮಿಟೆಡ್, ಲಾಹೋರ್ ಇದರ ಮದ್ರಾಸು ಬ್ರಾಂಚ್ ಸೆಕ್ರೆಟರಿಗಳು ಕಳುಹಿಸಿದ ೧೯೨೭ನೇ ಇಸವಿಯ ದೊಡ್ಡದಾದ ಕ್ಯಾಲೆಂಡರು.

೧೦. ದಿ ಗುಜರಾತ್ ಆಯುರ್ವೇದಿಕ್ ಫಾರ್ಮೆಸಿ, ಅಹಮ್ಮದಾಬಾದ್ ಇದರ ಮಂಗಳೂರು ಏಜೆಂಟರಾದ ಡಾ॥ ಏ. ವೆಂಕಪ್ಪಯ್ಯ, ಬಿ. ಎ., ಎಲ್. ಟಿ., ಆಯುರ್ವೇದ ಭಿಷಕ್ಕರವರು ಕಳುಹಿಸಿದ ೧೯೨೭ನೇ ಇಸವಿಯ ಆಂದವಾದ ಕ್ಯಾಲೆಂಡರ್.

೧೧. ಶ್ರೀ ಸರಸ್ವತಿ ಭಂಡಾರ, ಅವೆನ್ಯೂ ರೋಡ್, ಬೆಂಗಳೂರು ಸಿಟಿ, ಇವರು ಕಳುಹಿಸಿದ ೧೯೨೭ನೇ ಇಸವಿಯ ಸುಂದರವಾದ ಪೊಕೆಟ್ ಕ್ಯಾಲೆಂಡರ್.

೧೨. ೧೯೨೭ನೇ ಇಸ್ವಿಯ ಸ್ವರಾಜ್ಯ ಡೈರಿ ಮತ್ತು ಸ್ವರಾಜ್ಯ ವಿಶ್ವಕೋಶ, ಸಂಪುಟ ೧೬—ಪ್ರಕಾಶಕರು ಪಿ. ಎ.ಪೈ, ಬ್ರದರ್ಸ್, ಉಡುಪಿ.

೧೩. ದಿ ಯುನೈಟೆಡ್ ಇಂಡಿಯಾ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಮದ್ರಾಸ್, ಇದರ ಡಿಸ್ಟ್ರಿಕ್ಟ್ ಮತ್ತೂ ಜನರಲ್ ಏಜೆಂಟರಾದ ಶ್ರೀ॥ ಗಳಾದ ಖಾಂಗಾಳಕಾರ್ ಬ್ರದರ್ಸ್‌ರವರು ಕಳುಹಿಸಿದ ೧೯೨೭ನೇ ಇಸವಿಯ ಸುಂದರವಾದ ಕ್ಯಾಲೆಂಡರ್.

೧೪. ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಬೊಂಬಯಿ ಇವರು ಕಳುಹಿಸಿರುವ ೧೯೨೭ನೇ ಇಸವಿಯ ಆಂದವಾದ ಕ್ಯಾಲೆಂಡರ್.—ಇವೆಲ್ಲವುಗಳನ್ನೂ ಆತ್ಯಾದರದಿಂದ ಸ್ವೀಕರಿಸಿರುತ್ತೇವೆ.

ಕಲ್ಕಂಡೆ ವ್ಯಾಸಾಚಾರ್ಯ, ಬ್ರಾಸ್ವೇರ್ ಮರ್ಚೆಂಟ್, ಉಡುಪಿ, ದ. ಕನ್ನಡ ಇವರ ಆಂದನಾದ ೧೯೨೭ನೇ ಇಸವಿಯ ಸಚಿತ್ರ ಸೂಚೀಪತ್ರ.

ಸತ್ಯವಾಣಿ:—ಉಜ್ಜ್ವಲ ರಾಷ್ಟ್ರೀಯ ವಾರ ಪತ್ರಿಕೆ—ಸಂಪಾದಕ ಕೆ. ಯಂ. ರಾಜಶೇಖರಯ್ಯ, ಹಿರೇಮಠ—ಸತ್ಯವಾಣಿ ಕಾರ್ಯಾಲಯ, ಸಂತೇಪೇಟೆ, ಚಿತ್ರದುರ್ಗ—ವಾರ್ಷಿಕ ಚಂದಾ—ಸ್ಥಳದವರಿಗೆ ರೂ. ೩, ಪರಸ್ಥಳದವರಿಗೆ ವಿ. ಪಿ. ಮೂಲಕ ರೂಪಾಯಿ ೩—೧೨—೦; ಬಿಡಿ ಸಂಚಿಕೆ ೧ ಆಣೆ.—ಇದು ಪ್ರತಿ ಸೋಮವಾರ ಚಿತ್ರದುರ್ಗದಿಂದ ಹೊರಡುವ ವಾರ ಪತ್ರಿಕೆ. ದೇಶ ವಿದೇಶ ಸುದ್ದಿಗಳೂ, ರಾಷ್ಟ್ರೀಯ ವಿಚಾರಗಳೂ, ಐತಿಹಾಸಿಕ ಲೇಖನಗಳೂ, ಇನ್ನಿತರ ಯೋಗ್ಯ ವಿಚಾರಗಳೂ ಇದರಲ್ಲಿ ಪ್ರಕಟವಾಗುತ್ತಿದ್ದು, ಕನ್ನಡಿಗರ ಉದಾರಾಶ್ರಯಕ್ಕೆ ತುಂಬಾ ಪಾತ್ರವಾಗಿದೆ.

ಕರ್ನಾಟಕ ಬಂಧು—ವಾರ ಪತ್ರಿಕೆ—ಸಂಪಾದಕರು ಧರಣೇಂದ್ರ ಕುಮಾರ ಶಾಸ್ತ್ರಿಗಳು; ಸಹಾಯಕ ಸಂಪಾದಕರು ಹೊಮ್ಮರಡಿ ಮಲ್ಲಪ್ಪ ಗೌಡರು—ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂಪಾಯಿ—೧೨—೦; ಬಿಡಿ ಸಂಚಿಕೆ ಬೆಲೆ ೧ ಆಣೆ—ವಿಳಾಸ ಕರ್ನಾಟಕಬಂಧು ಆಫೀಸು, ರುಸ್ತುಂ ಬಿಲ್ಡಿಂಗ್, ಚರ್ಚ್‌ಗೇಟ್ ಸ್ಟ್ರೀಟ್, ಫೋರ್ಟ್, ಮುಂಬಯಿ.—ಮುಂಬಯಿಯಲ್ಲಿರುವ ಕನ್ನಡಿಗರು ಸಾಹಸದಿಂದ ಹೊರಡಿಸುವ ಕನ್ನಡ ಪತ್ರಿಕೆಯೆಂದರೆ ಇದೊಂದೇ. ಇದು ಪ್ರತಿ ರವಿವಾರ ಮುಂಬಯಿಯಲ್ಲಿ ಪ್ರಕಟವಾಗುತ್ತಿದ್ದು, ಮುಂಬಯಿಯಲ್ಲಿರುವ ಪ್ರತಿಯೊಬ್ಬ ಕನ್ನಡಿಗನೂ ಇದನ್ನು ಪ್ರೋತ್ಸಾಹಿಸಬೇಕಾದುದು ಅವಶ್ಯಕವಾಗಿರುತ್ತದೆ. ಮುಂಬಾಯಿ ಕನ್ನಡಿಗರ ವಾರ್ತೆಯನ್ನರಿಯಲು ಇತರ ಕನ್ನಡಿಗರಿಗೂ ಇದು ಅತ್ಯಾವಶ್ಯಕವಾಗಿರುತ್ತದೆ. ಸರ್ವರೂ ಪ್ರೋತ್ಸಾಹಿಸಲಿ.

ಲೋಕಮತ:—ಕಳೆದ ೧೨ ವರ್ಷಗಳಿಂದ ಹುಬ್ಬಳ್ಳಿಯಲ್ಲಿ ವಾರಪತ್ರಿಕೆಯಾಗಿ ಹೊರಡುತ್ತಿದ್ದ ಈ ಪತ್ರವು, ವಿಜಯನಗರ ಸ್ಮಾರಕ ದಿನದಿಂದ ದಿನ ಪತ್ರಿಕೆಯಾಗಿ ಮಾರ್ಪಾಟಾಗಿದ್ದು ಶ್ರೀ. ವೀ. ಬ. ಪುರಾಣಿಕ, ಬಿ. ಏ.ಯವರ ಸಂಪಾದಕತ್ವದಲ್ಲಿಯೇ ದಿ ಕರ್ನಾಟಕ ನ್ಯೂಸ್‌ಪೇಪರ್ಸ್ ಕಾರ್ಪೊರೇಶನ್ ಲಿಮಿಟೆಡ್ ಕಂಪೆನಿಯ ಪರವಾಗಿ ಪ್ರಕಟಿಸಲ್ಪಡುತ್ತಿದೆ. ಹುಬ್ಬಳ್ಳಿಯು ದೊಡ್ಡ ವ್ಯಾಪಾರಕೇಂದ್ರವಾಗಿದ್ದು ಅಲ್ಲೊಂದು ಕನ್ನಡ ದಿನಪತ್ರಿಕೆಯ ಅವಶ್ಯಕತೆಯಿದೆಯೆಂದು ಬೇರೆ ಹೇಳಬೇಕಾಗಿಲ್ಲ. ದಿನಪತ್ರಿಕೆಯು ಸುಂದರವಾಗಿದ್ದು, ಯೋಗ್ಯ ವಿಚಾರಗಳಿಂದಲೂ, ಬಿಸಿ ಬಿಸಿ ಸುದ್ದಿಗಳಿಂದಲೂ ಕೂಡಿದ್ದು ಕನ್ನಡಿಗರ ಉದಾರಾಶ್ರಯವನ್ನು ಪಡೆದು ಚಿರಜೀವಿಯಾಗಲೆಂದು ಹಾರೈಸುತ್ತೇವೆ.

ಸಮಾಜ:—ವಿಜಯನಗರ ಸಾಮ್ರಾಜ್ಯ ಸ್ಮಾರಕ ವಿಶೇಷ ಸಂಚಿಕೆ—ಧಾರವಾಡದಿಂದ ಶ್ರೀ. ಬಾಲಚಂದ್ರ ಘಾಣೇಕರರವರ ಸಂಪಾದಕತ್ವದಲ್ಲಿ ಹೊರಡುವ ಈ ಮಾಸಪತ್ರಿಕೆಯ ಜನವರಿ ಸಂಚಿಕೆಯು ವಿಜಯನಗರಕ್ಕೆ ಸಂಬಂಧಪಟ್ಟ ಅನೇಕ ಸಚಿತ್ರ ಲೇಖನಗಳನ್ನೊಳಗೊಂಡು ವಿಶೇಷ ಸಂಚಿಕೆಯಾಗಿ ಪ್ರಕಟವಾಗಿದೆ. ಈ ಮಾಸಪತ್ರಿಕೆಯಲ್ಲಿ ಉತ್ತಮ ಲೇಖನಗಳು, ಬೋಧಪ್ರದ ಕಥೆಗಳು, ಮಾಸಭವಿಷ್ಯ, ಸಿನೆಮಾ ಸೃಷ್ಟಿ, ನಗೆ ಮಾತು, ಮನೋಹರ ಚಿತ್ರಗಳು ಇತ್ಯಾದಿ ತಪ್ಪದೆ ಪ್ರಕಟವಾಗುತ್ತಿದ್ದು, ಇದರ ವಾರ್ಷಿಕ ವರ್ಗಣಿ ಅಂಚೆ ವೆಚ್ಚ ಸೇರಿ ೧ ರೂ. ಮಾತ್ರ. ಬಿಡಿ ಸಂಚಿಕೆ ಬೆಲೆ ೧ ಆಣೆ.

ಗೋಮುಖವ್ಯಾಘ್ರ:—ಏಕಾಂಕ ನಾಟಕ—ಲೇಖಕರು: ಅ. ನ. ಕೃಷ್ಣರಾಯರು, ಸಂಪಾದಕರು; 'ವಿಶ್ವವಾಣಿ'—ಪ್ರಕಾಶಕರು: ವಿಶ್ವವಾಣಿ ಪ್ರಕಟನ ಮಂದಿರ, ಅನ್ನಪೂರ್ಣ, ವಿಶ್ವೇಶ್ವರಪುರಂ, ಬೆಂಗಳೂರು ನಗರ—ಬೆಲೆ ೪ ಆಣೆ.—ಶ್ರೀ. ಅ. ನ. ಕೃಷ್ಣರಾಯರು ಕನ್ನಡಿಗರಿಗೆ ತುಂಬಾ ಪರಿಚಿತಿಯಿರುವ ಸಾಹಿತಿಗಳು—ಅಂದ ಮೇಲೆ ಅವರ ಕೃತಿಯಾದ ಈ ಚಿಕ್ಕ ನಾಟಕದ ವಿಷಯವಾಗಿ ಬೇರೆ ಹೇಳಬೇಕೆ? ಅನ್ಯೋನ್ಯವಲ್ಲದ ದಾಂಪತ್ಯವು ಹೇಗೆ ಅನ್ಯದಲ್ಲಿ ಮುಕ್ತಾಯವಾಗುತ್ತದೆ ಎಂಬುದನ್ನು ಇದರಲ್ಲಿ ಹೃದಯಂಗಮವಾಗಿ ತೋರಿಸಿದ್ದಾರೆ. ಕಥಾವೈಪ್ಪಿನಿಂದ ನಾಟಕವು ಅಪೂರ್ಣವಾಗಿದ್ದರೂ ಇತರ ಎಲ್ಲಾ ದೃಷ್ಟಿಯಿಂದಲೂ ಈ ಏಕಾಂಕ ನಾಟಕವು ಉದಾತ್ತ ವಿಚಾರಗಳನ್ನೊಳಗೊಂಡಿದ್ದು ಸರ್ವ ವಿಧದಿಂದಲೂ ಪ್ರಶಂಸನೀಯವಾಗಿದೆ. ಶ್ರೀ. ಕೃಷ್ಣರಾಯರ ಇಂಥಾ ಅನೇಕ ಕೃತಿಗಳು ಇನ್ನೂ ಹೊರಬೀಳಲೆಂದೂ, ಕನ್ನಡಿಗರಿಂದ ತುಂಬಾ ಪ್ರೋತ್ಸಾಹಿಸಲ್ಪಡಲೆಂದೂ ಹಾರೈಸುತ್ತೇವೆ.

TULSIRAJ OIL—Guaranteed remedy for Hernia, Hydrocele, Gout & Rheumatism which proceed redical recovery without operation Re. 1/-. **BIRTH CONTROL** for all times, never fails, cures Dysmenorrhœa or Congested menstruation. Re. 1/4/-. N. DE, Specialist in Ulcers, 152/2. Manicktola St., Calcutta. Agent—**B. K. Paul & Co.**, Calcutta.

ನರಸಿಂಹ ಲೇಹ್ಯ

(ಸ್ವರ್ಣ ಸಹಿತ) ನಿಶ್ಯಕ್ತರಿಗೊಂದು ವರಪ್ರದಾನ.

ರಕ್ತ, ಶಕ್ತಿ, ಜೈತನ್ಯ, ತ್ರಾಣ ಮತ್ತು ಮನುಷ್ಯತ್ವವನ್ನು ವೃದ್ಧಿಗೊಳಿಸುತ್ತದೆ. ಉಷ್ಣ ಮತ್ತು ಬಹುಮೂತ್ರವನ್ನು ಗುಣಪಡಿಸುತ್ತದೆ. 2 ಕರಡಿಗೆಗಳು ಸಾಕು.

20 ತೊಲೆಗಳ ಕರಡಿಗೆಯೊಂದರ ರೂ. 2—8—0
ವಿ. ಪಿ. ಪ್ರತ್ಯೇಕ.

P. C. A. & Co., Ayurvedic Samaj,
Peridepi, Nellore Dt.

ಮೈಸೂರು ಅಗರಬತ್ತಿ

ನಮೂನೆ	ಶೇರಿಗೆ ಕಿಮ್ಮತ್ತು
ಅಂಬರ ಬತ್ತಿ	೨ ರೂ.
ಜವ್ವಾಜಿ ಬತ್ತಿ	೪ ರೂ.
ಕಸ್ತೂರಿ ಬತ್ತಿ	೩ ರೂ.
ಸುಗಂಧ ಧೂಪ	೨ ರೂ.

ಆಂಗ್ಲೋ-ಇಂಡಿಯನ್ ಟ್ರೇಡಿಂಗ ಕಂಪೆನಿ,
12, 30 10. ಮಲ್ಲೇಶ್ವರಮ್, ಬೆಂಗಳೂರು.

ಸೂತಿಕಾವಾಯು ಅಪಸ್ಮಾರ
10 ನಿಮಿಷಗಳಲ್ಲಿ ನಿಲ್ಲಿಸಲ್ಪಡುವದು,
"ವಾಯುಮುಕ್ತಾ"

ಈ ಔಷಧವು ದೇಶೀಯ ಮೂಲಿಕೆಗಳಿಂದ ತಯಾರಿಸಲ್ಪಡುತ್ತದೆ. ಕಳೆದ 30 ವರ್ಷಗಳಿಂದ ಮಾನವರ ಸೇವೆಯನ್ನು ಮಾಡುತ್ತಿದೆ. ಅನಾರೋಗ್ಯದಲ್ಲಿರುವ ಅಥವಾ ಗರ್ಭಿಣಿಯರಾಗಿರುವ ಸಾವಿರಾರು ಸ್ತ್ರೀಯರು ಈ ಭಯಂಕರ ವ್ಯಾಧಿಯಿಂದ ಮುಕ್ತರಾಗಿದ್ದಾರೆ. ಹಿಸ್ಟೀರಿಯಾವನ್ನು ಭೂತ ಯಾ ಪ್ರೇತಬಾಧೆಯೆಂದು ತಿಳಿಯತಕ್ಕುದಲ್ಲ. ಅದು ಇತರ ರೋಗಗಳಂತೆಯೇ ದೇಹಸಂಬಂಧವಾದ ರೋಗವಾಗಿರುತ್ತದೆ. ಬಡಬಡಿಕೆ, ಕೊಗು, ಹೊರಳಾಟ, ಬಲಹೀನತೆ, ತಲೆತಿರುಗುವಿಕೆ, ಶೀತ, ಎಡೆಬಿಡದ ಅಪಸ್ಮಾರ, ಹುಚ್ಚು ತನ ಮೊದಲಾದ ಪೇಚಾಟಗಳು 24 ತಾಸುಗಳಲ್ಲಿ ನಿಲ್ಲುವುವು. ಸ್ಮೃತಿಯಿಲ್ಲದಿರುವಿಕೆ, ಅಪಸ್ಮಾರ, ಒಡ್ಡಾಟ 10 ನಿಮಿಷಗಳಲ್ಲಿ ಮಾಯವಾಗುತ್ತವೆ. ಮತ್ತು ರೋಗಿಯು ಶಾಂತಿಯನ್ನೂ, ತ್ರಾಣವನ್ನೂ ಪಡೆಯುತ್ತಾನೆ. 10 ದಿನಗಳ ಔಷಧಿಗೆ ರೂ. 2/- ಮತ್ತು 30 ದಿನಗಳ ಔಷಧಕ್ಕೆ ರೂ. 5/-. ಪೋಸ್ಟೇಜು ಅಲಾಯಿದಾ.

C. L. Namawala,
Palace Road, BARODA.
12, 15-1.

500 ರೂಪಾಯಿಗಳ ಬಹುಮಾನ.
ಬಿಳೇ ಕುಷ್ಮಕ್ಕೆ (ತೊನ್ನಿಗೆ)
ಅತ್ಯಾಶ್ಚರ್ಯಕರವಾದ ಔಷಧಿ.

ಈ ವನಸ್ಪತಿಯ ಕೆಲವು ದಿನಗಳ ಪ್ರಯೋಗದಿಂದಲೇ, ಬಿಳೇ ಕುಷ್ಮವು (ತೊನ್ನು) ನಿಮೂಲವಾಗಿ ಸಂಪೂರ್ಣ ಗುಣವಾಗುತ್ತದೆ. ಬರೇ ಕೆಲವು ಸಲ ಮಾತ್ರ ಉಪಯೋಗಿಸಿ, ಈ ಭಯಂ

PROSPECTUS.

A copy of this Prospectus has been filed with the Assistant Registrar of Joint Stock Companies, Mangalore.

MANGALORE AUTOMOBILES LIMITED.

(INCORPORATED UNDER THE INDIAN COMPANIES ACT, 1913.)

Authorised Capital Rs. 1,00,000

Divided into
10,000 shares of Rupees Ten each.

Present issue 5,000 shares of Rupees Ten each.

Payable on application Rs. 10/- full amount of share.

DIRECTORS:-

1. U. MANJAPPA Esq.,
   Retired Deputy Collector & President, Special Bench of Magistrates, Chairman,
2. G. SOMASHEKAR RAO Esq.,
   B. A., B. L.,
   Vakil,
3. T. R. GANAPATHY IYER Esq.,
   Director, Messrs. Rane (Madras) Ltd., Landlord, etc.,
4. B. VITTAL RAU Esq.,
   Managing Director, The Popular Insurance Co. Ltd.,
5. K. R. GURU Esq.,
   Managing Director, The Pie Money Bank Ltd.,
6. T. B. JOGI Esq.,
   (Ex-Officio) Merchant,
7. U. V. UPADYA Esq.,
   (Ex-Officio) Automobile-Engineer.

AUDITOR:-

P. M. HEGDE Esq., G. D. A., R. A.

BANKERS:-

THE JAYA LAXMI BANK LTD.

REGISTERED OFFICE:-

MANGALORE.

PROSPECTUS.

Objects:-

The several objects and purposes for which this company is floated are set out in the Memorandum of Association.

The main objects are as under:—

1. **City Motor Bus Service.** Mangalore is an extensive town thickly populated and the public feel the necessity of cheap conveyance. A city service will afford the public most up-to-date and modern conveyance with all facilities and will yield a good return to the company.

2. To acquire and take over as a going concern the business of Messrs. National Automobiles, a private partnership company, with a view to expand and improve the motor trade by direct import of motor parts and accessories also to work up motor car and truck agencies.

3. Start a well equipped and up-to-date repair shop, which will serve all motor cars, lorries, buses, private and public, calculated to bring good returns.

The company has purchased the goodwill of National Automobiles Mangalore together with all the rights, privileges and benefits of contracts. The assets are valued strictly at cost price under certificate by the Auditor and the purchase consideration is fixed at Rs. 7500/— (including goodwill valued at Rs. 2500/—) which is payable by the allotment of 425 fully paid up shares of Rs. 10/— each and Rs. 3250/— in cash. The proceeds of the shares now offered will be sufficient for all the company's present requirements.

Management:-

The company has appointed Mr. T. B. Jogi as Manager, Mr. U. V. Upadya as Engineer and Mr. A. R. Chanillo as Accountant under the control of Directors as per contracts for the Management of the company.

The Directors shall be at liberty to engage agents to canvass shares and such agents shall be paid a commission on the value of shares canvassed by them at a rate not exceeding 5 per cent.

Preliminary Expenses:-

The company shall have to pay preliminary expenses in connection with the formation and floating of the company up to the time of commencement of business, exclusive of the commission payable to the canvassers of shares and the amount estimated thereof is Rs. 750/-.

Contracts:-

The company is under contract dated 1-1-'37 to take over the National Automobiles. Another contract of service has also been entered into with Mr. U. V. Upadya, Automobile Engineer, and the contracts are open to inspection at the Company's Office. Under the first Messrs. T. B. Jogi and A. R. Chanillo are appointed as Manager and Accountant for a period of 15 years on a remuneration of not less than Rs. 75/— monthly and 6¼% on the nett profits and Rs. 65/— monthly and 2% of nett profits respectively. As per the second Mr. U. V. Upadya is appointed as Automobile Engineer and Technical Advisor of the Company on a salary of Rs. 100/- monthly and 2% on the nett profits.

Directors' Qualification & Remuneration:-

The Articles of Association of the company provide that the qualification of a Director is the holding of 50 shares in the company registered in his name except in the case of the first Directors, each of whom shall however hold in his own right not less than five unencumbered shares. The remuneration of every Director (including the ex-officio Directors) shall be Rs. 5/— or such other sum as the Directors may from time to time fix for every meeting of the Board or of a committee of the Board attended by him. This is exclusive of any travelling allowance that may be fixed by the Directors.

Minimum Subscription:-

The minimum subscription upon which the company will proceed to allotment is 250 shares of the nominal value of Rs. 2500/—.

Application for Shares:-

Application for shares shall be made upon the prescribed form and sent either directly to the company or to their Bankers together with the remittance of the amount of deposit.

Where no allotment is made, the deposit will be returned in full and where the number of shares allotted is less than the number of shares applied for, then the balance of deposit will be returned.

Copies of the Prospectus and forms of application can be obtained at the office of the company.

The Memorandum and Articles of Association of the company can be inspected at any time during business hours at the Registered Office of the company. This prospectus is issued subject to the provisions contained in the Memorandum of Association of the company.

Share certificates will be completed and ready for delivery within three months after the allotment of shares.

Dated 11—1—'37
MANGALORE

1. *Sd.* U. MANJAPPA
2. ,, G. SOMASHEKAR RAO
3. ,, T. R. GANAPATHY IYER
4. ,, B. VITTAL RAU
5. ,, K. R. GURU
6. ,, T. B. JOGI
7. ,, U. V. UPADYA.

ಅನಾಥೋದ್ಧಾರ.

ಮಾಧುರಿಕಾ.

(ಶ್ರೀ. ಕೆ. ಎಲ್. ಎನ್. ಉಪಾಧ್ಯಾಯ.)

(ಮುಂದುವರಿದುದು.)

೬.

ಬಾಲಕಿ:—ಅಮ್ಮಾ, ಮಧುಕರವು ಮನ ಮೋಹಕವಾದ ಅನೇಕ ಪುಷ್ಪಗಳಿರುವಾಗ್ಗೆ ನಿನ್ನ ವದನವನ್ನೇ ಅದೇಕೆ ಸುತ್ತುತ್ತಿರುವುದು?

ತಾಯಿ:-(ಹಸ್ತಗಳಿಂದ ಝೇಂಕಾರದಿಂ ದೊಡಗೂಡಿ ಮುಖಮಂಡಲವನ್ನಾವರಿಸಿರುವ ಭ್ರಮರವನ್ನು ನಿವಾರಿಸಿ) ಅದೇಕೆಂದು ನಾ ನ್ಹೇಗೆ ಪೇಳಲಿ?

ಬಾಲಕಿ:—ಅಮ್ಮಾ, ಪುಷ್ಪಗಳಿಂದ ಸಂಗ್ರಹೀತವಾಗುವದಕ್ಕಿಂತ ಮಿಗಿಲಾಗಿ ನಿನ್ನ ಮುಖಾರವಿಂದದಿಂದ ಮಧುವು ಸಂಗ್ರಹೀತವಾಗುವದೇ?

ತಾಯಿ:—ನಮ್ಮಲ್ಲಿ ಮಧುವಾದರೂ ಎಲ್ಲಿರುವದು ಸ್ವರ್ಣೀ?

ಪುಷ್ಪವಾಟಿಕೆಯಲ್ಲಿ ಗೂಢನಾಗಿ ಪ್ರೇಯೋವಚನಗಳನ್ನಾಲಿಸುವ ರವೀಂದ್ರನು—(ಸ್ವಗತ) ಛಿಧರಾನ್ಮೃತಮಧುವಿಗಿಂತಲೂ ಜಡ ಪುಷ್ಪಗಳಿಂದ ದೊರಕುವ ಮಧುವು ಮಿಗಿಲೆನಿಸುವದೇ?

ಸ್ವರ್ಣೀ:-ಅದಾದರೂ ನನಗೆ ತಿಳಿಯದು. ಅಮ್ಮಾ ಎಷ್ಟು ನಿವಾರಿಸಿದರೂ ಈ ಮಧುಕರನು ನಿನ್ನ ಮುಖವನ್ನು ಬಿಡಲೊಲ್ಲನು. ಮಧುಕರ,—ನೀಚ! ಈ ಕಾಮುಕವೃತ್ತಿಯನ್ನು ಯೋಗಿಗಳೊಡನೆ ಅರುಹಿ ತಕ್ಕ ಶಾಸನವನ್ನು ಮಾಡಿಸುವೆನು. (ಎಂದು ನೆಗಾಡುವಳು)

ರವಿ:—(ಸ್ವಗತ) ಈ ಬಾಲಕಿಯ ದರ್ಶನಮಾತ್ರದಿಂದ ನನ್ನಲ್ಲಿ ಅಕಲ್ಪಿತವಾದ ಪ್ರೇಮವು ಉತ್ಪನ್ನವಾಗುವದು. ಹ್ಯಾ ಔರಸ ಪುತ್ರಿಯಲ್ಲಿ ತಲೆದೋರುವ ಪ್ರೀತಿವಿಶ್ವಾಸಗಳು ಈ ಬಾಲಕಿಯ ದರ್ಶನಮಾತ್ರದಿಂದುಂಟಾಗುವದು. ಅಥವಾ ಸ್ವಂತ ಪುತ್ರರ ತೊದಲ್ನುಡಿಗಳನ್ನು ಸರ್ವಥಾ ಶ್ರವಣಮಾಡದ ನಮ್ಮಂತಹ ದುರ್ಭಾಗಿಗಳ ಮೋಹವು ಅಲ್ಲಲ್ಲಿ ಪಸರಿಸಿಕೊಂಡಿರುವದು ಸಹಜವೇ? (ಎಂದು ಅಶ್ರುಗಳನ್ನು ಸುರಿಸುವನು.)

ಸ್ವರ್ಣಲತೆ:—ಅಮ್ಮಾ, ಸೂರ್ಯನು ಅಸ್ತಂಗತನಾದನು. ಅಂತೆಯೇ ಉದಯಾಚಲದಲ್ಲಿ ಸುಧಾಂಶುವು ಉದಯಹೊಂದಿದನು. ಸುಧಾಂಶುವಿನ ಸುಧಾಮಯ ಕಿರಣಗಳಿಂದಾವೃತವಾದ ಮುಂದಮಾರುತನಿಂದ ಈಷನ್ನಮಿತೋನ್ನಮಿತಗಳಾದ ವೃಕ್ಷಲತೆಗಳು ನಮ್ಮನ್ನು ಆಹ್ವಾನಿಸುವಂತೆ ತೋರುತ್ತೆ. ಆದುದರಿಂದ ಜಲಸೇಚನವನ್ನು ಮಾಡೋಣವೇ?

ಮಾತೃ:—ಉದಕುಂಭಗಳನ್ನು ತಾ, ಜಲಸೇಚನವನ್ನು ಮಾಡೋಣ. (ಇಬ್ಬರೂ ಜಲಸೇಚನವನ್ನು ಮಾಡುವರು.)

ಮಾತೃ:—ಸ್ವರ್ಣೀ, ಅದೇನಮ್ಮಾ ತಟಸ್ಥಳಾಗಿರುವಿ?

ಸ್ವರ್ಣೀ:—ಈ ಲತೆಯು ಅದೆಷ್ಟು ಪ್ರೌಢವಾಗಿ ಆ ವೃಕ್ಷವನ್ನಾಲಂಗಿಸಿರುವದು!

ಮಾತೃ:—ಅಂತೆಯೇ ನೀನೂ ಒಂದು ದಿನ ಪತಿಯನ್ನು ಪ್ರೌಢವಾಗಿ ಆಲಿಂಗಿಸುವಿಯಂತೆ. ಅದಕ್ಕಾಗಿ ಮತ್ಸರಪಡಬೇಡ.

ಸ್ವರ್ಣೀ:—(ತುಸು ಕೋಪದಿಂದ) ನಿನ್ನ ಮನೋಗತವನ್ನು ಪ್ರಕಟಿಸಿದಂತಾಯಿತು; ಇದನ್ನು ಯೋಗೀಶರೊಡನೆ ಹೇಳದಿರುವೆನೇ?

ಮಾತೃ:—ಏನೇ ಮುಗ್ಧೆ! ಈ ಹಾಸ್ಯಮಯವಾದ ವಚನಗಳನ್ನು ಯೋಗೀಶರೊಡನೆ ಬಿಳಿಸಬೇಡ ಕಂಡೆಯಾ?

ಸ್ವರ್ಣೀ:—ಅಮ್ಮಾ, ತಮಾಷೆಗಾಗಿ ಹೇಳಿದೆನಷ್ಟೇ ಹೊರತು ಪಾರಮಾರ್ಥಿಕವಾಗಿ ಅಲ್ಲ. ಅಮ್ಮಾ—ನಿನ್ನ ಕಷ್ಟಸಹಿಷ್ಣುತೆಯು ನಮಗೆಲ್ಲರಿಗೂ ಆದರ್ಶಕವಾಗಿದೆ. ಚಿದಾನಂದರು ಮೊನ್ನೆ ಕಷ್ಟಸಹಿಷ್ಣುತೆ, ಆಪತ್ಕಾಲದಲ್ಲಿಯೂ ಧೈರ್ಯ, ಆತ್ಮಪರಿಶುದ್ಧತೆ ಇವುಗಳಿಗೆ ಮಾಧುರಿಕಾದೇವಿಯನ್ನು ಮೇಲ್ಪಂಕ್ತಿಗಾಗಿ ಇಟ್ಟುಕೊಳ್ಳಿರಿ ಎಂದರು. ಅದನ್ನು ಕೇಳಿದೊಡನೆ ನನ್ನ ಕಣ್ಣುಗಳೆರಡೂ ಅಶ್ರುಗಳಿಂದ ಉಬ್ಬಿದವು.

ರವಿ:—(ಸ್ವಗತ) ಅಹೋ, ಸಮಾನನಾಮದಿಂದ ವಂಚಿತನಾದೆನು. ನನ್ನ ಸಹಧರ್ಮಿಣಿ ಮಾಧುರಿಕೆಯು ಈಕೆಯೇ? ಅಥವಾ ಮಾಧುರಿಕೆಯೆಂಬ ನಾಮಧೇಯ ಮಾತ್ರವು ನನ್ನ ಪ್ರೇಯಸಿ ಎಂಬ ವಿಷಯದಲ್ಲಿ ದೃಢಕಾರಿಯಾಗುವುದಿಲ್ಲ.

ಮಾಧು:—'ಸ್ವರ್ಣೀ! ನನ್ನ ಹೃದಯವು ಇಂದೀಗೂ ಪತಿದೇವನಿಗಾಗಿ ಹಾತೊರೆಯುತ್ತಿರುವುದು. ಪ್ರಿಯಪತಿಯ ಚರಣತಲದಲ್ಲಿ ಅರ್ಪಿಸಲ್ಪಟ್ಟ ಪ್ರೇಮಪುಷ್ಪಮಾಲಿಕೆಯು ಇನ್ನೂ ಬಾಡಿಲ್ಲಿಲ್ಲ. ರವೀಂದ್ರನೆಂಬ ನಾಮ್ನಃ ಶ್ರವಣ ಮಾತ್ರದಿಂದ ಶರೀರವು ಭಕ್ತಿರಸದಿಂದ ತುಂಬುವದು. ಮೊನ್ನೆ ಯೋಗಿವರ್ಯರು ಸೇವಾಸಮಯದಲ್ಲಿ ನಿನ್ನ ದುಃಖಪರಿಹಾರವು ಕೆಲವೇ ದಿನಗಳಲ್ಲಾಗಲಿದೆಯೆಂದು ಆಜ್ಞಾಪಿಸಿರುವರು. ಆದರೆ ಆಗುವ ಬಗೆಯೆಂತೋ ತಿಳಿಯಲಾರೆ!' ಎಂದು ಅಶ್ರುಬಿಂದುಗಳನ್ನು ಸುರಿಸುವಳು. ಸ್ವರ್ಣೀಯುವಚರಿಸುವಳು.

ಸ್ವರ್ಣೀ:—ಸುಮ್ಮನೆ ದುಃಖಪಡಬೇಡ. ಅಪ್ಪಾಜಿಯವರ ವಚನವೆಂದೂ ಮಿಥ್ಯವಾಗಲಾರದು. ಪರಮಾತ್ಮನ ಕೃಪಾದೃಷ್ಟಿಯು ಅದೆಂದಿಗೂ ನಮ್ಮೆಡೆಗೆ ಬೀರದಿರಲಾರದು. ಅಮ್ಮಾ, ಅಗೋ, ಮುಗ್ಧಹರಿಣವೊಂದು ನಿನ್ನ ದುಃಖವನ್ನು ನೋಡಿ ಸಹಿಸಲಾರದೆ ಸ್ತಬ್ಧವಾಗಿದೆ. 'ಸ್ನಿಗ್ಧಜನಸಂವಿಭಕ್ತಂ ಹಿ ದುಃಖಂ ಸಹ್ಯವೇದನಂ ಭವತಿ' ಎಂಬ ಕಾಳಿದಾಸೋಕ್ತಿಯು ಸವಿಯನ್ನದು ಬಲ್ಲುದೇ?

ಮಾಧು:—ಅದು ಅದೇಕೋ ಸ್ತಬ್ಧವಾಗಿದೆ. ನೀನು ಸುಮ್ಮನೆ ನಿನ್ನ ಪ್ರತಿಭಾಶಕ್ತಿಗೆ ತಕ್ಕಂತೆ ಉತ್ಪ್ರೇಕ್ಷಿಸುವಿ! (ಸ್ವಗತ) ಇಷ್ಟು ಬಾಲ್ಯಪ್ರಾಯದಲ್ಲಿ ಇಂತಹ ಪ್ರತಿಭಾಶಕ್ತಿಯು ಗುರುಪೂಜ್ಯರ ಕೃಪೆಯೊಂದಲ್ಲದೆ ಬೇರಿಲ್ಲ.

ಸ್ವರ್ಣೀ:—ಅಮ್ಮಾ, ಆಪನ್ನಸತ್ವೆಯಾದ ಈ ಹರಿಣವು ನಮ್ಮ ಆಶ್ರಮದಲ್ಲಿ ಶೋಭಿಸಿದರೆ ಅದೆಷ್ಟು ಸಂತೋಷವಾಗುತ್ತಿತ್ತು! ನನಗೋಸುಗ ನೀನು ಅದನ್ನು ಹಿಡಿದು ತರುವೆಯಾ?

ಮಾಧು:—ಶರವೇಗದಿಂದ ಓಡುವ ಹರಿಣದ ಬೇಟೆಯು ನಮ್ಮಂತಹ ಅಬಲೆಯರಿಗೆ ಸಾಧ್ಯವೇ?

ಸ್ವರ್ಣೀ:—(ಪರಿಹಾಸ್ಯದಿಂದ) ಅಂಬಿನ ವೇಗದಿಂದ ಹಿಂಬಾಲಿಸಿದರಾಯಿತು.

ಮಾಧು:—'ಅದು ನಮ್ಮಿಂದ ಆಗುವ ಕಾರ್ಯವಲ್ಲ. (ಆಕಾಶದ ಕಡೆಗೆ ನೋಡಿ) ಓಹೋ, ಚಂದ್ರೋದಯವಾಗಿ ಅದೆಷ್ಟು ಸಮಯವಾಯಿತು! ನಮ್ಮ ಶುಷ್ಕ ಸರಸಸಲ್ಲಾಪಗಳಿಂದ ಸಮಯವನ್ನೇ ತಿಳಿಯದವಳಾದೆನು. ಗುರುವರ್ಯರು ಈಗ ತಾನೇ ಧ್ಯಾನಾವಸ್ಥೆಯಿಂದ ವಿಮುಕ್ತರಾಗಿರಬಹುದು. ಈಗ ನಾನು ರಾತ್ರಿಪೂಜೆಗಾಗಿ ಪುಷ್ಪ ಸಂಗ್ರಹಮಾಡಿಕೊಂಡು ತಯಾರಾಗದೆ ಇದ್ದರೆ ಪ್ರಮಾದವಾದೀತು.' (ಎಂದು ಆಶ್ರಮವನ್ನು ಸೇರುವಳು.) ಸ್ವರ್ಣಲತೆಯ ಆಶೆಯು ನಿರಾಶೆಯಾಗಲಿಲ್ಲ. ಅವಳ ಲಕ್ಷ್ಯವು ಹರಿಣದಿಂದ ತಪ್ಪಿ ಹೋಗಲಿಲ್ಲ. ಬೆಳದಿಂಗಳಿನ ಪ್ರಕಾಶದಿಂದ ಥಳಥಳಿಸುವ ಆ ಧವಳ ಚುಕ್ಕೆಗಳೂ, ಅದಾರು ತನ್ನನ್ನೇ ಹಿಡಿದರೋ ಎಂಬ ಭಯದಿಂದ ಚಂಚಲತರವಾದ ಕಣ್ಣುಗಳೆರಡೂ, ಭೀತಿಯಿಂದ ತಟಸ್ಥವಾದ ಶ್ರವಣದ್ವಂದ್ವವೂ ಸ್ವರ್ಣಲತೆಯ ಆಶೆಯನ್ನು ಮತ್ತೂ ಹೆಚ್ಚಿಸಿದವು. ಅವಳು ಆಕಾಶದ ಕಡೆಗೆ ತಿರುಗಿ 'ವನದೇವಿಯೇ ನೀನಾದರೂ ನನ್ನೊಳು ದಯೆಯಿಟ್ಟು ಹರಿಣಾಕ್ಷಿಯರ ಪ್ರೀತಿವಿಶ್ವಾಸಗಳಿಗೆ ಪಾತ್ರವಾದ ಈ ಹರಿಣವನ್ನು ಬಿಟ್ಟುಕೊಡುವಿಯಾ?' ಎಂದು ನಸುನಗುತ್ತ ಕರುಣಾರ್ದ್ರಸ್ವರದಿಂದ ಬಿನ್ನವಿಸಿದಳು. ಕೂಡಲೇ ವನದೇವಿಯ ಪರಮಪ್ರಸಾದವೋ ಎಂಬಂತೆ ಓರ್ವ ತರುಣನು ಅಶ್ವಾರೂಢನಾಗಿ ಆ ಹರಿಣವನ್ನು ಹಿಂಬಾಲಿಸಿ ಸ್ವರ್ಣಲತೆಗೆ ಪ್ರೀತಿವಿಶ್ವಾಸಗಳಿಂದ ಒಪ್ಪಿಸಿದನು. ಸ್ವರ್ಣಲತೆಯು ಆಶ್ಚರ್ಯಚಕಿತೆಯಾದಳು. ಈ ಅಪರಿಚಿತ ವ್ಯಕ್ತಿಯ ದರ್ಶನದಿಂದ ಅವಳ ಎದೆಯು ಧಕ್ ಧಕ್ ಎಂದು ಹಾರಲಾರಂಭಿಸಿತು. ಕೈಕಾಲುಗಳು ಥರಥರನೆ ನಡುಗಿದವು. ಅವಳು ಅವಾಕ್ಕಾಗಿ ಆತನನ್ನೇ ನೋಡಲಾರಂಭಿಸಿದಳು. ಕೂಡಲೇ-ಅದೇಕೋ ನಾವರಿಯೆವು!-ಸಹಜವಾದ ಅಕಲ್ಪಿತವಾದ ಪ್ರೇಮವು ಅವಳಲ್ಲಿ ಮೂಡಿತು. ಅವಳು ತುಸು ಧೈರ್ಯಗೊಂಡು 'ಆರ್ಯ! ತಮ್ಮ ಅನಿರೀಕ್ಷಿತೋಪಕಾರಕ್ಕೆ ಚಿರಋಣಿಯಾಗಿರುವೆನು.'

ಇದೀಗ ಇನ್ನೊಂದು ಪ್ರಭಾತ ಚಿತ್ರ!

ಇದೀಗ ನೂರಾರು ಮಂದಿ ನೋಡಿದವರೇ ಪುನಃ ಪುನಃ ಬಂದು ನೋಡುತ್ತಿರುವರು.

ರಘುನಾಥ್ ರಾವ್.

ಮಹಾತ್ಮಾ ಚಿತ್ರವನ್ನು ನೋಡಿದವರಿಗೆ ಪ್ರಭಾತ ಚಿತ್ರಗಳ ಶ್ರೇಷ್ಠತೆ ತಿಳಿದಿರಲು ಬಣ್ಣನೆ ಬೇಕಿಲ್ಲ.

ಪ್ರಭಾತ್ ಕಂಪೆನಿಯ ಸುಪ್ರಖ್ಯಾತ ನಟನಟಿಯರು.

ಶ್ರೀ ಚಿತ್ರಾ ಟಾಕೀಸ್, ಮಂಗಳೂರು

ಇದೀಗ ತಾರೀಕು 14ನೇ ಜನವರಿ 1937ರಿಂದ ಪ್ರದರ್ಶಿಸಲ್ಪಡುತ್ತಿದೆ.

ವಿದ್ಯಾದಾನಕ್ಕೆ ಪ್ರೋತ್ಸಾಹಿಸಿರಿ!

ಹಿಂದೂ ವಿದ್ಯಾದಾಯಿನೀ ಸಂಘದವರು ತಮ್ಮ ಆಡಳ್ತೆಯೊಳಗಿರುವ

'ಇಡ್ಯ ವಿದ್ಯಾದಾಯಿನೀ ಶಾಲೆ'

ಮತ್ತು ಹೊಸದಾಗಿ ಸ್ಥಾಪಿಸಲಿರುವ

'ಅನಾಥಾಲಯ'

ಇವುಗಳ ಸಹಾಯಾರ್ಥವಾಗಿ ಏರ್ಪಡಿಸಿರುವ

'ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ'

ತೆಗೆಯುವ ತಾರೀಕು: 17—1—1937. ಸೋಡ್ತಿಯ ಮೊಬಲಗು ರೂ. 50,000

1ನೇ ಇನಾಂ ರೂ. 8000. 2ನೇ ಇನಾಂ ರೂ. 2000.

ಜುಮ್ಲಾ ಇನಾಂಗಳು 1000. ಇನಾಂಗಳ ಜುಮ್ಲಾ ಮೌಲ್ಯ ರೂ. 20,125.

— ಟಿಕೇಟು 1ರ ನಾಲ್ಕಾಣೆ ಮಾತ್ರ —

20 ಟಿಕೇಟುಗಳಿರುವ 1 ಪುಸ್ತಕದ ಬೆಲೆ ರೂ. 4-0-0, 2 ಪುಸ್ತಕಗಳ ಬೆಲೆ ರೂ. 7-8-0.

ಸ್ಪೆಶಲ್ ಬಹುಮಾನಗಳೂ ಇವೆ.

ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ:—

ಮೆನೇಜರ್, ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ, ಸುರತ್ಕಲ್, (ದ. ಕ.)

ಯುವಕ:—ತಪಸ್ವಿನಿ, ನಿನ್ನ ಅನುಗ್ರಹ ಮಾತ್ರವನ್ನವಲಂಬಿಸಿಕೊಂಡಿರುವ ನನಗೆ ಈ ತೆರನಾದ ಉಪಚಾರವು ಅಧಿಕವಾದಂತೇ!

ಸ್ವರ್ಣಲತೆ:—ಆರ್ಯ! ತಮ್ಮ ಮೃದು ನಡೆನುಡಿಗಳಿಂದ ತುಸು ಧೈರ್ಯಗೊಂಡ ನನ್ನ ಕೆಲ ಪ್ರಶ್ನೆಗಳನ್ನು ಕ್ಷಮಿಸಬೇಕು. ಅದಾವ ಪವಿತ್ರವಾದ ಕುಲವು ತಮ್ಮ ಜನನದಿಂದ ಅಲಂಕರಿಸಲ್ಪಟ್ಟಿತು? ಅದಾವ ದೇಶವು ತಮ್ಮ ವಿರಹದಿಂದ ಪರ್ಯುತ್ಸುಕವಾಗಿದೆ? ಅದಾವ ನಾನಾಮಧೇಯವು ತಮ್ಮ ಆಹ್ವಾನಕ್ಕೆ ಯೋಗ್ಯವಾಗಿಯದೆ? ಮಾತ್ರವಲ್ಲ, ಸುಕುಮಾರತರವಾದ ದೇಹವು ವನಸಂಚರಣದಿಂದ ಅದೇಕೆ ಆಯಾಸಿಸಲ್ಪಡುವದು?

ಯುವಕ:—ಸುಜ್ಞೆ! ಅದೇಕೆ ಅಪರಿಚಿತರಂತೆ ಅನೇಕ ಪ್ರಶ್ನೆಗಳ ಮೂಲಕ ನನ್ನನ್ನು ವ್ಯಥೆಪಡಿಸುವಿ? ಆದುರ್ಭಾಗಿ ಕಠೋರ ರವೀಂದ್ರನು ನಾನೇ ಎಂದು ತಿಳಿ!

ಸ್ವರ್ಣೀ:—(ಆನಂದೋದ್ವೇಗಗಳಿಂದ) 'ಏನು ರವೀಂದ್ರನೇ! ಹ್ಯಾ ಮಾತೆ, ಇಂದು ಅಪ್ಪಾಜಿಯವರ ಆಜ್ಞೆಯಂತೆ ಬಂಧನಿಮುಕ್ತಳಾದೆ. ತಾತ, ತಾತ! ನನ್ನ ಸಾಹಸಕ್ಕಾಗಿ ಕ್ಷಮಿಸುವೆಯಾ?' (ಎಂದು ಮೂರ್ಛಿತೆಯಾಗುವಳು.) ಚಂದ್ರನ ಶೀತಲಕಿರಣಗಳಿಂದ ಫಕ್ಕನೆ ಲಬ್ಧಸಂಜ್ಞೆಳಾಗಿ ಈ ಸಂದೇಶವನ್ನು ಮಾತೃವಿಗೆ ಅರುಹಲು ಓಡಿಹೋದಳು.

(ವ್ರತಸ್ಥೆಯಾಗಿ ಕೃಶಳಾದ ಮಾಧುರಿಕೆಯು ಪಟ್ಟೆವಸ್ತ್ರವನ್ನು ಧರಿಸಿಕೊಂಡು ಪ್ರವೇಶಿಸುವಳು.)

ರವಿ:—ನನ್ನ ಪಾಪಿಯು ಚಿರವಿರಹವ್ರತವನ್ನು ಧರಿಸಿಕೊಂಡು ಅದೆಷ್ಟು ಕೃಶಳಾಗಿರುವಳು! (ಎಂದು ದುಃಖವಿಸ್ಮಯಾನಂದಗಳಿಂದ ಪ್ರಣಾಮವಂ ಗೈಯುವನು.)

ಮಾಧು:—ಆರ್ಯಪುತ್ರ! ನಮ್ಮಿಬ್ಬರ ಪುರಾಕೃತವೂ ಸಮ್ಮಿಳಿತವಾಗಿ ನಡೆದ ಅಪರಾಧಕ್ಕೆ ತಾವೇ ಯಾಕೆ ಶೋಕಿಸಬೇಕು? ಅಂತ್ಯದಲ್ಲಾದರೂ ತಮ್ಮ ಯೋಗವು ಪಾಪೀಯಸಿಯ ಭಾಗ್ಯವೆನ್ನಬೇಕಲ್ಲವೇ? ಅಥವಾ ಚಂದ್ರಾಸ್ತಮನಕಾಲದಲ್ಲಿ ರೋಹಿಣೀಯೋಗವು ಪ್ರಶಸ್ತವಾಗಿರುವದಲ್ಲವೇ? ಅದೃಷ್ಟಚಕ್ರವೂ ಕಾಲಚಕ್ರವೂ ಸಮ್ಮುಖವಾದೊಡನೆ ಇಂತಹ ಅಸಂಭವನೀಯ ಸಂಘಟನೆಗಳು ಬಂದೊದಗುವವು. ಇರಲಿ. ಪ್ರಿಯಾ, ಗುರುವರ್ಯರ ಚರಣದರ್ಶನವನ್ನು ಮಾಡೋಣವೇ?

ರವಿ:—ನನ್ನ ಅಪರಾಧಕ್ಕೆ ನಾನು ನಾಚುವೆನು. ಆದರೂ ಅಪರೋಕ್ಷಜ್ಞಾನಿಗಳಾದ ಅವರಿಗೆ ಪರೋಕ್ಷವಾದುದಾವುದು? (ಎಂದು ಮೂವರೂ ಋಷಿಸವಿಾಪದಲ್ಲಿ ಪ್ರಣಾಮವಮಾಡುವರು.)

ಚಿದಾನಂದ:—ಆಯುಷ್ಮಂತರಾಗಿರಿ. ರವಿ! ಯತ್ಕಿಂಚಿತ್ ಮೋಹದಿಂದ ನಡೆದ ಅಪರಾಧಕ್ಕೆ ಸಂತಾಪಪಡಬೇಡ. ಸಕಲವೂ ಆ ಜಗನ್ನಿಯಾಮಕನ ಮಾಯಾಜಾಲವಲ್ಲದೆ ಬೇರಿಲ್ಲ. ಅದರಲ್ಲಿ ನಾವು ಸಿಲುಕಿರುವೆವು. ಆದರೆ ಅಂತ್ಯದಲ್ಲಾದರೂ ಈ ಯಶಸ್ವಿಯಾದ ಸಂಘಟನೆಗೋಸುಗ ಆ ಈಶನನ್ನೇ ಪ್ರಾರ್ಥಿಸೋಣ. ರವಿ-ಕಾಮಿನಿಯರ ವೃತ್ತಾಂತವನ್ನು ನಾನು ಅರಿಯದೆ ಇಲ್ಲ. ನನ್ನ ಅಪರೋಕ್ಷಜ್ಞಾನಕ್ಕೆ ಅಗೋಚರವಾಗಿರುವದು ಯಾವುದೂ ಇಲ್ಲ. ನಾನು ಈ ಅಂತಿಮಾವಸ್ಥೆಯನ್ನು ಬಲ್ಲೆನು. ಇದನ್ನು ಮಾಧುರಿಕೆಗೆ ಈ ಮೊದಲೇ ತಿಳಿಸಿರುವೆನು. ಇನ್ನು ನನ್ನ ಆಜ್ಞೆಯಂತೆ ಮಾಧುರಿಕೆಯ ಪರಿಶುದ್ಧ ಮೂರ್ತಿಯನ್ನು ಸ್ವೀಕರಿಸು. ಇದರಿಂದ ಎಲ್ಲರಿಗೂ ಶ್ರೇಯಸ್ಸಾಗುವದು.

ರವಿ:—ಗುರುದೇವ—ಆಜ್ಞೆಯನ್ನು ಶಿರಸಾವಹಿಸುವೆನು.

ಇತಿ

ಮುಂಗಳಂ .....ಮುಂಗಳಂ.....ಮುಂಗಳಂ

IMPORTANT NOTICE TO INDIAN PRODUCE SHIPPERS.

Highest Market Prices for Dried Salted Fish, Fish Manure, Coffee, Cardamoms, Scrap Rubber, Dhal, Chillies, Tamarind, Onions, Potatoes, etc. All Indian Produce.

Correspondence invited from those interested, in ENGLISH PREFERRED or in KANARESE.

J. A. EDWIN.DE.SILVA,
21, Wasala Road,
8, 12-1. . . Colombo, CEYLON.

ಹಾಸನದ 28ನೇ ದನಗಳ ಪ್ರದರ್ಶನದ ಮುಕ್ತಾಯೋತ್ಸವದಲ್ಲಿ

ಶ್ರೀಯುತ ದಿವಾನ್ ಬಹದ್ದೂರ್ ಎನ್. ಎನ್. ಅಯ್ಯಂಗಾರ್,

ಮೈಸೂರು ಸೀಮೆಯ ಚೀಫ್ ಇಂಜಿನೀಯರ್ ಮತ್ತು ಸರಕಾರದ ಪಬ್ಲಿಕ್ ವರ್ಕ್ಸ್ ಸೆಕ್ರಿಟರಿಯವರು ಮಾಡಿದ ಭಾಷಣ.

6—1—1937.

ಹಾಸನದ ಪೌರಸಭಾಧ್ಯಕ್ಷರೇ, ಸದಸ್ಯರೇ, ಮಹಿಳೆಯರೇ ಮತ್ತು ಮಹನೀಯರೇ,

ಈ ದಿವಸ ೨ಲನೆಯ ದನಗಳ ಪ್ರದರ್ಶನದ ಬಹುಮಾನ ಕಾರ್ಯನಿರ್ವಾಹಕ್ಕೆ ನನ್ನನ್ನು ಅಧ್ಯಕ್ಷತೆ ವಹಿಸಲು ಆಹ್ವಾನಿಸಿತ್ತಿದ್ದಕ್ಕಾಗಿ ತಮ್ಮಗಳನ್ನು ಹೃತ್ಪೂರ್ವಕವಾಗಿ ವಂದಿಸುತ್ತೇನೆ.

ಈ ಕೆಲಸದ ನಿರ್ವಾಹಕ್ಕೆ ಒಬ್ಬ ಇಂಜಿನೀಯರನ್ನು ಆಹ್ವಾನಿಸುವುದು ಒಂದು ಅಪರೂಪ ವಿಷಯವಾಗಿದೆ. ಆದರೆ ನಮ್ಮ ದೇಶವು ಅಭಿವೃದ್ಧಿಯಾಗಬೇಕಾದರೆ ವ್ಯವಸಾಯಕ್ಕೆ ಇಂಜಿನೀಯರುಗಳ ಸಹಾಯ ಮತ್ತು ಸಲಹೆಗಳು ಅತ್ಯವಶ್ಯಕವಾಗಿರುವದೆಂದು ನಾನು ಸಂಪೂರ್ಣವಾಗಿ ನಂಬಿದ್ದೇನೆ. ನಾನು ಇಂಜಿನೀಯರು ಮಾತ್ರವಲ್ಲದೆ ಲಕ್ಷಾಂತರ ವ್ಯವಸಾಯಗಾರರಂತೆ ಕಷ್ಟಸುಖಗಳನ್ನು ಅನುಭವಿಸುವ ಒಬ್ಬ ವ್ಯವಸಾಯಗಾರ. ಈ ಕಾರಣದಿಂದಲೇ ನನ್ನನ್ನು ಈ ಕಾರ್ಯನಿರ್ವಾಹಕ್ಕೆ ಆಹ್ವಾನಿಸಿರಬಹುದೆಂದು ಊಹಿಸುತ್ತೇನೆ.

ಇಂಡಿಯಾ ದೇಶದ ಮುಕ್ಕಾಲು ಭಾಗ ಪ್ರಜೆಗಳು ವ್ಯವಸಾಯದಿಂದಲೇ ಜೀವಿಸುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಇತರ ದೇಶಗಳ ವ್ಯವಸಾಯದ ರೀತಿಯನ್ನು ಹೋಲಿಸಿದಲ್ಲಿ ನನ್ನ ದೇಶದ ಸ್ಥಿತಿಯು ಬಹಳ ಹಿಂದಾಗಿದೆ. ನನ್ನ ಜವಿಾನಿನ ವರಮಾನವು ಆಧುನಿಕ ವ್ಯವಸಾಯವನ್ನು ಅನುಸರಿಸಿರುವ ಇತರ ದೇಶಗಳ ವರಮಾನದಲ್ಲಿ ಅರ್ಧಕ್ಕೂ ಕಮ್ಮಿಯಾಗಿದೆ. ನನ್ನ ವ್ಯವಸಾಯದ ಸಂಸ್ಥಾಪನೆಯಲ್ಲಿಯೂ ಮತ್ತು ರೀತಿಯಲ್ಲಿಯೂ ಅನೇಕ ನ್ಯೂನತೆಗಳಿವೆ. ಇವುಗಳನ್ನು ಪರಿಹರಿಸಿ ಹೆಚ್ಚು ವರಮಾನವನ್ನು ಪಡೆಯುವದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುವುದು ಮುಖ್ಯ ಕರ್ತವ್ಯವಾಗಿದೆ. ಸಾಗುವಳಿಯಲ್ಲಿರುವ ಅನೇಕ ಭಾಗವು ರೈತರ ಸಣ್ಣ ಸಣ್ಣ ಹಿಡುವಳಿಯಲ್ಲಿರುವುದು ಅನುಕೂಲನೆಂದೇ ಭಾವಿಸಬೇಕು. ಒಳ್ಳೆ ವ್ಯವಸಾಯಕ್ಕೆ ಹೆಚ್ಚಾಗಿ ಜವಿಾನು ಇರಬೇಕೆಂದು ಕೆಲವರು ಅಭಿಪ್ರಾಯಪಡಬಹುದು, ಆದರೆ ಇದು ಅವಶ್ಯಕವಿಲ್ಲ. ಉತ್ತಮವಾದ ವ್ಯವಸಾಯಕ್ಕೆ ಆಳವಾದ ಉಳುವಿಕೆಯೂ, ಭೂಮಿಯ ತನುವೂ ಮತ್ತು ಒಳ್ಳೇ ಗೊಬ್ಬರವೂ ಮುಖ್ಯವಾದವುಗಳು. ಉಳುವುದಕ್ಕೂ ಮತ್ತು ಗೊಬ್ಬರಕ್ಕೂ ಒಳ್ಳೆಯ ದನಗಳು ಅವಶ್ಯಕ. ಹಾಸನದ ಡಿಸ್ಟ್ರಿಕ್ಟು ಅನೇಕ ಕಡೆ ಬೈಲು ಸೀಮೆಯಾಗಿದೆ. ಉತ್ಕೃಷ್ಟವಾದ ರಾಸುಗಳೂ ಇವೆ. ಇಲ್ಲಿಗೆ ನೆರೆದಿರತಕ್ಕ ರಾಸುಗಳೇ ಇದಕ್ಕೆ ಸಾಕ್ಷಿ. ಈ ೨೮ ವರ್ಷಗಳಿಂದ ನಡೆಯುವ ಪರಿತೆಯು ರಾಸುಗಳ ಅಭಿವೃದ್ಧಿಗೆ ಬಹಳ ಸಹಾಯಕವಾಗಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯವೇನೆಂದರೆ:—ಗಾಡಿಗೂ, ವ್ಯವಸಾಯಕ್ಕೂ ಉಪಯೋಗವಾದ ಎತ್ತುಗಳೂ ಮತ್ತು ಹೋರಿಗಳೂ ಸೇರಿರುತ್ತವೆ.

ರೈತರಿಗೆ ವರ್ಷಾದ್ಯಂತವೂ ಖರ್ಚುಗಳಿದ್ದಾಗ್ಯೂ ಸುಗ್ಗೀ ಕಾಲದಲ್ಲಿ ಮಾತ್ರ ವರಮಾನ ಬರುತ್ತದೆ. ಹಣವಿದ್ದಾಗ ಮುಂದಿನ ಯೋಚನೆ ಇಲ್ಲದೆ, ದುರ್ಭಿಕ್ಷಕಾಲಕ್ಕೆ ಹಣವನ್ನು ದಾಸ್ತಾನ ಇಟ್ಟುಕೊಳ್ಳದೆಯೂ, ಮತ್ತು ವರ್ಷಾದ್ಯಂತವೂ ಸಂಸಾರಕ್ಕೆ ಬೇಕಾಗುವ ಹಣವನ್ನು ಇಟ್ಟುಕೊಳ್ಳದೆಯೂ, ಅನೇಕ ವಿಧವಾಗಿ ಶೀಘ್ರದಲ್ಲಿಯೇ ವೆಚ್ಚಮಾಡುವುದು ಸರ್ವೇಸಾಧಾರಣವಾಗಿದೆ. ಇದರ ಫಲಿತಾಂಶವಾಗಿ ರೈತರು ಸಾಲಗಾರರಾಗುತ್ತಾರೆ. ಸಾಲವು ಬೆಳೆಯುತ್ತಾ ಬರುತ್ತದೆ. ವೆಚ್ಚವನ್ನು ವರಮಾನಕ್ಕೆ ವಿಾರದ ಹಾಗೆ ಮಾಡುವುದಕ್ಕೆ ಆಗುವುದಿಲ್ಲ. ತಮ್ಮ ಸಂಸಾರದ ಖರ್ಚನ್ನು ನಡೆಸಿ ಅಸಲು ಬಡ್ಡಿಯನ್ನು ತೀರಿಸುವುದು ಅಸಾಧ್ಯವಾಗುತ್ತದೆ. ತಮ್ಮ ಆದಾಯವನ್ನು ವರ್ಷಾದ್ಯಂತವೂ ಸಮವಾಗಿ ಬರುವ ಹಾಗೆ ಮಾಡುವುದು ಅವಶ್ಯಕ. ಈ ಉದ್ದೇಶವನ್ನು ನೆರವೇರಿಸುವುದಕ್ಕೆ ರಾ[illegible] ಉಪಯೋಗಿಸಬೇಕೆಂಬುದೇ ನನ್ನ ಅಭಿಪ್ರಾಯ. ಎತ್ತು ಹೋರಿಗಳನ್ನು ಬೆಳೆಸಿ ಮಾರಾಟಮಾಡಿ ಆಗಾಗ್ಗೆ ಸ್ವಲ್ಪ ಹಣವನ್ನು ಪಡೆಯುತ್ತಿದ್ದಾರೆ. ಇದರಿಂದ ವಾರ ಅಥವಾ ತಿಂಗಳ ವರಮಾನವನ್ನು ಹೊಂದುವುದಕ್ಕೆ ಸಾಧ್ಯವಿಲ್ಲ. ಈಗ ರೈತರು ಎತ್ತುಗಳಿಗೆ ಕೊಡುತ್ತಿರುವ ಪ್ರೀತಿಕರವಾದ ಗಮನವು ಅಷ್ಟು ಸಹಾಯಕರವಾಗಿಲ್ಲ. ರೈತರಿಗೆ ವರ್ಷಾದ್ಯಂತವೂ ವರಮಾನ ಬರುವ ಹಾಗೆ ಮಾಡಬೇಕಾದರೆ ಈಗ ಎತ್ತುಗಳಿಗೆ ಕೊಡುವಷ್ಟು ಆರೈಕೆಯನ್ನು ಹಸುಗಳಿಗೂ ಕೊಟ್ಟರೆ ಹಾಲು ಉತ್ಪತ್ತಿಯೂ ಹೆಚ್ಚಾಗಿ ತನ್ಮೂಲಕ ವರ್ಷಾದ್ಯಂತವೂ ಆದಾಯ ಬರುವ ಹಾಗೆ ಮಾಡುವುದು ಸಾಧ್ಯವೆಂದು ತೋರಿಬರುತ್ತದೆ.

ಈಗ ಹಸುಗಳು ಕೇವಲ ಬಡವಾಗಿರುವುದು ಎಲ್ಲರಿಗೂ ಕಾಣಬರುತ್ತದೆ. ಸರಿಯಾಗಿ ಆಹಾರವಿಲ್ಲದೆ ಮೂಳೆಚರ್ಮಗಳೇ ಮಾತ್ರವಾಗಿರುವ ದನಗಳನ್ನು ಬೇಸಿಗೆಯಲ್ಲಿ ಎಲ್ಲೆಲ್ಲಿಯೂ ನೋಡಬಹುದು. ಒಳ್ಳೇ ಹಸುಗಳು ದೊಡ್ಡ ಪಟ್ಟಣಗಳ ಸುತ್ತುಮುತ್ತಲು ವಿನಹ ಹಳ್ಳಿಗಾಡಿನಲ್ಲಿ ಅಪೂರ್ವವಾಗಿವೆ. ರೈತರಲ್ಲಿರುವ ಎಲ್ಲಾ ಹಸುಗಳಿಗೂ ಒಂದೇ ವಿಧವಾದ ಪೋಷಣೆಯನ್ನು ಕೊಡಲು ಸಾಧ್ಯವಿಲ್ಲದಿದ್ದರೂ, ಪ್ರತಿಯೊಂದು ಮನೆಯಲ್ಲಿಯೂ ಹೊತ್ತಿಗೆ ಎರಡು ಮೂರು ಸೇರು ಹಾಲು ಕರೆಯುವ ಒಂದೆರಡು ಹಸುಗಳನ್ನು ಕಟ್ಟಿ ಸಾಕುವುದು ಸಾಧ್ಯವು. ಈ ಹಾಲನ್ನು ದುಡ್ಡು ಮಾಡುವುದಕ್ಕೆ ಪ್ರತಿಯೊಂದು ಹಳ್ಳಿಯಲ್ಲಿಯೂ ಅಥವಾ ಕೆಲವು ಹಳ್ಳಿಗಳ ಸಮುದಾಯದ ಮಧ್ಯ ಗ್ರಾಮದಲ್ಲಿಯೂ ಬೆಣ್ಣೆಯನ್ನು ತೆಗೆಯುವ ಯಂತ್ರಗಳನ್ನೂ ಪರಸ್ಪರ ಸಹಾಯ ರೀತಿಯಲ್ಲಿ ಸ್ಥಾಪಿಸಬಹುದು. ಈ ಯಂತ್ರಗಳು ಸುಲಭ ಖರೀದಿಗೆ ದೊರೆಯುತ್ತವೆ. ನೂರಾರು ರೂಪಾಯಿಗಿಂತ ಜಾಸ್ತಿ ತಗಲುವುದಿಲ್ಲ. ಈ ಪ್ರಯತ್ನಕ್ಕೆ ದುಬಾರಿ ಭಂಡವಾಳದ ಅವಶ್ಯಕತೆಯಿಲ್ಲ. ನಷ್ಟವಾಗುವ ಪ್ರಮೇಯವಿಲ್ಲ. ಒಂದು ವೇಳೆ ನಷ್ಟವಾದರೂ ಪ್ರತಿಯೊಬ್ಬ ರೈತನಿಗೂ ಹಂಚಿದರೆ ಬಹಳ ಸ್ವಲ್ಪ ಬೀಳುತ್ತದೆ. ಈ ಯಂತ್ರಗಳನ್ನು ಶಾಸ್ತ್ರರೀತಿಯಾಗಿಯೂ, ಅತ್ಯಂತ ಶುಚಿಯಾಗಿಯೂ ನಡೆಸಬೇಕಾಗುತ್ತದೆ. ಹೀಗೆ ನಡೆಸಬೇಕಾದರೆ ಅಗ್ರಿಕಲ್ಚರಲ್ ಸ್ಕೂಲು ಮತ್ತು ಕಾಲೇಜಿನಲ್ಲಿಯೂ ವಿದ್ಯಾವಂತರಾಗಿ ಕುಶಲತೆಯಲ್ಲಿ ತೇರ್ಗಡೆಯಾದ ಅನೇಕ ಯುವಕರು ದೊರೆಯುತ್ತಾರೆ. ಯಂತ್ರಗಳಿಂದ ತಯಾರಾದ ಬೆಣ್ಣೆಯನ್ನು ಕ್ಷಣವೇ ತುಪ್ಪಮಾಡಿ ಮಾರಾಟಕ್ಕೆ ಕಳುಹಿಸಬಹುದು. ಪಟ್ಟಣಗಳಿಗೆ ತೆಗೆದುಕೊಂಡು ಹೋಗುವ ವರೆಗೂ ಒಳ್ಳೆ ಸ್ಥಿತಿಯಲ್ಲಿರುತ್ತದೆ. ತುಪ್ಪವು ಕೆಡುವ ಪದಾರ್ಥವಲ್ಲ. ಮುಖ್ಯವಾದ ಆಹಾರಪದಾರ್ಥವಾದ್ದರಿಂದ ಇದಕ್ಕೆ ಯಾವಾಗಲೂ ಪಟ್ಟಣಗಳಲ್ಲಿ ಗಿರಾಕಿ ಇರುತ್ತದೆ. ನಮ್ಮ ದೇಶವು ವ್ಯವಸಾಯದೇಶವಾದಾಗ್ಯೂ, ಪಟ್ಟಣಗಳಲ್ಲಿ ಒಳ್ಳೇ ತುಪ್ಪವು ದೊರೆಯದಿರುವುದು ಶೋಚನೀಯಕರವಾದ ವಿಷಯವಾಗಿದೆ. ಹೆಸರಿಗೆ ಮಾತ್ರ ತುಪ್ಪವೆಂಬದಾಗಿ ನಾನಾ ತರಹದ ದುರ್ವಾಸನೆಯುಳ್ಳ ಮಿಶ್ರವಾದ ತುಪ್ಪವು ಮಾರಾಟದಲ್ಲಿದೆ. ಇದೂ ಅಲ್ಲದೆ ಕೃತ್ರಿಮ ತುಪ್ಪವು (Artificial ghee) ಕೂಡಾ ನನ್ನ ದುರದೃಷ್ಟಕ್ಕೆ ಮಾರಾಟವಾಗುತ್ತದೆ.

ಕೆನೇ ಮತ್ತು ಬೆಣ್ಣೆ ತೆಗೆದು ಉಳಿದ ಹಾಲನ್ನು ತಮ್ಮ ಆಹಾರಪದಾರ್ಥಗಳಾಗಿ ಉಪಯೋಗಿಸಬಹುದು. ಇದನ್ನು ಉಪಯೋಗವಿಲ್ಲವೆಂದು ಬಿಸಾಡತಕ್ಕದ್ದಲ್ಲ. ಇದರಲ್ಲಿ ದೇಹಕ್ಕೆ ಪುಷ್ಟಿಕರವಾದ ಪ್ರೋಟೀಡ್ಸ್ ಮತ್ತು ಸಾಲ್ಟ್ಸ್ (Proteids and Salts) ಇರುವುದರಿಂದ ಮನುಷ್ಯರೂ ಮತ್ತು ಪಶುಪ್ರಾಣಿಗಳೂ ಸೇವಿಸಬಹುದು. ಇದಲ್ಲದೆ ಈ ಹಾಲಿನಲ್ಲಿ 'ಕೇಸೀನ್' ಎಂಬ ಪದಾರ್ಥವನ್ನು ತಯಾರುಮಾಡಿ ಕಾಫೀ ಸ್ಪ್ರೇಯಿಂಗ್ (Spraying) ಮುಂತಾದ ಕೆಲಸಗಳಿಗೆ ಉಪಯೋಗಿಸಬಹುದು.

ಈ ಪ್ರದರ್ಶನದ ಸಂಘದ ಸದಸ್ಯರಿಗೆ ಒಂದು ಸಲಹೆಯನ್ನು ಕೊಡಲು ಆಶಿಸುತ್ತೇನೆ. ಈ ಪ್ರದರ್ಶನದಲ್ಲಿ ಕರೆಯುವ ಹಸುವಿನ ಒಂದು ಶಾಖೆಯನ್ನು ಏರ್ಪಾಟುಮಾಡಿ, ಇಲ್ಲಿನ ನಾಡು ಹಸುಗಳಲ್ಲಿಯೇ ಚೆನ್ನಾಗಿ ಹಾಲು ಕೊಡುವ ಹಸುಗಳನ್ನು ಆರಿಸಿ ಅಭಿವೃದ್ಧಿಮಾಡಿದರೆ ನಾಲ್ಕಾರು ವರ್ಷಗಳಲ್ಲಿಯೇ ಹಾಲಿನ ಉತ್ಪತ್ತಿಯನ್ನು ಬಹಳವಾಗಿ ಹೆಚ್ಚಿಸಬಹುದೆಂಬ ನನ್ನ ಸಲಹೆಯನ್ನು ಹಾಸನದ ಮುನಿಸಿಪಲ್ ಕೌನ್ಸಿಲರುಗಳು ಪರ್ಯಾಲೋಚಿಸಿ ಕ್ರಮಗೊಳಿಸುವರೆಂದು ನನ್ನ ಪ್ರತೀಕ್ಷೆ.

ಹಾಲನ್ನು ಬೆಣ್ಣೆ ಮಾಡುವ ಯಂತ್ರಗಳನ್ನು ಬಹಳ ಶುಚಿಯಾಗಿ ಕೆಂದು ಹಿಂದೆಯೇ ಹೇಳಿರುತ್ತೇವೆ. [illegible]ನ್ನು ನಿರ್ಮಲವಾದ ಜಾಗದಲ್ಲಿ ಕ[illegible] ಮತ್ತು ನೀರನ್ನು ಶುಭ್ರವಾದ ಗೊ[illegible] ಬಾನೆಯಲ್ಲಿ ಹಾಕಿ ಗಂಜಲ ಮ[illegible] ಯಾವ ವಿಧದಲ್ಲಿಯೂ ವಿಕ್ಷಿ ವಿಸರ್ಜಿಡುಮಾಡುವುದು ಮುಖ್ಯ ಇದಕ್ಕೆ ಸಿಮೆಂಟನ್ನು ಉಪಯೋಗಿಸು ಹೆಚ್ಚು ಖರ್ಚಿಲ್ಲದೆ ವಿಶೇಷ ಅನುಕೂಲ ಈ ಜಾತ್ರೆಯಲ್ಲಿ ಬೊಂಬಾಯಿ [illegible] ಮಾರ್ಕೆಟಿಂಗ್ ಕಂಪೆನಿಯವರು ಒಂದು ರಿಯ ದನದ ಕೊಟ್ಟಿಗೆಯನ್ನು ಕಟ್ಟಿ[illegible] ನೀವು ನೋಡಬಹುದು.

ಹಿಂದೆ ಹೇಳಿದ ಪ್ರಕಾರ ಬಡವಾ[illegible] ಗಳು ನಮ್ಮಲ್ಲಿ ವಿಶೇಷವಾಗಿವೆ. ಮೈಸೂರು ಪ್ರಾಂತ್ಯದಲ್ಲಿ ಬೇಸಿಗೆಯ ಎರಡು ಮೂರು ತಿಂಗಳು ಸರಿಯಾದ ಮೇವು ಸಿಕ್ಕದೆ ಇರುವುದು ಇದಕ್ಕೆ ಕಾರಣ. ಈ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಸರಕಾರದಲ್ಲಿ ಇ[illegible] ಹುಲ್ಲು ಮತ್ತು ಜೋಳದಕಡ್ಡಿ ಮುಂತಾ[illegible] ಮೇವನ್ನು ಕತ್ತರಿಸಿ, ಅವರವರ ಹೊಲದಲ್ಲಿ ಒಂದು ಗುಂಡಿಯಲ್ಲಿ ಹಾಕಿ ಅದರ ಮೇ[illegible] ಮಣ್ಣು ಮುಚ್ಚಿ ಕಾಪಾಡಿದರೆ ಅಡಮ್ಮ ಬೇಸಿಗೆಯಲ್ಲಿ ಒಳ್ಳೆ ಮೇವಾಗಿ ಉಪಯೋಗಿಸಬಹುದು. ಈ ಮೇವು ದನಕರುಗಳಿಗೆ ರುಚಿಕರವಾಗಿದೆ. ಈ ಸುಲಭವಾದ ಉಪಾಯವನ್ನು ನಮ್ಮ ರೈತರು ಜಾರಿಯಲ್ಲಿ ತರದಿರುವುದು ಆಶ್ಚರ್ಯಕರವಾಗಿದೆ. ಈ ತರಹವಾದ ಮೇವು ದಾಸ್ತಾನ ಮಾಡುವ ರೀತಿಯನ್ನು ಸರಕಾರದ ವ್ಯವಸಾಯದ (Government Agricultural Farm) ಇಲಾಖೆಯಿಂದ ತಿಳಿದ ಆಚರಣೆಗೆ ತರಬಹುದು. ಇನ್ನೊಂದು ಮುಖ್ಯವಾದ ವಿಷಯವೇನೆಂದರೆ ದನದ ಗೊಬ್ಬರದಲ್ಲಿ ಸಸ್ಯಪ್ರಾಣಿಕ್ಕೆ ಬಹಳ ಉಪಯೋಗವಾದ [illegible] ಟ್ರೊಜಿನ್ ಫಾಸ್ಫೇಟು, ಪೋಟಾಷ್ ಹಮಿಸ್ [illegible] ಮುಂತಾದ ಪದಾರ್ಥಗಳು ಇರುತ್ತವೆ. ಜೀರಿಣ ಮಾಡಿ ಸೌದೆಗೆ ಬದಲಾಗಿ ಸುಟ್ಟು ಸಪ್ಪ ಹೊಂದುತ್ತಿದ್ದಾರೆ. ಇದನ್ನು ನಿಲ್ಲಿಸಿ ಗೊಬ್ಬರವನ್ನು ಭೂಮಿಗೆ ಹಾಕುವ ಹಾಗೆ ಮಾಡಬೇಕು. ಒಲೆಗೆ ಮಲೆನಾಡಿನಲ್ಲಿ ಹೇರಳವಾಗಿರುವ ಮರದ ಇದ್ದಿಲನ್ನು ಉಪಯೋಗಿಸಬಹುದು. ಮತ್ತು ಪ್ರತಿ ಹಳ್ಳಿಯಲ್ಲಿಯೂ 'ಕಂಪೋಸ್ಟ್' ಗೊಬ್ಬರವನ್ನು ಮಾಡಬಹುದು, ಹಳೇ ಹಸ

(೬ನೇ ಪುಟ ನೋಡಿ)

PHILATELIE ORIENT, P. O. BOX 943, BOMBAY.

Packets of Foreign Stamps for Collections,

All stamps genuine & different.

—FRENCH COLONIES.—

25	Algeria 8 as	10	Guinea 6 as	20	Morocco 8 as	10	Senegal 3 as
10	Cameroons 3 as	10	Guyane 3 as	10	Niger 3½as	10	Somali Coast 4½as
10	Cilicia 10 as	10	Indian Settlements 7 as	10	New Caledonia 3 as	10	Sudan 3 as
10	Congo 3 as	15	Indo-China 4 as	10	Oceania 5 as	50	Syria 1—14 as
10	Dahomey 4¼as	25	Indo-China 10 as	10	Oubangui-Chari 5 as	10	Tchad 3½as
10	Gaboon 3 as	10	Ivory Coast 3½as	10	Reunion 3½as	10	Togo 3 as
50	Lebanon 1—14 as	10	Madagascar 3 as	10	St. Pierre & Miquelon 3½as	30	Tunis 8 as
10	Guadeloupe 3½as	10	Martinique 3½as			10	Wallis & Futuna 3½as
25	,, 12 as	10	Mauritania 6 as				

—OTHER COUNTRIES.—

10	Afghanistan 1. —	20	Chile 9 as	25	Iran 5 as	10	Nicaragua 7 as
20	,, 2—3a	50	,, 1—6 as	50	,, 12 as	15	Philippine Islands 6 as
10	Andorra 3a	50	Cuba 1-10 as	100	,, 1-10 as	20	Porto-Rico 14 as
100	Argentine 3—6a	25	Dutch Indies 6 as	200	,, 4—3 as	20	Siam 6 as
100	Asia 12 as	50	,, ,, 13 as	300	,, 10-14 as	50	,, 1—8 as
200	,, 2. —	20	Ecuador 10 as	5	Air Iran 3½as	75	Soviet Russia 1—8 as
500	,, 7. —	5	Georgia 3 as	10	,, ,, 8 as	50	Spain 6 as
20	Belgian Congo & Ruanda 12 as	50	Guatemala 2—8 as	15	,, ,, 15 as	100	,, 1—6 as
50	,, ,, 2. —	10	Hejar-Nejd 12 as	50	Italy 5 as	200	,, 8. —
100	Belgium 8as	100	Holland 2. —	100	,, 14 as	20	Commem.USA 12 as
50	Bosnia 2. —	100	Hungary 8 as	100	commemorative Italy 8. —	50	Turkey 8 as
50	Brazil 1—6 as	200	,, 14 as	25	Japan 2 as	100	,, 1—2 as
50	Bulgaria 10 as	300	,, 2.—	25	Lithuania 7 as	200	,, 3—8 as
100	,, 1—12 as	500	,, 9.—	5	Manchukuo 3 as	300	,, 4—8 as
20	China 5 as	20	Liechtenstein 5½as	10	,, 8 as	5	Vatican 3 as
50	,, 12 as			10	Monaco 3 as	10	,, 7 as
10	Chile 2½as			50	,, 2—6 as		

POSTAGE EXTRA.

Many hundreds other packets & sets in our bi-monthly lists—**Copy free.**

Remittance with order by postal or Money-orders. Shipments may also be sent by V. P.

PHILATELIE ORIENT, P. O. BOX 943, BOMBAY.

Members international dealers Societies in London, Paris & Berlin

ಡಿಂದ)

ಸದ ಎಲೆಗಳು, ಲಂಟಾನ
ವುಗಳನ್ನು ಸೇರಿಸಿ ಸೆಗಣಿ ಬೊಗ್ಗಡ
ಮುಕಿಸಿ ಪ್ರತಿಯೊಬ್ಬರ ಹೊಲದಲ್ಲಿ
ಬ್ಬರ ಮಾಡಬಹುದು. ಈ ವಿಷಯ
ವ್ಯವಸಾಯದ ಇಲಾಖೆಯ ಸಲಹೆ
ಯಬೇಕು.

ಲೆ ಹೇಳಿರುವ ವಿಷಯಗಳಿಂದ
ಯಂತ್ರಗಳೇ ಅವಶ್ಯಕವೆಂದು ಭಾವಿಸ
ದು. ಇಂಜಿನ್ ಯಂತ್ರಗಳು ದೊಡ್ಡ
ಗೆ ಮಾತ್ರ ಉಪಯೋಗಿಸಬಹುದು.
ಂದ ನಡೆಸಬಹುದಾದ ಚಿಕ್ಕ ಯಂತ್ರಗ
ಸ್ಥಾಪಿಸಿ ಸಾಗುವಳಿಯನ್ನು ಉತ್ಕೃಷ್ಟ
ಎಲ್ಲಾ ರೈತರೂ ಅಧಿಕ ವರಮಾನವನ್ನು
ಬಹುದು.

ವಿದ್ಯಾವಂತರಾದ ಕೆಲವು ಯುವಕರು
ಸಾಯಶಾಸ್ತ್ರಕ್ಕೆ ಹೆಚ್ಚು ಗಮನಕೊಡಬೇ
ಬುದು ನನ್ನ ಸಲಹೆ. ಹಾಸನದ ಪೌರಸಭೆ
ವರು ರೈತರಿಗೆ ಉತ್ತೇಜನ ಕೊಡುತ್ತಿರುವುದ
ಗಿ ಅವರಿಗೆ ಅಭಿನಂದಿಸುತ್ತೇನೆ.

ಪೌರಸಭಾಧ್ಯಕ್ಷರೇ ಮತ್ತು ಸದಸ್ಯರೇ,
ಹಾಸನಪುರಿಯೆಂಬ ಪ್ರಾಚೀನ ಹೆಸರುಳ್ಳ
ನ್ಮ ಹಾಸನ ಪಟ್ಟಣದ ಅಭಿವೃದ್ಧಿಯನ್ನು ಸು
ಸಾರು ೫೦ ವರ್ಷಗಳಿಂದ ಆಗಾಗ್ಗೆ ನೋಡು
ಲಿದ್ದೇನೆ. ಪಟ್ಟಣವು ಬಹಳವಾಗಿ ಬಡಾ
ಯಿಸಿದೆ. ರೈಲ್ವೇ ಸೌಕರ್ಯವು ಒದಗಿದೆ.
ಮೋಟಾರು ಬಸ್ಸುಗಳು ಹೆಚ್ಚಿವೆ. ವಿದ್ಯುಚ್ಛ
ಯೂ ಈಗ ಸರಬರಾಯಿ ಆಗಿದೆ. ಹಾಸ
ದ ಪೌರಾಭಿವೃದ್ಧಿಯು ಇಡೀ ಮೈಸೂರು
ಮತ್ತು ಇಂಡಿಯಾ ದೇಶದ ಇತರ ಸಣ್ಣ ಪಟ್ಟ
ಗಳಿಗೆ ಸಮನಾಗಿರುವುದು. ಈ ಅಭಿವೃದ್ಧಿ
ಯಿಂದ ಮುನಿಸಿಪಾಲಿಟಿ ಮೇಲೆ ಜವಾಬ್ದಾರಿ
ಸ್ಸು ಹೆಚ್ಚಿರುತ್ತದೆ. ನೀವುಗಳು ಇದನ್ನು ಚೆ
ನ್ನಾಗಿ ಅರಿತು ಜನರಿಗೆ ಸೌಕರ್ಯಗಳನ್ನು ಹೆಚ್ಚಿ
ರುವುದು ಬಹಳ ಶ್ಲಾಘನೀಯವಾಗಿದೆ.
ೀಪ್ ವೆಲ್‌ಗಳಿಂದ ಕುಡಿಯುವ ನೀರನ್ನು ಸರ
ರಾಯಿ ಮಾಡಿರುವುದು ಒಂದು ಮುಖ್ಯ ವಿಷ
ಯ. ಮುನಿಸಿಪಾಲಿಟಿಯವರ ಆದಾಯಕ್ಕೆ
ನುಗುಣವಾಗಿ ಡ್ರೈಯಿನೇಜ್ ಕೆಲಸವನ್ನು ನಡೆ
ರುತ್ತದೆ. ವಾಟರ್ ಸಪ್ಲೈ ಮತ್ತು ಡ್ರೈನೇಜ್
ೀಮುಗಳನ್ನು ಪಟ್ಟಣದ ಎಲ್ಲಾ ಭಾಗಗಳಿ
ಗೂ ಕೊಡುವುದಕ್ಕೆ ಏರ್ಪಾಡುಗಳು ಆಗುತ್ತಿವೆ.
ಮೋಟಾರು ಬಸ್ಸುಗಳು ಹೇರಳವಾಗಿ, ಹಾಸ
ದಲ್ಲಿ ಧೂಳು ಹೆಚ್ಚುತ್ತಿದೆ. ಈ ಧೂಳಿನಿಂದ
ನರಿಗೆ ಗಂಟಲು ಮತ್ತು ಶ್ವಾಸಕೋಶಗಳ
ಾಯಿಲೆಗಳು ಒದಗಿ ಕೆಡಕು ಉಂಟಾಗುತ್ತದೆ.
ಂಥಾ ಮೋಟಾರು ತಿರುಗುವ ರಸ್ತೆಯನ್ನು
ೂಳಿಲ್ಲದ ಹಾಗೆ ಮಾಡುವ ವಿಚಾರವೂ ಮು
ಸಿಪಾಲಿಟಿಯವರ ಗಮನದಲ್ಲಿರುವುದೆಂದು
ೀಳಿ ಸಂತೋಷಿಸುತ್ತೇನೆ. ಪ್ರಾಥಮಿಕ ವಿದ್ಯಾ
ಭ್ಯಾಸವು, ಪಟ್ಟಣದ ಗಲೀಜು ಸ್ಥಳಗಳನ್ನು ಚೊ
ಟ ಮಾಡುವುದು, ಮತ್ತು ಶಾಸ್ತ್ರರೀತಿಯಾಗಿ
ಟ್ಟಣವನ್ನು ಅಭಿವೃದ್ಧಿಗೊಳಿಸುವುದು ಇವೇ
ೂದಲಾದ ಇತರ ಇತರ ಕೆಲಸಗಳನ್ನು ಮುನಿ
ಪಾಲಿಟಿಯವರು ಗಮನದಲ್ಲಿ ಇಟ್ಟುಕೊಂಡಿ
ುತ್ತಾರೆ. ಆದುದರಿಂದ ಈ ಪಟ್ಟಣವು ಇತೋ
ತಿಶಯವಾಗಿ ಅಭಿವೃದ್ಧಿಯಾಗುವುದೆಂದು
ನ್ನ ನಂಬಿಕೆ ಮತ್ತು ಪ್ರತೀಕ್ಷೆ.

ಈ ಪರಿಶೆಯಲ್ಲಿ ಸೇರಿರತಕ್ಕ ಜನಸಮು
ಹಯಕ್ಕೆ ಕುಡಿಯುವ ನೀರು ಮತ್ತು ಇತರ
ಸತಿಗಳನ್ನು ಅನುಕೂಲಪಡಿಸಿ ಯಾವ ಸಾಂ
ಪ್ರಮಿಕ ಜಾಡ್ಯವೂ ತಲೆದೋರದಂತೆ ಏರ್ಪಾ
ು ಮಾಡಿರುವುದು ನಿಮ್ಮಗಳ ಶ್ರದ್ಧೆ ಮತ್ತು
ತುರತೆಗೆ ನಿದರ್ಶನವಾಗಿರುತ್ತದೆ. ಮುನಿಸಿ
ಪಾಲಿಟಿಗೆ ನನ್ನ ಈ ಸಲಹೆಯನ್ನು ಕೊಡಲು
ಶಿಸುತ್ತೇನೆ. ವಿದ್ಯುಚ್ಛಕ್ತಿ ಮತ್ತು ರೈಲ್ವೇ
ಕಾರ್ಯಗಳು ಈ ಊರಿಗೆ ಇರುವುದರಿಂದ
ಣ್ಣ ಕೈಗಾರಿಕೆಗಳನ್ನು ಸ್ಥಾಪಿಸಿ ಅಭಿವೃದ್ಧಿಗೊ
ಸಲು ಅವಕಾಶವಿದೆ. ಈ ಡಿಸ್ಟ್ರಿಕ್ಟಿನ ಕೆಲವು
ಾಗಗಳಲ್ಲಿ ಈಗಾಗಲೇ ಕಿತ್ತಳೆ ಹಣ್ಣಿನ ಬೆಳೆ
ು ಹೇರಳವಾಗಿದೆ. ಹಾಸನಕ್ಕೆ ಫಸಲನ್ನು
ರಲು ಬೇಕಾದ ಸೌಕರ್ಯಗಳಿವೆ. ವ್ಯಾಪಾ
ಸ್ಥರು ಇದನ್ನು ಗಮನಿಸಿ ಈ ಅಮೂಲ್ಯವಾದ
ಹಾರಪದಾರ್ಥವನ್ನು ಶೇಖರಿಸಿ, ವಿಂಗಡಿಸಿ
ಡದಂತೆ ಇತರ ಸ್ಥಳಗಳಿಗೆ ವ್ಯಾಪಾರಕ್ಕೆ ಕಳು
ಸುವುದಕ್ಕೆ ಸರಿಯಾದ ಏರ್ಪಾಡುಮಾಡು
ದು ಮುಖ್ಯ ಕರ್ತವ್ಯವಾಗಿದೆ.

ತಾವುಗಳು ನನಗೆ ತೋರಿಸಿದ ಗೌರವ
ಕ್ಕೆ ಮತ್ತೊಮ್ಮೆ ವಂದಿಸುತ್ತೇನೆ.

ಟಿಬೇಟು.

ನಮ್ಮ ಹಿಂದೂದೇಶದ ಉತ್ತರಕ್ಕಿರುವ ದೇಶವು ಟಿಬೇಟು. ಟಿಬೇಟಿಗೂ ಹಿಂದೂದೇಶಕ್ಕೂ ನಡುವೆ ಹಿಮಾಲಯಪರ್ವತಶ್ರೇಣಿಯು ಉದ್ದಕ್ಕೆ ಚಾಚಿಕೊಂಡಿರುವುದರಿಂದ ಟಿಬೇಟು ನಮಗೆ ಬಹಳ ಸಮೀಪವಿದ್ದರೂ ಟಿಬೇಟಿನ ಜನರಿಗೂ ನಮಗೂ ಈಗ ಹೆಚ್ಚಿನ ಸಂಪರ್ಕವಿಲ್ಲ. ಟಿಬೇಟಿನಿಂದ ಕಾಶ್ಮೀರ್ ದಾರಿಯಾಗಿಯಾಗಲಿ ಡಾರ್ಜಿಲಿಂಗಿನ ಬಳಿಯಿಂದಾಗಲಿ ಹಿಂದೂದೇಶಕ್ಕೆ ಬರಬಹುದು. ಇತರ ಕಡೆ ಹಿಮಾಲಯಪರ್ವತವನ್ನು ದಾಟುವುದು ಬಹಳ ಕಷ್ಟವಾಗಿದೆ.

ಉತ್ತರಹಿಂದೂದೇಶದ ಪೂರ್ವ ಪಶ್ಚಿಮ ದಿಕ್ಕುಗಳಲ್ಲಿ ಹರಿಯುವ ಬ್ರಹ್ಮಪುತ್ರ ಸಿಂಧೂ ನದಿಗಳು ಈ ಟಿಬೇಟಿನಲ್ಲಿ ಹುಟ್ಟುತ್ತವೆ. ನಮ್ಮ ಪುರಾಣಗಳ ಕೈಲಾಸಪರ್ವತವೂ ಮಾನಸ ಸರೋವರವೂ ಟಿಬೇಟಿನಲ್ಲಿವೆ. ಟಿಬೇಟಿನ ಪೂರ್ವಭಾಗದಲ್ಲಿ ಬ್ರಹ್ಮಪುತ್ರದ ಉತ್ತರಕ್ಕೆ ಇರುವ ಲ್ಯಾಸಾಪಟ್ಟಣವೇ ಟಿಬೇಟಿನ ರಾಜಧಾನಿ. ಟಿಬೇಟಿನ ಹೆಚ್ಚಿನ ಜನರು ಬೌದ್ಧಮತದವರು, ಆದರೆ ಪಶ್ಚಿಮದಿಕ್ಕಿನಲ್ಲಿ ಕೆಲವು ಇಸ್ಲಾಂ ಮತಾನುಯಾಯಿಗಳೂ ಇದ್ದಾರೆ.

ಟಿಬೇಟು ಸಮುದ್ರಕ್ಕಿಂತ ಮೂರು ಮೈಲಿಷ್ಟು ಎತ್ತರವಿರುತ್ತದೆ. ಪರ್ವತಶ್ರೇಣಿಗಳು ನಾಲ್ಕೂ ಕಡೆ ಆವರಿಸಿಕೊಂಡು,—ನಿರ್ಜನ ಭಯಂಕರ ಪ್ರದೇಶಗಳೂ, ಹಿಮ ತುಂಬಿದ ಪ್ರಾಂತ್ಯಗಳೂ ಹೆಚ್ಚಾಗಿದ್ದರಿಂದ ದೇಶವು ಫಲವತ್ತಾಗಿರುವುದಿಲ್ಲ. ದೇಶದ ಒಟ್ಟು ವಿಸ್ತೀರ್ಣವು ಹಿಂದೂದೇಶದ ಮೂರನೇ ಒಂದಂಶಕ್ಕಿಂತ ಹೆಚ್ಚಿದ್ದರೂ ಅಲ್ಲಿರುವ ಜನಸಂಖ್ಯೆಯು ಬರೇ ಆರು ಮಿಲಿಯವಾಗಿರುತ್ತದೆ.

ಟಿಬೇಟು ಬಹಳ ಕಾಲ ಸ್ವತಂತ್ರರಾಷ್ಟ್ರವಾಗಿತ್ತು. ಕ್ರಿ. ಶಕ ೧೭೫೧ಕ್ಕೆ ಚೀನ ಚಕ್ರಾಧಿಪತಿಗಳು ಅದನ್ನು ಜೈಸಿ ತಮ್ಮ ಸಾಮ್ರಾಜ್ಯಕ್ಕೆ ಸೇರಿಸಿದ್ದರು. ಕ್ರಿ. ಶಕ ಹತ್ತೊಂಬತ್ತನೆಯ ಶತಮಾನದ ಅಂತ್ಯದ ತನಕ ಅಲ್ಲಿ ಪಾಶ್ಚಾತ್ಯರನ್ನು ಕಾಲಿಡಲಿಕ್ಕೆ ಬಿಡುತ್ತಿದ್ದಿಲ್ಲ. ೧೯೧೧ರಲ್ಲಿ ಚೀನದಲ್ಲಿ ಚಕ್ರಾಧಿಪತ್ಯವು ಬಿದ್ದು ಹೋದ ಬಳಿಕ ಟಿಬೇಟು ಪುನಃ ಸ್ವಾತಂತ್ರ್ಯವನ್ನು ಪಡೆದುಕೊಂಡಿತು. ಈ ಸ್ವಾತಂತ್ರ್ಯಕ್ಕೆ ಆಂಗ್ಲೇಯರ ಮೈತ್ರತ್ವವೇ ಪ್ರಧಾನಬಲವಾಗಿದೆ.

ಟಿಬೇಟಿನ ರಾಷ್ಟ್ರಾಧಿಪತಿಯು ಬೌದ್ಧಮತದ ಜಗದ್ಗುರುವಾದ ದಲೈ ಲಾಮನು. ದಲೈ ಲಾಮನು ಬುದ್ಧನ ಅವತಾರನೆಂದು ಅಲ್ಲಿಯ ಜನರೆಲ್ಲಾ ನಂಬಿ ಅವನನ್ನು ಪೂಜಿಸುತ್ತಾರೆ. ದಲೈ ಲಾಮನು ಮರಣಹೊಂದುವಾಗ ಅವನ ಆತ್ಮಜ್ಯೋತಿಯು ಆ ಸಮಯಕ್ಕೆ ಹುಟ್ಟಿದ ಶಿಶುಗಳೊಬ್ಬರಲ್ಲಿ ಸೇರುತ್ತದೆಂದು ಟಿಬೇಟಿನವರ ದೃಢವಿಶ್ವಾಸವಾದ್ದರಿಂದ ಒಬ್ಬ ದಲೈ ಲಾಮನು ಮರಣಹೊಂದಿನೊಡನೆ ದಲೈಲಾಮಪದವಿಯನ್ನು ಹೊಂದಲಿಕ್ಕಿರುವ ದಿವ್ಯಶಿಶುವನ್ನು ದೇಶದಲ್ಲೆಲ್ಲಾ ಹುಡುಕುವ ಕೆಲಸವು ಪ್ರಾರಂಭವಾಗುತ್ತದೆ. ಎಲ್ಲಾ ಸುಲಕ್ಷಣಗಳಿರುವ ಶಿಶುವು ದೊರೆಯಬೇಕಾದ್ದರಿಂದ ಈ ಕಾರ್ಯವು ಕೆಲವು ಸಲ ದೀರ್ಘಪ್ರಯಾಸದ್ದಾಗಿ ಪರಿಣಮಿಸುತ್ತದೆ. ಕಳೆದ ದಲೈ ಲಾಮನು ಮೃತವಾಗಿ ಈಗ ಮೂರು ವರ್ಷಗಳಾದವು. ಅವನು ಮೃತಪಟ್ಟ ಬಳಿಕ ಅವನ ಆತ್ಮವು ಸೇರಿಕೊಂಡ ಶಿಶುವನ್ನು ಕಂಡುಹಿಡಿಯಲಿಕ್ಕೆ ಟಿಬೇಟಿನ ಪಂಡಿತರಿಗೆಲ್ಲಾ ೨-೩॥ ವರ್ಷಗಳು ಬೇಕಾದವು. ಈ ಶಿಶುವನ್ನು ಈಗ ಲ್ಯಾಸಕ್ಕೆ ತಂದು ಸಂರಕ್ಷಣೆ ಮಾಡಿ, ಅದಕ್ಕೆ ಅದರ ಮುಂದಿನ ಪದವಿಗೆ ಬೇಕಾಗುವ ಎಲ್ಲಾ ತರದ ಶಿಕ್ಷಣವನ್ನು ಕೊಡುವರು. ಅದು ಪ್ರಾಯಕ್ಕೆ ಬರುವ ತನಕ ಪ್ರತಿನಿಧಿಯೊಬ್ಬನು ದಲೈ ಲಾಮನ ಅಧಿಕಾರವನ್ನು ಚಲಾಯಿಸುವನು.

ಟಿಬೇಟಿನಲ್ಲಿ ಬೌದ್ಧಮತವನ್ನು ಸ್ಥಾಪಿಸಿದ್ದು ಕ್ರಿ. ಶಕ ೭ನೇ ಶತಮಾನದಲ್ಲಿ. ಆಗಿನ ಅರಸನು ಶೂರನಾಗಿದ್ದು ನಮ್ಮ ನೇಪಾಲಿನ ಒಬ್ಬ ರಾಜಕುವರಿಯನ್ನೂ ಚೀನಿಯರ ಚಕ್ರವರ್ತಿಯ ಒಬ್ಬ ಕುವರಿಯನ್ನೂ ಮದುವೆಮಾಡಿಕೊಂಡಿದ್ದನು. ಈ ರಾಜಕುವರಿಯರಿಬ್ಬರೂ ಆತನನ್ನು ಬುದ್ಧನ ಮತವನ್ನವಲಂಬಿಸುವಂತೆ ಬೋಧಿಸಿ ಟಿಬೇಟನ್ನು ಬೌದ್ಧಮತಕ್ಕೆ ಸೇರಿಸಲಿಕ್ಕೆ ಕಾರಣಭೂತರಾದರು. ಈ ಅರಸನನ್ನೂ ಈ ರಾಜಕುವರಿಯರನ್ನೂ ಈಗಲೂ ಟಿಬೇಟಿನವರು ಪೂಜಿಸುತ್ತಾರೆ.

ಇಸ್ಲಾಂ ಮತದ ಯವನರು ಈ ಹಿಂದೂದೇಶಕ್ಕೆ ಬಂದು ಇಲ್ಲಿಯ ದೇವಾಲಯಗಳನ್ನೂ ವಿಶ್ವವಿದ್ಯಾಲಯಗಳನ್ನೂ ನಾಶಪಡಿಸಲುಪಕ್ರಮಿಸುವ ತನಕ ನನ್ಮ ಈ ಭಾರತಮಾತೆಯು ಪೂರ್ವ ಆಸ್ಯಕ್ಕೆಲ್ಲಾ ತನ್ನ ದಿವ್ಯ ನಾಗರೀಕತೆಯ, ಸಂಸ್ಕೃತಿಯ, ಮತಧರ್ಮಗಳ ಶೋಭೆಯನ್ನು ಬೀರಿಕೊಂಡಿರುತ್ತಿತ್ತು. ಟಿಬೇಟಿನಲ್ಲಿ ಬೌದ್ಧಮತವು ಕಾಲಿಡುತ್ತಲೇ ಹಿಂದೂದೇಶದ ಜ್ಞಾನ, ಧರ್ಮ, ಮತಗಳನ್ನು ಅರಿಯಬೇಕೆಂಬ ಲವಲವಿಕೆಯೂ ಟಿಬೇಟಿನವರಲ್ಲಿ ಉತ್ಪನ್ನವಾಗಿ ಆರು ಶತಮಾನಗಳ ತನಕ ಅವರು ಹಿಂದೂದೇಶದ ಪಂಡಿತಶಿರೋಮಣಿಗಳನ್ನು ತಮ್ಮಲ್ಲಿಗೆ ಕರೆಸಿಕೊಳ್ಳುವುದು,—ತಮ್ಮ ದೇಶದ ಜನರನ್ನು ಇಲ್ಲಿಗೆ ವಿದ್ಯಾರ್ಜನೆಗಾಗಿ ಕಳುಹಿಸುವುದು—ಇದೇ ರೂಢಿಯಾಗಿತ್ತು. ಟಿಬೇಟಿನಲ್ಲಿರುವ ಈಗಿನ ಧರ್ಮವು ತೀರ ಬೌದ್ಧಮತಧರ್ಮವಲ್ಲ. ಅದು ಹಿಂದೂ-ಬೌದ್ಧಮತಗಳ ಮಿಶ್ರಣವಾಗಿರುವದು. ಹಿಂದುಗಳಲ್ಲಿ ಅನೇಕರು ಉಪಾಸನೆ ಮಾಡುವ ಶಕ್ತಿದೇವಿಯನ್ನು ಟಿಬೇಟಿನವರು ತಾರೆಯೆಂಬ ಹೆಸರಿನಿಂದ ಪೂಜಿಸುತ್ತಾರೆ. ನಮ್ಮ ವಿಷ್ಣುವನ್ನು ಅವರು ಅವಲೋಕಿತೇಶ್ವರನೆಂಬ ಹೆಸರಿನಿಂದ ಪೂಜಿಸುತ್ತಾರೆ. ಟಿಬೇಟು, ಚೀನ, ಜಪಾನುಗಳ ಕುರಿತು ಈಗ ಮುಸುಕಿಕೊಂಡಿರುವ ನಮ್ಮ ಅಜ್ಞಾನವು ದೂರವಾದೊಡನೆ ಅಲ್ಲಿಯ ಜನರಿಗೂ ನಮಗೂ ಇರುತ್ತಿದ್ದ ಅನೇಕ ಶತಮಾನಗಳ ಸಂಪರ್ಕವು ಈಗಲೂ ಅಲ್ಲಿ ನಮಗೆ ಕಾಣಲಿಕ್ಕೆ ಕಷ್ಟವಾಗದು. ನಾವು ಈಗಿನ ದೈನ್ಯತೆಯಲ್ಲಿಯೇ ಹಿಂದೆ ಇರುತ್ತಿರಲಿಲ್ಲ.

ನಾಲ್ಕೂ ಕಡೆ ಪರ್ವತವೇಷ್ಟಿತವಾದ ಟಿಬೇಟು ಹೊರಗಿನವರಿಗೆ ಪ್ರವೇಶಿಸಲಸಾಧ್ಯವಾದ ದೇಶವಾದ್ದರಿಂದ ಅಲ್ಲಿಯ ಜನರು ಹೊರಗಣ ಸಂಪರ್ಕವಿಲ್ಲದೇನೇ ತಮ್ಮ ಜೀವನವನ್ನು ಈಗಲೂ ನಡೆಸುತ್ತಾರೆ. ಅವರು ಮತಧರ್ಮಗಳಲ್ಲಿ ವಿಶೇಷ ಭಕ್ತಿಯುಳ್ಳವರು. ಅವರಲ್ಲಿ ಪ್ರತಿಯೊಂದು ಕಡೆ ಮಠಗಳಿದ್ದು ಪ್ರತಿಯೊಂದು ಮಠದಲ್ಲಿ ನೂರಾರು ಭಿಕ್ಷುಗಳಿದ್ದಾರೆ. ಸಾಧಾರಣ ಭಿಕ್ಷುಗಳಿಗೆ ಗ್ಯಾಲೊಂಗ್ ಎಂದೂ ಮಠಾಧಿಪತಿಗಳಿಗೆ ಲಾಮರೆಂದೂ ಕರೆಯುತ್ತಾರೆ. ದೇಶದ ರಾಜಕಾರ್ಯಕರ್ಮಗಳನ್ನೆಲ್ಲಾ ಈ ಲಾಮರೇ ನಡೆಸುವದು. ಇವರೆಲ್ಲಾ ದಲೈ ಲಾಮನ ಸರಕಾರದ ನೌಕರರು. ದಲೈ ಲಾಮನಿಗೆ ಇತರ ಶ್ರೇಷ್ಠ ಲಾಮರ ಮಂತ್ರಿಸಭೆಯೊಂದಿರುವುದಾದರೂ ಅವನು ನಿರಂಕುಶಪ್ರಭುತ್ವವನ್ನು ನಡೆಸುವುದಾಗಿರುತ್ತದೆ. ಸ್ವಾರ್ಥ, ಆಡಂಬರಗಳಿಲ್ಲದ ದಲೈ ಲಾಮರ ನಿರಂಕುಶ ಪ್ರಭುತ್ವದಿಂದ ಪ್ರಜೆಗಳಿಗೆ ಯಾವ ತೊಂದರೆಗಳೂ ಇಲ್ಲದ್ದರಿಂದಲೂ, ಲೋಕದ ಶಾಂತಿಯನ್ನು ಈಶ್ವರನೊಡನೆ ಬೇಡುತ್ತಾ ಕಾಲ ಕಳೆಯುವ ಈ ದಲೈ ಲಾಮರು ಅವರ ಮತದ ಜಗದ್ಗುರುಗಳಾದ್ದರಿಂದಲೂ ಟಿಬೇಟಿನ ಈ ರಾಜ್ಯಪರಿಪಾಲನೆಯ ಕ್ರಮದಿಂದ ಆ ದೇಶಕ್ಕೆ ದೋಷಗಳೇನೂ ಬರಕಾರಣವಿಲ್ಲ. ನೂತನ ನಾಗರೀಕತೆಯ ಆಡಂಬರ-ಸೌಕರ್ಯಗಳು ಟಿಬೇಟಿಗೆ ಈ ತನಕ ಹೆಚ್ಚು ದೊರೆಯದಿದ್ದರೂ ಅಲ್ಲಿಯ ಜನರಿಗೆ ತೃಪ್ತಿ, ನೆಮ್ಮದಿಗಳು ಎಂದೂ ತಪ್ಪುವುದಿಲ್ಲ.

ಟಿಬೇಟು ಫಲವತ್ತಾದ ದೇಶವಲ್ಲ. ಅದನ್ನು ಸ್ವಾಧೀನಪಡಿಸಿಕೊಂಡು ಯಾವ ಸಾಮ್ರಾಜ್ಯಕ್ಕೂ ಆರ್ಥಿಕಸಂಪತ್ತಿಯು ಹೆಚ್ಚದು. ಆದರೆ ಟಿಬೇಟಿನ ಸುತ್ತಲೂ ರುಶ್ಯದಿಂದ ಉಕ್ಕಿ ಪ್ರವಾಹವಾಗುವ ಸಮಾಜಶಾಹಿ ಸತ್ತೆಯು ತುಂಬಿಕೊಂಡಿರುವುದರಿಂದ ಅದರ ಪ್ರವಾಹವು ತನ್ಮ ಹಿಂದೂದೇಶಕ್ಕೆ ಮುಟ್ಟದಂತೆ ಆಂಗ್ಲೇಯರು ಟಿಬೇಟಿನವರ ಮೈತ್ರತ್ವವನ್ನು ಬೆಳೆಸಿಕೊಂಡಿದ್ದಾರೆ. ಟಿಬೇಟಿನಿಂದ ಸ್ವಂತ ಪ್ರಯೋಜನವೇನೂ ಲಭಿಸದಿದ್ದರೂ ಹಿಂದೂದೇಶದ ಮೇಲೆ ದೃಷ್ಟಿ ಇರುವ ಬಲಿಷ್ಠ ಪಾಶ್ಚಾತ್ಯರಿಗೆ ಅಲ್ಲಿಂದ ಹಿಂದೂದೇಶವನ್ನು ಆಕ್ರಮಿಸಲಿಕ್ಕೆ ವಿಮಾನಪಡೆಗಳ ಯುಗವಾದ ಈಗಿನ ಕಾಲದಲ್ಲಿ ಬಹಳ ಸುಲಭವಾಗಬಹುದು. ಈ ತಿಳುವಳಿಕೆಗಳಿಂದೆಲ್ಲಾ ಆಂಗ್ಲೇಯ ರಾಜಕಾರ್ಯಕರ್ಮಿಗಳು ಟಿಬೇಟಿಗೆ ಆಗಿಂದಾಗ್ಗೆ ಪ್ರವಾಸ ಬೆಳೆಸಿ, ಟಿಬೇಟಿನ ಸೈನ್ಯವನ್ನು ಒಳ್ಳೇ ರೀತಿಗೆ ತರಲು ಅಲ್ಲಿಯ ಸರಕಾರದವರಿಗೆ ಸಹಾಯ-ಉತ್ತೇಜನಗಳನ್ನು ಕೊಟ್ಟು ಇತರ ಪಾಶ್ಚಾತ್ಯರು ಆ ದೇಶದೊಳಗೆ ಕಾಲಿಡದಂತೆ ಜಾಗ್ರತೆ ನೋಡಿಕೊಂಡೇ ಇದ್ದಾರೆ. ಸೌಂದರ್ಯಮಯಿಯಾದ ಭಾರತಮಾತೆಯನ್ನು ಸ್ವಾಧೀನದಲ್ಲಿಟ್ಟುಕೊಳ್ಳಲಿಕ್ಕೆ ಆಂಗ್ಲೇಯರಿಗೆ ಟಿಬೇಟಿನ ಜನರ ಮೈತ್ರತ್ವವನ್ನು ಕೂಡ ಬೇಡದೆ ಉಪಾಯವಿಲ್ಲ.

ಟಿಬೇಟಿನ ಮೇಲಣ ತಮ್ಮ ಅಧಿಕಾರವನ್ನು ಚೀನದವರು ಮಾತ್ರ ಬಿಡಲೊಪ್ಪರೆಂಬದಕ್ಕೆ ಸಂದೇಹವಿಲ್ಲ. ಚೀನದಲ್ಲಿರುವ ಒಳಗಣ ಅಂತಃಕಲಹಗಳು ಮುಗಿದು, ಜಪಾನೀಯರನ್ನೂ ಪಾಶ್ಚಾತ್ಯರನ್ನೂ ಚೀನದಿಂದ ಹೊರ ಅಟ್ಟಿದ ಬಳಿಕ, ಹಿಂದಿನ ತಮ್ಮ ಸಾಮ್ರಾಜ್ಯಕ್ಕೆ ಸೇರಿದ ಟಿಬೇಟನ್ನು ಚೀನೀಯರು ಪುನಃ ಜೈಸುವದು ಅವರಿಗೆ ಕಷ್ಟಕೆಲಸವಾಗದು. ಚೀನಾ-ಟಿಬೇಟುಗಳ ಜನರಲ್ಲಿ ಮತ, ಸಂಸ್ಕೃತಿ, ರಕ್ತಬಂಧುತ್ವಗಳಿವೆಯಾದ್ದರಿಂದ ಟಿಬೇಟು ಚೀನಾ ಸಾಮ್ರಾಜ್ಯಕ್ಕೆ ಸೇರಬೇಕಾದ್ದೆಂಬದನ್ನು ಯಾರೂ ಅಲ್ಲಗಳೆಯರು. ಪೂರ್ವ ಆಸ್ಯವು ಈ ತರದ ಪ್ರಾಬಲ್ಯಕ್ಕೆ ಬರಲಿಕ್ಕೆ ಮಾತ್ರ ಇನ್ನೆಷ್ಟು ಕಾಲ ಹೋಗಬಹುದೆಂಬುದನ್ನು ಹೇಳಸಾಧ್ಯವಿಲ್ಲ. ಅದು ಹಾಗೆ ಪ್ರಬಲವಾಗುವ ಮೊದಲೇ ಹಿಂದೂದೇಶದವರ ಮನಃಪೂರ್ವಕವಾದ ವಿಶ್ವಾಸ, ಪ್ರೀತಿಗಳನ್ನು ಆಂಗ್ಲೇಯರು ಸಂಪಾದಿಸಿಕೊಳ್ಳದಿದ್ದರೆ ಪಾಶ್ಚಾತ್ಯರ ವಿನಾಶಕಾಲವು ಬರಬಹುದಾದ್ದರಿಂದ—ದೀರ್ಘದರ್ಶಿಗಳಾದ ಆಂಗ್ಲೇಯರು ಭಾರತೇಯರ ನಿಜಮೈತ್ರತ್ವವನ್ನು ಬೇಗನೇ ಬೆಳೆಸಲಪೇಕ್ಷಿಸದಿರರು.

'V'

The Deccan Assurance Co., Ltd.,

BEZWADA.

COMPANY'S PROGRESS (4 YEARS).

Business in force	..	Rs. 14,00,000.
Premium Income	..	Rs. 55,000.
Assets	..	Over One Lakh.
Government Securities	..	Rs. 81,200.
Life Fund	..	Rs. 61,000.
Expense Ratio	..	50%.

VALUATION YEAR 1937.

The Company has already deposited Government Securities for the amount covered by the Notice issued by the Government of India.

ಸ್ವಸ್ತಿಕಾ

ಕೇಶ

ಸಿದ್ಧತೆಗಳು

ಇಂಡಿಯದಲ್ಲೆಲ್ಲಿಯೂ ಖ್ಯಾತಿ ಪಡೆದಿದೆ. ಬಿಳಿಯ ಮತ್ತು ಖನಿಜತೈಲಗಳಿಲ್ಲವೆಂದು ಗ್ಯಾರೆಂಟಿ ಇದೆ. ತೃಪ್ತಿಯಾಗದಿದ್ದರೆ, ಹಣ ಪರತ.

ಕೇಶವರ್ಧಕ ಟಾನಿಕ್

ಕೂದಲು ಯಥೇಷ್ಟ ಬೆಳೆಯುತ್ತದೆ, ಚಿಕ್ಕ ವಯಸ್ಸಿನಲ್ಲಿ ಕೂದಲು ಉದುರುವುದನ್ನು ತಡೆಯುತ್ತದೆ, ತಲೆಯ ಹೊಟ್ಟನ್ನು ನಿರ್ಮೂಲಿಸುತ್ತದೆ, ತಲೆಯ ಚರ್ಮದ ಮೇಲೆ ಮನೋಹರವಾದ ತಂಪನ್ನು ಉಂಟುಮಾಡುತ್ತದೆ, ಹೀಗೆಂದು ಪ್ರಬಲವಾಗಿ ಶಿಫಾರಸು ಮಾಡಲ್ಪಟ್ಟಿದೆ. ಹೊಸ ಹೂಗಳ ಹಾಗಿರುವ ಸೂಕ್ಷ್ಮವಾದ ಸುವಾಸನೆಯಿದೆ.

ಕೇಶತೈಲಗಳು

ಪುಟಕ್ಕಿಟ್ಟ ಶುದ್ಧ ತೆಂಗಿನೆಣ್ಣೆ ಮತ್ತು ತಿಲ್ ಎಣ್ಣೆಗಳಿಂದ ಮಾತ್ರವೇ ತಯಾರಿ. ಹಾನಿಕರವಾದ ಖನಿಜದ ಎಣ್ಣೆಗಳಿಲ್ಲವೆಂದು ಗ್ಯಾರೆಂಟಿ. 'ಸ್ವಸ್ತಿಕಾ' (ಸಾಮಾನ್ಯ ಸುವಾಸನೆ) ಮತ್ತು 'ಸುಪರ್‌ಫೈನ್' (ಬಲವಾದ ಸುವಾಸನೆ) ಎಂಬ ೨ ಜಾತಿಯಾಗಿ ೫ ಬಗೆಯ ಪರಿಮಳಯುಕ್ತವಾಗಿ ದೊರಕುತ್ತದೆ—ಗುಲಾಬೀ, ಮಲ್ಲಿಗೆ, ಗಂಧ, ಕಸ್ತೂರಿ, ಮಾಧರಿಕಾ.

ಸುವಾಸೆಯುಳ್ಳ ಹರಳೆಣ್ಣೆ

ಕೂದಲಿಗಿದು ಉತ್ಕೃಷ್ಟ ಶಕ್ತಿವರ್ಧಕ ಔಷಧ; ಕೂದಲು ಉದುರದು; ಬೆಳ್ಳಗಾಗದು; ತಲೆಯ ಚರ್ಮವನ್ನು ನಿರ್ಮಲವಾಗಿ, ತಂಪಾಗಿ ಇಡುತ್ತದೆ. ಅತ್ಯುತ್ತಮವಾಗಿ ಸುಗಂಧವುಳ್ಳುದು; ನಿಜವಾಗಿಯೂ ಉಚ್ಚ ತರಗತಿಯ ಸಾಧನ.

ಕೂದಲಿಗೆ ಶಿಕಾಕ್ಕಾಯ್ ಸಾಬೂನು

ಕೂದಲು ತೊಳೆಯುವಲ್ಲಿ, ಆದನ್ನು ಯಥೇಷ್ಟ ಬೆಳೆಸುವಲ್ಲಿ, ತಲೆ ಹೊಟ್ಟನ್ನು ನಿರ್ಮೂಲಿಸುವಲ್ಲಿ, ಕೂದಲಿಗೆ ಧಾರಾಳವಾಗಿ ಸುಣುಪಿನ ಹೊಳಪು ಕೊಡುವಲ್ಲಿ ಇದಕ್ಕೆ ಸರಿ ಇಲ್ಲ. ತಲೆಯ ಚರ್ಮಕ್ಕೆ ಇದರಿಂದ ಹೊಸ ಚೈತನ್ಯ, ಸಂತೋಷಕರವಾದ ಸುವಾಸನೆ; ಸ್ನಾನಕ್ಕೂ ಇಷ್ಟೇ ಒಳ್ಳೆಯದು.

ದಿ ಸ್ವಸ್ತಿಕಾ ಆಯಿಲ್ ಮಿಲ್ಸ್ ಲಿಮಿಟೆಡ್
ವಡಾಲಾ, ಬೊಂಬಯಿ 15.

'ರಜಪೂತ ರಮಣಿ.'

ಸುಪ್ರಸಿದ್ಧ ಪ್ರಭಾತ್ ಕಂಪೆನಿಯವರ ಈ ಹಿಂದೀ ಚಲಚ್ಚಿತ್ರವು ಕೇಶವರಾವ್ ದೇಹಿಬಾರ್‌ರವರಿಂದ ನಿರ್ದೇಶಿಸಲ್ಪಟ್ಟು ಪ್ರಸಿದ್ಧ ನಟರಾದ ನಳಿನಿ ತರ್ಖಡ್, ಶಾಂತಾ ಆಪ್ಟೆ, ಕೇಳ್ಕರ್ ಮೊದಲಾದವರಿಂದ ಅಭಿನಯಿಸಲ್ಪಟ್ಟು ಇದೊಂದು ಉತ್ತಮ ಚಿತ್ರವೆಂದು ಪರಿಗಣಿಸಲ್ಪಟ್ಟಿದೆ. ಈ ವಾಕ್‌ಚಲಚ್ಚಿತ್ರವು ಇಲ್ಲಿನ ಶ್ರೀ ಚಿತ್ರಾ ಟಾಕೀ ಮಂದಿರದಲ್ಲಿ ಪ್ರದರ್ಶಿಸಲ್ಪಡುತ್ತಲಿರುವುದು.

ಕ್ರಿಸ್ತಶಕ ೧೬ನೆಯ ಶತಾಬ್ದವು ರಜಪೂತ ವೀರರ ಗೌರವದೊಂದಿಗೆ ಕಾಲತರಂಗದಲ್ಲಿ ಅತೀತದ ಅನಂತಕಾಲದ ಅಂಧತಮಸ್ಸಿನಲ್ಲಿ ಸೇರಿಹೋಗುತಲಿತ್ತು. ರಾಜಸ್ಥಾನದಲ್ಲಿ ಆಗ ಮಾನಸಿಂಹನೆಂಬೊಬ್ಬ ವೀರನು ತನ್ನ ಧೈರ್ಯ, ಸಾಹಸ, ಶೌರ್ಯದಿಂದ ರಜಪೂತ ಸರದಾರರ ಪ್ರೇಮವನ್ನು ಗಳಿಸಿ ಅವರ ರಾಣನಾಗುವನು. ವೀರನೆಂದು ಆತನು ಹೆಸರು ಪಡೆದಿದ್ದರೂ ಅವನ ಕ್ರೂರತನಕ್ಕಾಗಿ ಪ್ರಜೆಗಳು ಅವನನ್ನು ಪ್ರೀತಿಸುತ್ತಿರಲಿಲ್ಲ. ಆಗ ಓರ್ವ ರಜಪೂತ ಸರದಾರನ ಪುತ್ರಿಯೂ, ಅತ್ಯಂತ ಲಾವಣ್ಯಮಯಿಯೂ ಆದ ತಾರಾಮತಿಯೆಂಬ ರಜಪೂತ ರಮಣಿಯೊಬ್ಬಳು ಸ್ತ್ರೀಯರ ಒಡನಾಟದಿಂದ ರಾಣನ ಕ್ರೂರತ್ವವು ನಾಶವಾದೀತೆಂಬ ಪವಿತ್ರ ಭಾವನೆಯಿಂದ ಜನರ ಉದ್ಧಾರಕ್ಕಾಗಿ ಸ್ವಾರ್ಥತ್ಯಾಗ ಬುದ್ಧಿಯಿಂದ ರಾಣನನ್ನು ವಿವಾಹವಾಗುವಳು. ಆದರೆ ರಾಣನು ತಾರಾಮತಿಯನ್ನು ಪ್ರೇಮಿಸುವುದಿರಲಿ, ಆಕೆಯನ್ನು ದ್ವೇಷಿಸುತ್ತಾ ಕಠಿಣವಾದ ಶಿಕ್ಷೆಯನ್ನು ಕೊಡತೊಡಗುವನು. ತಾರಾಮತಿಯು ಆತನ ಶಿಕ್ಷೆಯನ್ನು ಸಹಿಸಿಕೊಂಡು ಆತನ ಹೃದಯಸಾಮ್ರಾಜ್ಯದಲ್ಲಿ ಮೋಹದ ಆನಂದವನ್ನು, ಪ್ರೇಮದ ಪ್ರಚಂಡ ತರಂಗಗಳನ್ನು ಅದೆಂತು ಎಬ್ಬಿಸಿ ದೇಶರಕ್ಷಣೆಯನ್ನೂ, ಪ್ರಜೆಗಳಿಗೆ ಸುಖಸಂತೋಷಗಳನ್ನೂ ತೋರಿಕೊಟ್ಟಳೆಂದು ಈ ಚಿತ್ರದಲ್ಲಿ ತೋರಲಾಗಿದೆ.

ಪ್ರಭಾತ್ ಕಂಪೆನಿಯವರ ಪದ್ಧತಿಯಂತೆ ಈ ಕಥೆಯು ಚರಿತ್ರೆಯಿಂದ ಆಯಲ್ಪಟ್ಟು ವೈಭವದಿಂದ ತೋರಲಾಗಿದೆ. ವಸ್ತ್ರಾಭರಣದಲ್ಲಿಯೂ ನಡೆನುಡಿಗಳಲ್ಲಿ ಪ್ರತಿಯೊಬ್ಬ ನಟರೂ ಹಿಂದಿನ ಕಾಲದ ರಜಪೂತರ ಸ್ವಭಾವವನ್ನು ತಪ್ಪಿಲ್ಲದೆ ತೋರಿದ್ದಾರೆ.

ತಾರಾಮತಿಯ ಪಾತ್ರ ವಹಿಸಿದ ನಳಿನೀ ತರ್ಖಡೆಳ ಅಭಿನಯವು ಅತೀ ಉತ್ತಮವಿದ್ದು ಅಭಿನಂದನೀಯವಿದೆ. ಅವಳ ಅಭಿನಯವು ಎಲ್ಲೆಡೆಯಲ್ಲಿಯೂ ಹೃದಯಕ್ಕೇ ಮುಟ್ಟುವಂತಹದಿದ್ದು ಮಾನವವರ್ಗಕ್ಕೇ ಮೊರೆಯಿಡುವಂಥದಿದೆ. ಮಾನಸಿಂಗನ ಪಾತ್ರ ವಹಿಸಿದ ಪಾಠಕನ ನಟನೆಯೂ ಮಾನಸಿಂಗನ ಕೊನೆಯ ಪರಿವರ್ತನೆಯೂ ಚೆನ್ನಾಗಿ ತೋರಲ್ಪಟ್ಟಿದೆ. ತಾರಾಮತಿಯ ತಂಗಿಯಾದ 'ಕೇಷಾರ'ಳ ನಟನೆಯೂ ಹಾಡುವಿಕೆಯೂ ಈ ಚಿತ್ರದ ಭೂಷಣವು. ಇಲ್ಲಿ ಶಾಂತಾ ಆಪ್ಟೆಯು ಹೊಗಳಿಕೆಗೆ ಅರ್ಹಳು. ಭೂವಾ ಸಾಹೇಬ್ ಮತ್ತು ಜೋಟು ಇವರ ಹಾಸ್ಯವೂ, ಜಗಳಗಂಟತನವೂ ಪ್ರೇಕ್ಷಣೀಯವಿದೆ.

ಫೋಟೋಗ್ರಫಿಯೂ, ಅಡಿಯೋಗ್ರಫಿಯೂ ಬಹು ಶ್ಲಾಘನೀಯವಿವೆ. ಅಲ್ಲದೆ 'ರಜಪೂತ ರಮಣಿ'ಯಲ್ಲಿನ ಅಪ್ರತ್ಯಕ್ಷಸಂಗೀತದ (Background music) ಮಧುರತೆಯನ್ನು ಇನ್ನಾವ ಚಲಚ್ಚಿತ್ರದಲ್ಲೂ ಕಾಣುವುದು ಅತಿ ದುರ್ಲಭವು. ಈ ಚಿತ್ರದಲ್ಲಿ ಹಿಂದಿನ ರಜಪೂತರ ವೈಭವವನ್ನೂ ಶೌರ್ಯಸಾಹಸಗಳನ್ನೂ, ದೇಶಪ್ರೇಮವನ್ನೂ, ರಜಪೂತ ರಮಣಿಯರ ಪತಿಭಕ್ತಿಯನ್ನೂ, ದೇಶಭಕ್ತಿಯನ್ನೂ, ಸಹನಾಶಕ್ತಿಯನ್ನೂ, ಅಪೂರ್ವ ಸೌಂದರ್ಯವನ್ನೂ ನೋಡಿ ಸಂತೋಷಿಸದ ಮಾನವನು ಅದಾವನು?

MYSORE & COORG PRODUCE AGENCY,
MANGALORE. TELE: MYCO.

ಮೈಸೂರ್ ಎಂಡ್ ಕೂರ್ಗ್ ಪ್ರೊಡ್ಯೂಸ್ ಏಜನ್ಸಿ,
ಮಂಗಳೂರು.

ಆಫೀಸು:—ಬಂದ್ರುದ ಮೆಸ್ಸರ್ಸ್. ಎಸ್ಸಿನ್‌ವಾಲ್ ಎಂಡ್ ಕಂಪೆನಿ, ಲಿಮಿಟೆಡ್, ಇವರ ಆಫೀಸು ಬಳಿ.

No. 10. **ತಾ. 15—1—1937.**

ಮಾಡುವ ನಮಸ್ಕಾರ.

ಹಾಲಿ ಮಂಗಳೂರು ಬಜಾರು ಧಾರಣೆ.

Plantation Coffee. ಪ್ಲೇಂಟೇಶನ್ ಕಾಫಿ.

Assortment ಎಸೊರ್ಟ್‌ಮೆಂಟು. ರೂ. 35-2-0ರಿಂದ ರೂ. 36-11-0ರ ವರೇಗೆ.	A. Size ಎ. ಸೈಜು. ರೂ. 34-10-0.	B. Size ಬಿ. ಸೈಜು. ರೂ. 33-11-0.
C. Size ಸಿ. ಸೈಜು. ರೂ. 31—4—0.	P. B. ಪೀಬ್ರಿ. ರೂ. 48—9—0.	Triage ಟ್ರಿಯೆಜ್. ರೂ. 29—4—0.

Native Coffee. ನೇಟಿವ್ ಕಾಫಿ.

Cherry ಚೆರಿ ಗಾರ್ಬಲ್. ರೂ. 165-14-0ರಿಂದ ರೂ. 177-10-0ರ ವರೇಗೆ.	Peaberry ಪೀಬ್ರಿ. ರೂ. 192—5—0.	Cherry Triage ಚೆರಿ ಟ್ರಿಯೆಜ್. ರೂ. 130—0—0.

Pounded ಕುಟ್ಟಿದ ಕಾಫಿ. 5%	Mixed ಮಿಶ್ರ ಕಾಫಿ.	Black ಕಪ್ಪು ಕಾಫಿ.	Black Brown. ಬ್ಲೇಕ್ ಬ್ರೌನ್.	Refuse ನುಚ್ಚು
ರೂ. 156ರಿಂದ ರೂ. 162-13-0ರ ವರೇಗೆ.	ರೂ. —	ರೂ. 80-0-0.	ರೂ. 107-0-0.	ರೂ. 50ರಿಂದ ರೂ. 75ರ ವರೇಗೆ.

Robusta ರೊಬಸ್ಟಾ. ರೂ. 110ರಿಂದ—115.	Robusta P. B. ರೊಬಸ್ಟಾ ಪೀಬ್ರಿ. ರೂ. —	Robusta Black ರೊಬಸ್ಟಾ ಬ್ಲೇಕ್. ರೂ. —
Coorg Cardamoms ಕೊಡಗು ಯಾಲಕ್ಕಿ. ರೂ. 64-0-0ರಿಂದ ರೂ. 70-5-0ರ ವರೇಗೆ.		Saklaspur Cardamom ಮಂಜರಾಬಾದ್ ಯಾಲಕ್ಕಿ ರೂ. 68—0—0ರಿಂದ ರೂ. 75—4—0ರ ವರೇಗೆ.

ಈ ವಾರದಲ್ಲಿ ವ್ಯಾಪಾರವಾದ ಪ್ಲೇಂಟೇಶನ್ ಕಾಫಿ:—

ರೂ. 29—4—0ರಂತೆ	52	ಹಂಡ್ರಡ್‌ವೇಟ್ಸು.
ರೂ. 34-10—0 ,,	5	,,
ರೂ. 35—1—0 ,,	97	,,
ರೂ. 35—4—0 ,,	90	,,
ರೂ. 35—7—0 ,,	28	,,
ರೂ. 33—5—0 ,,	48	,,
ರೂ. 33-12—0 ,,	31	,,
ರೂ. 35-12—0 ,,	40	,,
ರೂ. 32—4—0 ,,	32	,,
ರೂ. 36—4—0 ,,	37	,,
ರೂ. 36—0—0 ,,	139	,,
ರೂ. 36-11—0 ,,	37	,,

ನೇಟಿವ್ ಕಾಫಿ:—

ರೂ. 172— 8—0ರಂತೆ	11½	ಖಂಡಿ.
ರೂ. 173—13—0 ,,	6	,,
ರೂ. 165-14—0 ,,	8	,,
ರೂ. 170— 0—0 ,,	1	,,
ರೂ. 168—13—0 ,,	4	,,
ರೂ. 158— 1—0 ,,	6½	,,
ರೂ. 173— 3—0 ,,	3	,,
ರೂ. 175— 5—0 ,,	5¼	,,
ರೂ. 171—12—0 ,,	6	,,
ರೂ. 172— 9—0 ,,	5	,,
ರೂ. 175—10—0 ,,	10	,,
ರೂ. 174— 9—0 ,,	9	,,
ರೂ. 177—10—0 ,,	3¾	,,

ಕಾಫಿಯ ಮಾರ್ಕೇಟು:— ಈ ವಾರದಲ್ಲಿ ತೇಜಿಯಿಂದ ವ್ಯಾಪಾರವಾಗಲು ಪ್ರಾರಂಭವಾಗಿದೆ. ಮುಂದೆ ಕೂಡಾ ತೇಜಿ ಸ್ವಭಾವ ಕಾಣುತ್ತೆ. ದಕ್ಷಿಣ ಇಂಡಿಯಾ ಜನರು ಕೆಲವರು ಬಂದಿರುವುದರಿಂದ ಮುಂದಕ್ಕೂ ತೇಜಿ ಬರುವ ಅಭಿಪ್ರಾಯ. ಮುಂದಿನ ತೇಜಿಮಂದಿ ಹಿಂದಿನಿಂದ.

ಎಲ್ಲಾ ಪ್ಲೇಂಟರುಗಳು ಮತ್ತು ಸಾಹುಕಾರರಲ್ಲಿ ವಿಜ್ಞಾಪನೆ:— ಪೂರ್ಣ ಅಭಿಮಾನವಿಟ್ಟು ಮಹಲು ರವಾನಿಸಿಕೊಡಬೇಕಾಗಿಯೂ, ಬಂದ ಮಹಲಿಗೆ ಅಪೇಕ್ಷೆ ಪ್ರಕಾರ ಇತ್ತಟ್ಟಿನವರ ಸ್ನೇಹಾಚಾರದ ಯಾವತ್ತು ಅನುಕೂಲತೆಯನ್ನೂ ಒದಗಿಸಿಕೊಟ್ಟು ಬಜಾರುಧಾರಣೆಯಲ್ಲಿ ಆದಷ್ಟು ಚೌಕಶಿಯಿಂದ ವಿಕ್ರಿತಪಡಿಸಿ ಕೊಡುತ್ತೇನೆ.

ಇಂತಿ ನಮಸ್ಕಾರ.

BANKER
SHA DHANJI BHAGAWANDAS.

N. SUBBA RAO,
Proprietor.

GREETINGS

In the spirit of the coming season and in deepest appreciation of the patronage, confidence and goodwill accorded our bank, we extend to all our customers and other friends our sincerest wishes for a HAPPY NEW YEAR. May the days be filled for YOU and YOURS with cheer and happiness.

Estd: 1906

CANARA BANK
LIMITED.

ಕಂಠೀರವ

(ವಸಂತತಿಲಕವೃತ್ತಮ್)

ನಿಂದಂತು ನೀತಿನಿಪುಣಾ ಯದಿ ವಾ ಸ್ತುವಂತು ।
ಲಕ್ಷ್ಮೀಸ್ಸಮಾವಿಶತು ಗಚ್ಛತು ವಾ ಯಥೇಷ್ಟಮ್ ॥
ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ ।
ನ್ಯಾಯ್ಯಾತ್ಪಥಃ ಪ್ರವಿಚಲಂತಿ ಪದಂ ನ ಧೀರಾಃ ॥

[ಭರ್ತೃಹರಿ.

(ಚೌಪದಿ)

ನಿಂದಿಸಲಿ ವಂದಿಸಲಿ, ಸಂಪ ಧೀರರು ತಾ- ।
ವಿಂದಿರೆಯು ಹೊಂದಿರಲಿ ನಂದಿರಲಿ, ಮತ್ತಾ ॥
ಇಂದಿಗೊ ಯುಗಾಂತರಕೊ ಬಂದಿರಲಿ ಮರಣಂ, ।
ಹಿಂದಿಡರು ನ್ಯಾಯಪಥದಿಂದೊಂದು ಚರಣಂ! ॥

M. N.

XVIII] ಮಂಗಳೂರು, ತಾರೀಕು ೧೫—೧—೧೯೩೭ [೮೨

೧೮೫೫ ಧಾತು ಸಂವತ್ಸರದ ಪುಷ್ಯ ಶು। ೩ ಶುಕ್ರವಾರ

'ಕಂಠೀರವ'ನಿಗಾಗಿ ಪ್ರಚಾರಕಾರ್ಯ!

ಯಾವ ವೃತ್ತಿಗೆ 'ಆಸಾಮಿ'ಗಳು ದೊರಕಿದರೂ, ಕನ್ನಡ ಪತ್ರಿಕೆಗಳಿಗೆ 'ಕ್ಯಾನ್‌ವಾಸಿಂಗ್ ಏಜಂಟ್'ರುಗಳು ದೊರಕುವುದು ಮಹಾ ದುರ್ಲಭ. 'ಕಂಠೀರವ'ನು, ತನಗಿಂತಹ ಏಜಂಟರುಗಳು ಬೇಕೆಂದು, ಕೆಲ ಕಾಲದ ಹಿಂದೆ ಅಪೇಕ್ಷಿಸಿದ್ದ; ಪ್ರಯತ್ನಿಸಿದ್ದ. ಆಗಲವನಿಗೆ ಅವರು ದೊರಕಿರಲಿಲ್ಲ;

ಈಗ 'ಕಂಠೀರವ'ನ ದೆಸೆ ಏಕೋ ಸ್ವಲ್ಪ ತಿರುಗಿದ ಹಾಗೆ ತೋರುತ್ತದೆ. ನಮ್ಮ ಜಿಲ್ಲೆಯ ಕಾಂಗ್ರೆಸ್ ಚುನಾವಣೆಯ ಉಮೇದುವಾರರಲ್ಲಿ ಒಬ್ಬರು 'ಕಂಠೀರವ'ನ ಮೇಲೆ ಪರಮಾನುಗ್ರಹ ವಾಯಿಡಿದ ಹಾಗೊಂದು ವಾರ್ತೆ. ಅವರು, ಕೆಲವೆಡೆಗಳಲ್ಲಿ—ಕುಂದಾಪುರದ ಮೂಲೆಯಲ್ಲಿಯೋ ಕಾರ್ಕಳದ ಗುಮಟನ ಬೆಟ್ಟದಲ್ಲಿಯೆಲ್ಲಿಯೋ-ಅಲ್ಲಿಷ್ಟು, ಇಲ್ಲಿಷ್ಟು 'ಕಂಠೀರವ'ನ ಪ್ರಸಾದ ಹಂಚಿತ್ತ, 'ಕಂಠೀರವ'ನಿಗೆ ಹೀಗೆ, ಸಂಬಳವಿಲ್ಲದೆ, ಪ್ರಚಾರಕಾರ್ಯದ ಉಪಕಾರವನ್ನೆಸಗುತ್ತಿರುವುದು ತುಂಬ ಸಂತೋಷದ ಸುದ್ದಿ. ಇದಕ್ಕಾಗಿ, ತನಗೆ ಲಾಭ ದೊರಕುವಾಗ 'ಕಂಠೀರವ'ನು ತನ್ನನ್ನು ತಾನು ಅಭಿನಂದಿಸಿಕೊಳ್ಳಬೇಡವೇ?

ಡಿ॥ ಬೋರ್ಡಿನಲ್ಲಿ ಮಾತ್ರವೇ ಕೆಲವು ಮಂದಿ ಶೂರ ಮೆಂಬರರು 'ಕಂಠೀರವ'ನ ಹೆಸರೆತ್ತಿ, ಜಿಲ್ಲೆಯ ಮತದಾರರ ಹಿತದ ಸೇವೆಯನ್ನು, ಇದುವರೆಗೆ, ಸಲ್ಲಿಸುತ್ತಿದ್ದರು. ಈಗ ಹೋದಲ್ಲೆಲ್ಲ, 'ಕಂಠೀರವ'ನೇ ಇವರ ತಲೆಯಲ್ಲಿ ಸುತ್ತುತ್ತ, ಹೊಸ ಚುನಾವಣೆಯ ಭಾಷಣಕಾಲದಲ್ಲಿ 'ಕಂಠೀರವ'ನ ನಾಮಸ್ಮರಣೆ ಮಾಡುತ್ತಿರುವುದು ಜನ್ಮಾಂತರದ ಫಲವೋ, ಈ ಜನ್ಮದ ಪುಣ್ಯಪರಿಪಾಕವೋ ಲೆಡ್‌ಬೀಟರರ ಶಿಷ್ಯವರ್ಗದವರೇ ಹೇಳಲು ಸಮರ್ಥರು.

ಕಾಂಗ್ರೆಸಿನ ಪ್ರೇಮಪಾತ್ರರಾದ ಇಂತಹ ಕಾಂಗ್ರೆಸಿನ ವರಪುತ್ರರು,—ಒಂದು ವೇಳೆ ಈ ಮಹಾ ಕಾರ್ಯದ ಸೂತ್ರಧಾರಿಗಳೋ, ಪುರೋಹಿತರೋ ಆಗಿ, ಪವಿತ್ರ ಹಾಕಿಕೊಂಡಿದ್ದರೆ, 'ಕಂಠೀರವ'ನಿಗೆ ಅದರಿಂದ ಆಶ್ಚರ್ಯವೇನೂ ಆಗದೆನ್ನಿ. ಡಿ॥ ಬೋರ್ಡಿನ ಪ್ರೆಸಿಡೆಂಟ್‌ಗಿರಿಯಲ್ಲಿ 'ಕಂಠೀರವ'ನಿಂದ ನೊಂದು, ಬೆಂದವರು, ಈಗಲಾದರೂ ಮುಯ್ಯಿಗೆ ಮುಯ್ಯಿ ತೀರಿಸದಿದ್ದರಾದೀತೇ? ಅಲ್ಲದಿದ್ದರೆ, ಈ ಜಿಲ್ಲೆಯ ಕಾಂಗ್ರೆಸ್ ಉಮೇದುವಾರಿಕೆಯ 'ಪ್ರಿಸ್ಟೆಜ್' ಉಳಿಯುವುದೆಂತು? ಕಾಂಗ್ರೆಸಿನ ಉಚ್ಚಧ್ಯೇಯ, ಬಿಗಿಯಾದ ಶಿಸ್ತುಗಳನ್ನು ಪಾಲಿಸಿದ ಅಪಾರ ಕೀರ್ತಿಯು ಪ್ರಾಪ್ತವಾಗುವುದಾದರೂ ಹೇಗೆ?

'ಕಂಠೀರವ' ಮತ್ತೂ 'ಜಸ್ಟೀಸ್' ಎಂಬೆರಡು ಅಪವಿತ್ರ ಹೆಸರುಗಳು, ಪದೇ ಪದೇ ಜತೆಗೂಡಿ, ಲವು ಪುಣ್ಯಶ್ಲೋಕರ, ದೇಶೋದ್ಧಾರಕರ ಪಾವನನಾದನಗಳಿಂದ ಮುತ್ತಿನಂತೆ ಹೊರ ಮತ್ತೂ ಬೀಳುತ್ತಿರುವ ಸಂಭ್ರಮದ ಸಡಗರದ ಪರಿಯನ್ನು ನಾವು ದೂರದಿಂದ ಕೇಳಿದೆ ವರು ಯಾವ ಅರ್ಥದಲ್ಲಿ ಆ ಸೊಲ್ಲನ್ನು ಹಾಡುವರೋ! ಅಂತೂ 'ಕಂಠೀರವ'ನು ದು 'ನ್ಯಾಯ'ವೊಂದನ್ನೇ—'ಬಾಯಲ್ಲೊಂದು ಪಾರ್ಟಿ, ಮನಸ್ಸಿನಲ್ಲೊಂದು ಪಾರ್ಟಿ' ಎಂಬಂತಿರುವ, ಕಪಟವೇಷಧಾರಿಗಳ, ಮನಸ್ಸಾಕ್ಷಿ ಇಲ್ಲದ ಆಷಾಢಭೂತಿಗಳ, ದೇಶದ್ರೋಹಿಗಳ, ಲಜ್ಜೆಭಂಡರ, ಸಮಯಕ್ಕೆ ತಕ್ಕನಾದ ಆ ಪಾಲಿಸಿ, ಡಿವ್ಲೊಮೆಸಿ, ಹಿಪೊಕ್ರೆಸಿಗಳನ್ನೆಂದಿಗೂ ಅಲ್ಲವೆಂದು ಗೌರವವುಳ್ಳ ಪ್ರತಿಷ್ಠೆಯ ವ್ಯಕ್ತಿಗಳಿಗೂ ತಿಳಿಯದೇನು?

ಅಂದಿನ ಡಿ॥ ಬೋರ್ಡ್ ಪ್ರೆಸಿಡೆಂಟರ ಚುನಾವಣೆಯಲ್ಲಿ, ವಿರುದ್ಧಪಕ್ಷಕ್ಕೆ ಓಟ್ ಕೊಟ್ಟರೆಂಬ ಆ ಕಾಂಗ್ರೆಸ್ ಮೆಂಬರರ ವಿಚಾರದಲ್ಲಿ ಸೋತವರು, ಯಾವ ರೀತಿಯಲ್ಲಿಯೂ ಮುಯ್ಯಿಗೆ ಮುಯ್ಯಿ ತೀರಿಸುವ ಸಾಹಸಕಾರ್ಯವನ್ನು ಕೈಕೊಂಡಂತೆ ತೋರಲಿಲ್ಲ. ಅಂತಹವರಿಗೆ ಸುಲಭದಲ್ಲಿ ಸಿಕ್ಕಿರುವುದೆಂದರೆ—'ಕಂಠೀರವ' ಮಾತ್ರ; ಅಲ್ಲಿಯೂ ಅದರ ಹೊಗಳಿಕೆ ತೆಗಳಿಕೆ ಹಿಂದುಗಡೆಯೇ. ಎಂತಹ ಧೈರ್ಯಶಾಲಿಗಳು! ನಿಜವಾಗಿಯೂ ಕಾಂಗ್ರೆಸಿನ ಹೆಸರನ್ನುಳಿಸಬೇಕಾದರೆ, ಸಭಾಸದನಗಳಲ್ಲಿ ಹೋರಾಡಿ, ನಿಮ್ಮ ಮನೆಯ ಬಾಗಿಲ ವರೆಗೂ, ನಮ್ಮ ಬಾಗಿಲ ವರೆಗೂ 'ಸ್ವರಾಜ್ಯ'ದ ಹೊರೆಯನ್ನು ಹೊಕ್ಕು ತರಬೇಕಾದರೆ ಇಂತಹ ಪ್ರಚಂಡ ಅಸಹಾಯಶೂರ ಪ್ರತಿನಿಧಿಗಳೇ ಬೇಕು! ಖಂಡಿತ!

ಅದಿರಲಿ; ಇಂದು ಡಿ॥ ಬೋರ್ಡಿನ ಪರಾಭವದಿಂದ ಉಂಟಾದ ಉರಿಯನ್ನು 'ಕಂಠೀರವ'ನ ಮೇಲೆ ತೀರಿಸಿಕೊಳ್ಳುವ ಹವ್ಯಾಸಕ್ಕೆ ಹೊರಡುವ ಮೊದಲು ಅದರ ಹಿಂದಿನ ಡಿ॥ ಬೋರ್ಡಿನ ಅಧ್ಯಕ್ಷತೆಯ ಚುನಾವಣೆಯ ಕತೆಯನ್ನು ಯಾರೂ ನೆನಪಿಗೆ ತಂದುಕೊಳ್ಳಲಾರರೇ? ಅಧ್ಯಕ್ಷತೆಗೆ ಉಮೇದುವಾರರಿನಿಸಿದ್ದನರು ಅಕಸ್ಮಾತ್ ಹಿಂದೆ ಸರಿದು, ಮತ್ತೊಬ್ಬರಾಗಲೇ ಅಧ್ಯಕ್ಷರು ಹೇಗಾದರು? ಆಗ ಅವರಿವರ ಬಣ್ಣ, ಪಾಲಿಸಿ ಏನಾಗಿದ್ದಿತೋ!

'ಜಸ್ಟೀಸ್' ಕೆಟ್ಟದಿರಬಹುದು; 'ಕಂಠೀರವ'ನೂ ಹಾಗೇ ಎನ್ನಿ. ಆದರೆ ಕಾಂಗ್ರೆಸ್ ಪ್ರಮುಖರೆಂಬ ಮಹಾನುಭಾವರು ಯಾರಾದರೂ, ಕಳೆದ ಸಲ, ಜಸ್ಟೀಸ್ ಪಾರ್ಟಿಯ ಮಿನಿಸ್ಟರರು ಇಲ್ಲಿಗೆ ಬಂದಿದ್ದಾಗ, ಅವರಿಗೆ ಊಟ ಉಪಚಾರಗಳನ್ನು ಮಾಡಿಸಿದುದು ನಿಜವೇ? ನಿಜವಾಗಿದ್ದರೆ, ಜಸ್ಟೀಸ್ ಪಾರ್ಟಿಯ ಹೃದಯವಿಲ್ಲದೆ, ಈ ಕಾರ್ಯವು, ಅಷ್ಟು ಸರಾಗವಾಗಿ ಸಾಗುವುದುಂಟೇ? ಈ ಕುರಿತು 'ಕಾಂಗ್ರೆಸಿನ ಶಿಸ್ತು' ಏನು ಹೇಳುತ್ತಿದೆ?

ತ್ಯಾಗದಲ್ಲಿ ಹಲವು ಮಂದಿ ಕರ್ಣರೇ ಆಗಿರಬಹುದು—ಬಿಡಿರಾ ಮಾತು. ಆದರೆ, ಬಿರುದುಬಾವಲಿಗಳ ತ್ಯಾಗಕ್ಕೆ ಇಷ್ಟು ದೀರ್ಘ ಕಾಲ ಬೇಕಾಯಿತೇಕೆ? ಕಾಂಗ್ರೆಸಿನವರ ಒತ್ತಾಯವಿದ್ದಿತೇ? ತಾವಾಗಿ ಕೈಬಿಟ್ಟರೇ?

'ಸೆಟ್ಟರು, ಭಟ್ಟರೆಂದು' ಒಟ್ಟು ಅಟ್ಟಕ್ಕೇರಿಸಿ ಅವರ ಉಮೇದುವಾರಿಕೆಯನ್ನು ಸಮರ್ಥಿಸಿದ್ದರೆ, 'ಕಂಠೀರವ' ಬದುಕುತ್ತಿದ್ದ. ಆದರೆ ನಿಲ್ಲಬೇಕೆಂಬ ಹಟವನ್ನು, ನಿಲ್ಲಿಸಲೇಬೇಕೆಂಬ ಪ್ರತಿಜ್ಞೆಯನ್ನು ಸಮರ್ಥಿಸಲು 'ಕಂಠೀರವ'ನು ದಾರಿಗಾಣಲಿಲ್ಲ. ಅಲ್ಲ,-ಎಲ್ಲವನ್ನೂ ಬಿಟ್ಟು ಇಂತಹವರಿಗೇ ಓಟು ಕೊಡಿ ಎನ್ನಲು 'ಕಂಠೀರವ'ನು ಯಾರು? ಹಾಗೆನ್ನಲು ಅವರು ಇದುವರೆಗೆ ಮಾಡಿರುವುದಾದರೂ ಏನು? ನಿರ್ಜೀವವಾದ ಕೌನ್ಸಿಲಿನ ಭಾಷಣ, ಪ್ರಶ್ನೆಗಳಿಂದ ಒಬ್ಬನಿಗೆ ಪುನಃ ಪುನಃ ಮೆಂಬರನಾಗುವ ಯೋಗ್ಯತೆ ಬಂದೀತೇ? ಏನು ಮಾಡಿದುದಕ್ಕೆ, ಎಷ್ಟು ಕಾಲ, ಒಬ್ಬರಿಗೇ ಮೆಂಬರಿಕೆಯ ಪಟ್ಟವಾಗಬೇಕು? ಮುಂದಾದರೂ ಇಂತಹವರಿಂದಾಗುವುದೇನು? 'ಕಂಠೀರವ'ನ ಪ್ರಚಾರಕಾರ್ಯಕ್ಕೆ ಸಹಾಯವೇ, ಅಥವಾ ಕಾಂಗ್ರೆಸಿನ ಪರವಾಗಿ, ಕೈಗಳೆಣಿಕೆಗೆ, ದೊಡ್ಡ ಸಹಾಯವೇ?

ನವುಗೆ ಹುರುಪು, ಅಭಿಮಾನ, ಧೈರ್ಯ ಸ್ಥೈರ್ಯಗಳಿಂದಲಾಗಲೀ, ಅಧಿಕಾರಿಗಳ ಮನಸ್ಸನ್ನು ತೃಪ್ತಿಪಡಿಸಿಯೇ ಆಗಲಿ ಪ್ರಜೆಗಳ ಹಿತವನ್ನು ಸಾಧಿಸಬಲ್ಲ ಸಮರ್ಥ ಪ್ರತಿನಿಧಿಗಳು ಬೇಕಾಗಿದ್ದಾರೆ. ಇವೆರಡೂ ಇಲ್ಲದವರು, ಇದ್ದಂತೆ ನಟಿಸುವವರು ಬೇಕಿಲ್ಲ. ಯಾವ ನಮ್ಮ ಕೌನ್ಸಿಲು ಎಸೆಂಬ್ಲಿ ಸ್ಥಾನಗಳಿಗೂ, ಪೌರುಷವಿಲ್ಲದವರನ್ನೋ, ಅಧೀರರನ್ನೋ ಎಂದಿಗೂ ಆರಿಸಕೂಡದು!

'ಕಂಠೀರವ'ನನ್ನು ಬಯ್ಯಲೂ, ನಿಂದಿಸಲೂ, ಟೀಕಿಸಲೂ ಅಪೇಕ್ಷಿಸುವವರಿಗೆ ನಾವು ಹೇಳುವುದಿಷ್ಟು:—'ಈ ಕೆಲಸವನ್ನು ಎಲ್ಲಿಯೋ ಸಂದಿ ಮೂಲೆಯಲ್ಲಿ ಮಾಡಬೇಡಿ, ನಮ್ಮ ಹಿಂದುಗಡೆ! ಇಲ್ಲಿನ ಮೈದಾನಿನಲ್ಲಿಯೇ ಬೇಕಾದರೆ ಇದಕ್ಕಾಗಿಯೇ ಸಭೆ ಕರೆದು, 'ಕಂಠೀರವ'ನು 'ಜಸ್ಟೀಸ್' ಪಕ್ಷಕ್ಕೇ ಸೇರಿದವನೆಂದು ಸಕಾರಣವಾಗಿ ನಮ್ಮೆದುರಿಗೇ ಸ್ಥಾಪಿಸಿಬಿಡಿ. ಹಿಂದುಗಡೆ ಮಾತಾಡುವುದು ಗಂಡುಸರ ಎದೆಯ ಲಕ್ಷಣವಲ್ಲ; ಪುರುಷಲಕ್ಷಣವು ಈ ಉದ್ಯೋಗದಲ್ಲಿಯಾದರೂ ತೋರಿಬರಲಿ, ಪಾಪ!'

ಮಂಗಳೂರು ಒಟೋಮೊ ಬ್ಯಾಲ್ಸ್ ಲಿಮಿಟೆಡ್.

ಈ ಹೆಸರಿನ ನಿಯಮಿತ ಸಂಸ್ಥೆಯು ಹೊಸದಾಗಿ ನಮ್ಮ ಪಟ್ಟಣದಲ್ಲಿ ಸ್ಥಾಪಿತವಾಗಿದ್ದು, ಇದರ ಜಾಹಿರಾತು ಈ ಸಂಚಿಕೆಯ ಇನ್ನೊಂದೆಡೆಯಲ್ಲಿ ಪ್ರಕಟವಾಗಿರುವುದು. ಇದರ ಅಧಿಕೃತ ಮೂಲಧನವು ೧ ಲಕ್ಷ ರೂಪಾಯಿಗಳು; ಇದು ೧೦ ರೂಪಾಯಿಗಳ ೧೦ ಸಾವಿರ ಷೇರುಗಳ ಮೂಲಕವಾಗಿ ಶೇಖರಿಸಲ್ಪಡುವುದು. ಸದ್ಯಕ್ಕೆ ಸಂಗ್ರಹಿಸಲ್ಪಡುವುದು ಇದರ ಅರಿವಾಸಿ ಮಾತ್ರ ಅಂದರೆ ರೂ. ೧೦ ಮೌಲ್ಯದ ೫,೦೦೦ ಷೇರುಗಳು. ಷೇರುವ್ಯಾಪಾರ ಕುಶಲರಾದ ಪ್ರತಿಷ್ಠಿತ ಮಹನೀಯರೇ ಇದರ

ಮಂಗಳೂರು

ಈಗ್ಗೆ ೫, ೬ ವಾರಗಳಿಂದ ದಕ್ಷಿಣ ಕನ್ನಡಿಗರನ್ನು ತಮ್ಮ ನಯನಮನೋಹರಳಾದ ಅಧುನಿಕ ನಾಟಕಗಳಿಂದ ಬೆರಗುಗೊಳಿಸುತ್ತಿರುವ ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಯವರು ಇನ್ನೊಂದೆರಡು ವಾರದೊಳಗಾಗಿಯೇ ಚಿಕ್ಕಮಗಳೂರಿಗೆ ಮುಂಡಕ್ಕೆ ಪ್ರಯಾಣ ಮಾಡಲಿರುವರೆಂದು ತಿಳಿಯುತ್ತೇವೆ. ಮಹಾಜನರ ಪ್ರೋತ್ಸಾಹವು ಇವರಿಗೆ ತುಂಬಾ ಇದ್ದು, ಇನ್ನೂ ಸಿಗುವದರಲ್ಲಿರುವದರಿಂದ ಇವರು ಇಷ್ಟು ಜಾಗ್ರತೆಯಾಗಿಯೇ ಹೊರಡಲು ಕಾರಣವೇನೆಂದು ತಿಳಿಯುವದಿಲ್ಲ. ಇನ್ನೂ ಹೊಸ ನಾಟಕಗಳನ್ನು ಅಭಿನಯಿಸಿ, ಮಹಾಜನರಿಂದ ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನು ಪಡೆಯಲೆಂದು ಹಾರೈಸುತ್ತೇವೆ.

ಮಂಗಳೂರಿನ ಬಾಂಧವಬಳಗದ ಒಂಭತ್ತನೆ ವಾರ್ಷಿಕೋತ್ಸವವು ಇದೇ ಬರುವ ತಾರೀಕು ೧೭ನೇ ಆದಿತ್ಯವಾರ ಸಾಯಂಕಾಲ ಘಂಟೆ ೪-೩೦ಕ್ಕೆ ಕೆನರಾ ಹ್ಯಾಸ್ಕೂಲಿನ ಸುಬ್ರಾಯ ಪೈ ವೆಂಕೋರಿಯಲ್ ಹೋಲಿನಲ್ಲಿ ಜರಗುವುದು. ಪಂಚಾಮೃತದ ಲೇಖಕರೂ, ಗವರ್ನಮೆಂಟ್ ಕಾಲೇಜಿನ ಜೂನಿಯರ್ ಪಂಡಿತರೂ ಆದ ಶ್ರೀ. ಕೆ. ವಿ. ಕೃಷ್ಣ ಭಟ್ಟ ವಿದ್ವಾನ್, ಕಾವೇರಿಕಾನ ಇವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವರು. ಕನ್ನಡಭಾಷಾಭಿಮಾನಿಗಳೆಲ್ಲರಿಗೂ ಸುಸ್ವಾಗತ ವಿದೆ.

ಇಲ್ಲಿಯ ಡಿ॥ ಮುನ್ಸೀಫರಾದ ಎಂ. ಏ. ವಿ. ವೆಂಕಟ್ರಮಣ ಅಯ್ಯರ್, ಬಿ. ಎ., ಇವರಿಗೆ ಉಡ್ಪಿಗೆ ವರ್ಗವಾಗಿದ್ದು ಇವರು ಇದೇ ತಾ. ೧೧ರಲ್ಲು ತಮ್ಮ ಚಾರ್ಜನ್ನು ಕೊಟ್ಟಿರುವರು. ತಾ. ೧೩ನೇ ಪ್ರಾತಃಕಾಲ ಇಲ್ಲಿಯ ವಕೀಲರಾದ ಶ್ರೀ. ಎಂ. ಎ. ತಲಕ್ಷ್ವರರವರು ಅವರಿಗೊಂದು ಸತ್ಕಾರಕೂಟವನ್ನೇರ್ಪಡಿಸಿದ್ದರು. ಅಂದೇ ಸಾಯಂಕಾಲ ಬಾರ್ ಅಸೋಸಿಯೇಶನಿನವರೂ ಅವರನ್ನು ಸತ್ಕರಿಸಿದರು.

ರಜೆಯ ಮೇಲಿದ್ದ ಡಾ. ಕೆ. ಎಮ್. ನಾಯಕ್‌ರವರು ಪುನಃ ಇಲ್ಲಿಯ ಅಸಿಸ್ಟಾಂಟ್ ಡಿಸ್ಪೆನ್ಸರಿ ಮೆಡಿಕಲ್ ಆಫೀಸರರಾಗಿ ನೇಮಕಹೊಂದಿರುವರು.

ಈ ಸಂಚಿಕೆಯೊಡನೆ ಭಾಗಲ್ಪುರದ 'ಬಿಹಾರ್ ಕೆಮಿಕಲ್ ವರ್ಕ್ಸ್'ನ ಪುರವಣಿಯನ್ನಿಟ್ಟಿದೆ. ವಾಚಕರು ಗಮನಿಸಲಿ—ಸಂ.

ಇಲ್ಲಿಯ ಸೈಂಟ್ ಆನ್ಸ್ ಹ್ಯಾಸ್ಕೂಲಿನಲ್ಲಿ ಇದೇ ತಾ. ೧೩ನೇ ಮಂಗಳವಾರ ವರ್ಧಂತ್ಯುತ್ಸವವು ಬೇಗಂ ಅಮಿರುದ್ದೀನ್‌ರವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಲ್ಲಿ ಜರಗಿತು. ರೆವರೆಂಡ್ ಫಾದರ್ ಜುಲಿಯಾನ್ ಡಿಸೋಜಾರವರು ಶಾಲಾ ರಿಪೋರ್ಟನ್ನು ಓದಿದೊಡನೆ ಮಕ್ಕಳ ನಾನಾತರದ ಆಟ, ನಾಟ್ಯ, ತಮಾಷೆಗಳು ನಡೆದುವು. ಇವುಗಳಲ್ಲಿ 'Baloon Dance' 'Buy yourself a broom' ಎಂಬ

(೧೦ನೇ ಪುಟ ನೋಡಿ)

ನಿರ್ದೇಶಕಮಂಡಳಿಯಲ್ಲಿರುವರು. ಮೇಲ್ವಿಚಾರಕರೂ ಈ ಉದ್ಯಮದಲ್ಲಿ ಅನುಭವಶಾಲಿಗಳಾದವರೇ ಆಗಿರುವರು.

ಅನುಕೂಲತೆಯ ಆವಶ್ಯಕತೆಗಾಗಲಿ, ಸಮಯದ ಸದುಪಯೋಗಕ್ಕಾಗಲಿ ಶೀಘ್ರಗಾಮಿಗಳಾದ ಮೋಟಾರು ವಾಹನಗಳು ಬಹಳ ಪ್ರಯೋಜನಕರವಾಗುತ್ತವೆ. ಅಂತೆಯೇ ಅವುಗಳ ಉಪಯೋಗವೂ ದಿನೇ ದಿನೇ ವೃದ್ಧಿಯಾಗುತ್ತಿದೆ. ಅವುಗಳ ಪುರವಣೆಗೂ ಸಾಕಷ್ಟು ಎಡೆಯಿದೆ. ಆದರೆ ಪ್ರತಿಯೋರ್ವನಿಗೂ ತನ್ನದೇ ಆದ ಒಂದು ಸ್ವಂತ ವಾಹನವನ್ನು ಇಡುವ ದೆಂದರೆ ಸುಲಭಸಾಧ್ಯವಾದ ವಿಷಯವಲ್ಲ. ನಗರವಾಸಿಗಳಿಗೆ ಒಂದೆಡೆಯಿಂದ ಇನ್ನೊಂದೆಡೆಗೆ ಹೋಗಲಿಕ್ಕೂ, ವ್ಯಾಪಾರಸೌಕರ್ಯಕ್ಕೂ, ವಿದ್ಯಾರ್ಥಿಗಳಿಗೂ, ನಾನಾ ದಂಧೆಯವರಿಗೂ ನಗರದೊಳಗೊಂದು ಮೋಟಾರು ಸರ್ವಿಸನ್ನಿದ್ದರೆ ತುಂಬಾ ಅನುಕೂಲವೆಂಬುದು ನಿಸ್ಸಂದೇಹ. ಇಂಥಾ ಸರ್ವಿಸನ್ನು ವ್ಯವಸ್ಥಿತ ರೀತಿಯಲ್ಲಿ ಸ್ಥಾಪಿಸುವದೂ ಈ ಸಂಸ್ಥೆಯ ಉದ್ದೇಶಗಳಲ್ಲೊಂದಾಗಿದೆ.

ಮೋಟಾರು ವಾಹನಗಳ ವಿಜೆಸ್ಸಿಯನ್ನು ಪಡೆದುಕೊಂಡು ಅವುಗಳನ್ನು ಒದಗಿಸುವದರಿಂದಲೂ, ನಾನಾ ಬಗೆಯ ವಾಹನಗಳು ಹೆಚ್ಚಿದಂತೆ ಅವುಗಳ ಉಪಕರಣಗಳಿಗೆ ಬೇಡಿಕೆಗಳಿರುವದರಿಂದ ಅವುಗಳನ್ನು ವಿದೇಶದಿಂದ ಸೀದಾ ತರಿಸಿ ವಿಕ್ರಯಿಸುವದರಿಂದಲೂ, ಹಾಗೂ ಮೋಟಾರು ವಾಹನಗಳ ದುರುಸ್ತಿಗಾಗಿ ಯಾಂತ್ರಿಕ ಅನುಭವವುಳ್ಳವರ ಮೇಲ್ವಿಚಾರದಲ್ಲಿ ಯೋಗ್ಯ ವಾದೊಂದು ವರ್ಕ್‌ಶೋಪನ್ನು ನಡೆಸುವದರಿಂದಲೂ ತುಂಬಾ ಲಾಭದಾಯಕವಾಗುವದೆನ್ನಬಹುದು.

ಸಂಸ್ಥೆಯಿದು ಸರ್ವಾದರಣೀಯವಾದ ಪ್ರೋತ್ಸಾಹವನ್ನು ಪಡೆದು, ಮಹಾವರಿಯದೆಂದೆನ್ನಿಸಿಕೊಂಡು, ಸರ್ವರಿಗೂ ಪ್ರಯೋಜನಕಾರಿಯಾಗಿ ಯಶಸ್ವಿಯಾಗಿ ಬಾಳಲೆಂದು ಹಾರೈಸುತ್ತೇವೆ.

ವಿದೇಶ

ಮೆಡ್ರಿಡಿನ ಸ್ವಾಧೀನತೆಗಾಗಿ ಘೋರಯುದ್ಧವು ನಡೆಯುತ್ತಿದೆ. ಈಚಿಗೆ ಡಫಗೆಗಾರರ ಬಲದ ಆಶ್ರಯಗಳನ್ನು ಸರಕಾರದ ಸೈನ್ಯಗಳು ವಿಫಲವನ್ನಾಗಿ ಮಾಡಿ, ಅವರನ್ನು ಹಿಂದಕ್ಕೆ ಅಟ್ಟಿವೆ. ಮೆಡ್ರಿಡಿನ ಸುಮಾರು ೧೦ ಲಕ್ಷ ಪ್ರಜೆಗಳಲ್ಲಿ ಸುಮಾರು ಅರ್ಧ ಪಾಲಿನವರು ಆಗಲೇ ಬೇರೆ ಕಡೆಗೆ ತೆರಳಿರುತ್ತಾರೆ. ಸೈನ್ಯವೂ ೪-೧೦ ಸಾವಿರ ಮಂದಿ ಮೆಡ್ರಿಡ್ ನಗರವನ್ನು ಬಿಡುತ್ತಿದ್ದಾರೆ. ಅವರ ಮನೆ ಮತ್ತು ಸಾಮಗ್ರಿಗಳನ್ನು ಅಲ್ಲಿನ ಪೋಲೀಸರು ನೋಡಿಕೊಳ್ಳುತ್ತಿದ್ದಾರೆ. ನಗರದಿಂದ ಹೊರಡಲೊಪ್ಪದವರು, ಸರ ಆದ ವಿಚಾರಣೆಗೆ ಗುರಿಯಾಗಬೇಕಾಗಿದೆ.

ಬಿಲ್ಬಾವೋವಿನಲ್ಲಿ ದಂಗೆ! ೨೦೦ ಮಂದಿ ಮೃತ ರಾದರು.

ಅಮೆರಿಕದಲ್ಲಿ ಹಬ್ಬಿರುವ ಮೋಟರ್ ಕೆಲಸ ಗಾರರ ಮುಷ್ಕರದಿಂದ ಸುಮಾರು ೧ ಲಕ್ಷ ಮಂದಿ ಕೆಲಸವಿಲ್ಲದೆ ಇದ್ದಾರೆ. ಸಂಧಾನದ ಪ್ರಯತ್ನಗಳು ನಡೆಯುತ್ತಿವೆ.

ಇಂಗ್ಲಿಷ್ ಕಾಲಿವೆಯಲ್ಲಿ ಒಂದು ಫ್ರೆಂಚ್ ಸ್ಟೀಮರಿಗೆ ಒಂದು ಬ್ರಿಟಿಷ್ ಸ್ಟೀಮರು ಢಿಕ್ಕಿ ಹೊಡೆದು, ಫ್ರೆಂಚ್ ನಾವಿಕರಲ್ಲಿ ೭ ಮಂದಿ ಮೃತ ರಾದರು.

ಪೋಪ್ ಸಾಹೇಬರ ಆರೋಗ್ಯಸ್ಥಿತಿಯು ಸುಧಾರಿಸುತ್ತ ಬರುತ್ತಿದೆ ಎಂದು ತಂತಿ ಬಂದಿದೆ.

'ಪ್ರೇಮವಿಲ್ಲದ ಮದುವೆಗಳು ಅಸ್ವಾಭಾವಿಕ ಮತ್ತೂ ನೀತಿವಿರುದ್ಧ. ಈ ತತ್ವದ ನಿರೂಪಣೆಗಾಗಿ, ನಿದರ್ಶನಕ್ಕಾಗಿಯೇ ನನ್ನ ಸಿಂಹಾಸನತ್ಯಾಗ'ವೆಂಬು ದನ್ನು ಜಗತ್ತು ತಿಳಿಯುತಿರಬೇಕೆಂದು ಡ್ಯೂಕ್ ಆಫ್ ವಿಂಡ್ಸರರು, ಒಂದು ಸಂಭಾಷಣೆಯ ಕಾಲದಲ್ಲಿ ತಿಳಿಯಪಡಿಸಿರುವರು.

ಹಿಂದೂದೇಶ

ಇಂಡಿಯದ ಹೈ ಕಮಿಶನರಾದ ಸರ್ ಫಿರೋಜ್ ಖಾನ್ ನೂನ್‌ರವರು ಕಳೆದ ತಾ. ೧೧ರಲ್ಲಿ ಕರಾಚಿಗೆ ತಲುಪಿ ಡಿಲ್ಲಿ ಕಡೆಗೆ ಪ್ರಯಾಣ ಬೆಳೆಸಿರುವರು. ಅವರು ಅಲ್ಲಿ ೩ ದಿನಗಳಿದ್ದು ಮುಂದೆ ತಮ್ಮ ಲಾಹೋರಿನ ಗ್ರಾಮದಲ್ಲಿಯೂ ಸ್ವಲ್ಪ ದಿನ ಕಳೆಯುವರು. ಅವರು ವಿಶ್ರಾಂತಿಗಾಗಿ ಇಂಡಿಯಕ್ಕೆ ಬಂದಿರುವುದಾದರೂ, ಇಂಡಿಯದ ಮತ್ತೂ ಬ್ರಿಟನಿನ ವ್ಯಾಪಾರದ ಕುರಿತಾಗಿ ಮಾತಾಡಿದರು. ಇಂಡಿಯದ ವ್ಯಾಪಾರವು ಹೆಚ್ಚುವಂತೆ ಮಾಡುವುದೇ ಅವರ ಮುಖ್ಯೋದ್ದೇಶವೆಂದು ಅವರು ತಿಳಿಸಿರುವರು.

ಸಾರನಾಥದಲ್ಲಿ ಅಲ್ಲಿನ ಬುದ್ಧವಿಹಾರದ ಮುಂದೆ, ಪ್ರಪಂಚದ ಯಾತ್ರಿಕರ ಸೌಕರ್ಯಕ್ಕಾಗಿ ದೊಡ್ಡದೊಂದು ಧರ್ಮಶಾಲೆಯು ಚೀನದ ಕೌನ್ಸಲ್ ಜನರಲರಾದ ಮಿ. ಚಿನ್ ಚಂಗ್‌ರವರಿಂದ ತೆರೆಯಲ್ಪಟ್ಟಿತು.

ಬೈಸೋರ್ ಕಣಿವೆಯಲ್ಲಿ ಪುನಃ ಕಾಡುಜನ ಗಳ ಹಾವಳಿಯು ಆರಂಭವಾಗಿ, ಕಾದಾಟವು ನಡೆದು, ಎರಡೂ ಕಡೆಗಳಲ್ಲಿಯೂ ಕೆಲವರು ಕೊಲ್ಲಲ್ಪಟ್ಟಿದ್ದಾರೆ; ಕೆಲವರಿಗೆ ಗಾಯವಾಗಿದೆ.

ಗಡಿಪ್ರಾಂತಗಳ ನಿವೃತ್ತ ಪೊಲೀಸ್ ಡೆಪ್ಯುಟಿ ಸುಪರಿಂಟೆಂಡೆಂಟರಾದ ಮಿ. ಎಂ. ಡೋನರ್ಸ, ಎಂ. ಡಿ. ಇ. ಇವರು, ಒಬ್ಬ ಕಾನ್ಸ್‌ಟೇಬಲನನ್ನು ಖಡ್ಗದಿಂದ ಚುಚ್ಚಿ ಗಾಯಗೊಳಿಸಿದರೆಂಬ ತಪ್ಪಿಗಾಗಿ ೧೪ ತಿಂಗಳ ಕಠಿನ ದಂಡನೆಗೆ ಗುರಿಯಾಗಿರುವರು. ಇವರು ಕಿಂಗ್ಸ್ ಪೋಲೀಸ್ ಮೆಡಲನ್ನೂ, ಇತರ ೯ ಬಹುಮಾನಗಳ ನ್ನೂ ಪಡೆದವರು.

ಸೋವಿಯಟ್ ರಷ್ಯದ ಮಿಲಿಟರಿ ಬಜೆಟಿನಲ್ಲಿ, ೧೯೩೭ನೆ ವರ್ಷದ ಬಾಬತು, ನೇಕಡಾ ೩೫ ಸಲಿಯು ಪ್ಪು ಹೆಚ್ಚಿದ ಅಂಶವು ಕಂಡುಬಂದಿದೆ.

ಎಸೆಂಬ್ಲಿಯ ಅಧಿವೇಶನ ಕಾಲದಲ್ಲಿ, ಕಾಂಗ್ರೆಸ್ ಮತ್ತೂ ನ್ಯಾಶನಲಿಸ್ಟ್ ಪ್ರತಿನಿಧಿಗಳು ಹಾಜರಿಲ್ಲದೆ ಇರುವಾಗ, ಸಭೆಯ ಕಾರ್ಯಕಲಾಪಗಳನ್ನು ಮುಂದೊತ್ತಬಹುದೇ ಎಂಬ ಪ್ರಶ್ನೆಯೊಂದು ಆ ಸಭೆಯ ಮುಂದೆ ಚರ್ಚೆಗೆ ಬರಬಹುದೆಂದು ನಿರೀಕ್ಷಿಸಲಾಗಿದೆ.

ಮಧ್ಯಪ್ರಾಂತದಲ್ಲಿ, ಪ್ರಾಂತಿಕ ಚುನಾವಣೆಯ ಕುರಿತಾದ ಕಾಂಗ್ರೆಸ್ ಉಮೇದುವಾರರ ಚಟುವಟಿಕೆಗಳ ಸಂಬಂಧ, ಪೋಲೀಸ್ ಶಾಖೆಯು ನಿಷ್ಪಕ್ಷವೂ ವರದಿಯನ್ನೊಪ್ಪಿಸಬೇಕಾಗಿ ಬಂದಿದೆ ಎಂದು ಅಲ್ಲಿನ ಒಂದು ಪ್ರಮುಖ ಪತ್ರಿಕೆಯು ಪ್ರಕಟಿಸಿದೆ.

ಹೊಸ ಡಿಲ್ಲಿಯಲ್ಲಿ ಎಸೆಂಬ್ಲಿ ಶಾಖೆಯ ಸುಪರಿಂಟೆಂಡೆಂಟರಾದ ಮಿ. ಎಂ. ವಿ. ಕಾಲಿನ್ಸ್‌ರವರು, ಬೇಟೆಗಾಗಿ ಹೋಗಿದ್ದಾಗ, ಒಂದು ಕಲ್ಲಿನ ಮೇಲೆ ಜಾರಿ ಬಿದ್ದು, ಕೈಯಲ್ಲಿದ್ದ ಗುಂಡು ಹಾರಿ ಪೆಟ್ಟಾಗಿದೆ. ಅವರೀಗ ಆಸ್ಪತ್ರೆಯಲ್ಲಿ ಗುಣ ಹೊಂದುತ್ತಿದ್ದಾರೆ.

ಕಲ್ಯಾಣದ ಬಳಿಯ ಒಂದು ಗ್ರಾಮಕ್ಕೆ ಬೆಂಕಿ ಹಿಡಿದು, ಪೂರಾ ಗ್ರಾಮವೇ—ಸುಮಾರು ೩೦೦ ಮನೆಗಳು ಭಸ್ಮವಾಗಿವೆ. ಪ್ರಾಣನಷ್ಟವಿಲ್ಲ.

ಮದ್ರಾಸಿನ ಹೈಕೋರ್ಟ್ ಚೀಫ್ ಜಸ್ಟೀಸರ ಸ್ಥಾನವು ಬೇಗನೇ ಬರಿದಾಗಲಿರುವುದರಿಂದ ಮುಂದೆ ಈ ಸ್ಥಾನಕ್ಕೆ ಒಬ್ಬ ಹಿಂದೀ ಎಡ್ವೋಕೇಟರನ್ನೇ ನೇಮಿಸುವಂತೆ, ಪ್ರಭುತ್ವದವರಲ್ಲಿ ಅರಿಕೆ ಮಾಡಿಕೊಳ್ಳುವ ಒಂದು ಠರಾವನ್ನು, ಮದ್ರಾಸ್ ಹೈ ಕೋರ್ಟ್ ಎಡ್ವೋಕೇಟ್ ಸಂಘದ ಕೌನ್ಸಿಲು ಮಂಜೂರು ಮಾಡಿದೆ.

ಬಿ. ಎನ್. ರೈಲ್ವೆ ಮುಷ್ಕರವಿನ್ನೂ ಮುಗಿದಿಲ್ಲ. ಕೆಲವು ಕಡೆಯ ಟ್ರೈನುಗಳೇನೋ ಸರಾಗವಾಗಿ ಓಡಾಡುತ್ತಿವೆ. ಎಸೆಂಬ್ಲಿಯ ಮೆಂಬರರಾದ ಶ್ರೀ.ಗಳಾದ ಎನ್. ಎಂ. ಜೋಶಿ ಮತ್ತೂ ವಿ. ವಿ. ಗಿರಿಗಳವರು ಸರ್ ಫ್ರಾಂಕ್ ನಾಯ್ಸ್‌ರವರನ್ನು ಕಂಡು ಈ ಕುರಿತು ಮಾತಾಡಿದರು. ಇದರ ಪರಿಣಾಮವೇನಾದೀತೆಂದು ತಿಳಿದಿಲ್ಲ.

ಮದ್ರಾಸಿಗೆ ದಯಮಾಡಿಸಿದ್ದ ಮಹಾತ್ಮಾ ಗಾಂಧಿಯವರಿಗೆ ಮಾಂಬಳಮ್‌ನಲ್ಲಿ ಅಭೂತಪೂರ್ವವಾದ ಸ್ವಾಗತವಿದ್ದು, ಒಂದು ಮಾನಪತ್ರದ ಸಮರ್ಪಣೆಯೂ ಆಯಿತು.

ಹೈದರಾಬಾದ್ ನೈಝಾಂ ಸಾಹೇಬರವರು ಬರುವ ವರ್ಷ ಮಕ್ಕಳೇ ಮೊದಲಾದ ಯಾತ್ರಾ ಸ್ಥಳಗಳಿಗೆ ಪ್ರಯಾಣ ಮಾಡಬಹುದೆಂದು ಆ ಸಂಸ್ಥಾನದ ಪತ್ರಿಕೆಗಳಲ್ಲೊಂದರ ವಾರ್ತೆ.

ಇಂಡಿಯದ ಮತ್ತೂ ಆಸ್ಯಾದ ಇತರ ಭಾಗಗಳ ಕೆಲವು ಮಂದಿ ಪತ್ರಿಕಾ ಉದ್ಯೋಗಿಗಳ ಕೂಟವೊಂದು ಬೇಗನೇ ಐರಿಷ್ ಫ್ರೀ ಸ್ಟೇಟನ್ನೂ ಇತರ ೩೬ ದೇಶಗಳನ್ನೂ ಸಂಚರಿಸಿ, ಆಯಾ ದೇಶಗಳ ವಿದ್ಯಮಾನಗಳನ್ನು ಸ್ವತಃ ತಿಳಿದುಕೊಳ್ಳಲಿದೆ. ಐರ್‌ಲೆಂಡ್ ತನ್ನ ಸ್ವಾತಂತ್ರ್ಯವನ್ನು ಹೇಗೆ ಸಂಪಾದಿಸಿತು, ಅದರ ಸ್ಥಿತಿ ಅಲ್ಲಿ ಈಗ ಹೇಗಿದೆ ಎಂಬುದನ್ನು ತಿಳಿದುಕೊಳ್ಳುವುದರಿಂದ ಇಂಡಿಯಕ್ಕೆ ಲಾಭವಾಗಬಹುದೆಂದು ಇಲ್ಲಿನ ನ್ಯಾಶನಲಿಸ್ಟ್ ಪತ್ರಿಕಾ ಉದ್ಯೋಗಿಗಳ ಹಾರೈಕೆ.

ನಮ್ಮಲ್ಲಿನ ಸಕ್ಕರೆ ಕೈಗಾರಿಕೆಗಳ ಹಿತರಕ್ಷಣೆಯ ಸಂಬಂಧ ಇಂಡಿಯಾ ಸರಕಾರವು ಇಪ್ಪತ್ತರಲ್ಲಿಯೇ ಒಂದು ವಿಚಾರಣೆಯ ಸಮಿತಿಯ ಸದಸ್ಯರ ಹೆಸರನ್ನೂ, ಅವರ ಕರ್ತವ್ಯಭಾಗಗಳನ್ನೂ ಪ್ರಕಟಿಸಲಿರುವುದು.

ದಕ್ಷಿಣ ಕನ್ನಡ.

ಪುತ್ತೂರು:—ಕಳೆದ ತಾ. ೧೩ರಲ್ಲಿ ಈ ತಾಲೂಕಿನ ಬೆಟ್ಟಂಪಾಡಿ ದೇವಸ್ಥಾನದ ಬಳಿಯಲ್ಲಿ ಇರ್ದೆ, ನೀಡ್‌ಪಳ್ಳಿ, ಬೆಟ್ಟಂಪಾಡಿ, ಪಾಣಾಜೆ, ಪುಣಚೆ, ಮೊದಲಾದ ಗ್ರಾಮಗಳ ಜಂಟಿ ವಿಸ್ತೀರ್ಣ ಗ್ರಾಮಸ್ಥರ ಸಾರ್ವಜನಿಕ ಸಭೆಯೊಂದು ಶ್ರೀ. ಜಕ್ಕೆತ್ತೋಡಿ ಬೀರು ಭಂಡಾರಿಗಳ ಅಧ್ಯಕ್ಷತೆಯಲ್ಲಿ ನೇರಿತು. ಗ್ರಾಮಸ್ಥರಲ್ಲದೆ, ಪುತ್ತೂರಿನಿಂದ ಡಾ. ಶೇಸಪ್ಪ ಭಂಡಾರಿ, ವಕೀಲರಾದ ಶ್ರೀಗಳಾದ ಉಗ್ಗಪ್ಪ ಸೆಟ್ಟಿ, ಪ್ರಭಾಕರ ರಾವ್ ಮೊದಲಾದವರೂ ಹಾಜರಿದ್ದರು. ಉಗ್ಗಪ್ಪ ಸೆಟ್ಟರು ಆಳಿಯಸಂತಾನದ ಬೀಲಿನ ವಿಷಯದಲ್ಲಿ ಆ ಸಂಬಂಧದ ಲೀಗಿನವರ ಪ್ರಯತ್ನಗಳ ಕುರಿತು ಪ್ರಶಂಸಿಸಿ, ಕಾಂಗ್ರೆಸ್ ಮುಖಂಡರು ಡಾ. ಯು. ರಾಮರಾಯರಿಗೂ, ಶ್ರೀ. ಯು. ಸಿ. ಯೆಸ್. ಭಟ್ಟರಿಗೂ ದಿವಂಗತ ದೇಶಭಕ್ತ ಕಾರ್ನಾಡು ಸದಾಶಿವರಾಯರಿಗೂ ಕೌನ್ಸಿಲ್ ಎಸೆಂಬ್ಲಿಗಳ ಸ್ಥಾನ ನಿಶ್ಚಯದಂತೆ ತೋರಿಸಿದ ಮಾರ್ಗದರ್ಶನವನ್ನು ವಿವರಿಸಿದರು. ಅನಂತರ ಶ್ರೀ. ಕೆ. ಪಿ. ಮೊಗಪ್ಪ ಶೆಟ್ಟಿ, ಕವಿ ಭೂಷಣ ಇವರು, ಗಂಭೀರವಾಣಿಯಿಂದ, 'ನಮ್ಮ ಜಿಲ್ಲೆಯಲ್ಲಿ ತನ್ನ ತನುಮನಧನಗಳನ್ನು ಜಿಲ್ಲೆಯ ಹಿತಕ್ಕಾಗಿ ಸಮರ್ಪಿಸಿದವರೆಂದರೆ ಮೂವರು ಮಹಾನೀಯರು—ಡಿ. ಕುದ್ಮುಲ್ ರಂಗರಾವ್, ಡಿ. ಶಾ. ಸದಾಶಿವ ರಾವ್, ಶ್ರೀ. ವೊ. ಶಿವರಾವ್' ಎಂದು ಇವರ ಕಾರ್ಯಕಲಾಪಗಳನ್ನು ವಿವರಿಸಿ, ಇವರಲ್ಲಿ ಎರಡನೇ ಮಹಾನೆಯವರಿಗೆ ಕೌನ್ಸಿಲ್ ಮತ್ತೂ ಎಸೆಂಬ್ಲಿಗಳಲ್ಲಿ ಸ್ಥಾನಗಳೇಕೆ ನಿಶ್ಚಯಿಲ್ಲ ಎಂದು ಪ್ರಶ್ನಿಸಿ ಸ್ಫೂರ್ತಿದಾಯಕ ಭಾಷಣ ಮಾಡಿದರು. ಕೊನೆಗೆ ಅಧ್ಯಕ್ಷರ ಭಾಷಣದಲ್ಲಿ ಸಭಿಕರೆಲ್ಲರೂ ಪುತ್ತೂರಿನವರಾದ ಶ್ರೀ. ಬೈಂದೂರು ನರಸಿಂಗ ರಾಯರಿಗೇ ಪುತ್ತೂರು ಮತ್ತೂ ಕಾಸರಗೋಡಿನ ಪರವಾಗಿ ಎಸೆಂಬ್ಲಿಗೆ ಓಟು ಕೊಡಬೇಕೆಂದು ಪ್ರಾರ್ಥಿಸಿ ಸಭೆ ಮುಗಿಯಿತು.



ನಾಲ್ಕು ಅಂಕೆಯ ಚೆಕ್ಕುಗಳನ್ನು ಸಂಪಾದಿಸಲು ಎಲ್ಲರಿಗೂ ಏಕಪ್ರಕಾರವಾದ ಸುಸಂದರ್ಭ.
ಬೊಂಬಯಿಯ ಒಂದು ಪ್ರಮುಖ ಬೇಂಕಿನಲ್ಲಿ ಇದರ ಮೊಹರುನಿಶಿಯ ಉತ್ತರವನ್ನು ಶೇಖರಣಾತಿಯಾಗಿರಿಸಿದೆ.
ಎಂಟು ಉತ್ತರಗಳನ್ನು ಕಳುಹುವ ಎಲ್ಲರಿಗೂ ರೂ. ೫ರಿಂದ ರೂ. 6/4/-ರ ವರೆಗಿನ ಬೆಲೆಯುಳ್ಳ
ನಮ್ಮ ಪ್ರಸಿದ್ಧ ಸಾಮಗ್ರಿಗಳ ಸಂಭಾವನೆಯು ಬಹುಮಾನಗಳು.

ಪ್ರವೇಶ ಹಾಸಲು:—ಪ್ರತಿ ಉತ್ತರಕ್ಕೆ ರೂ. 1.

ಕೊನೆಯ ತಾರೀಖು:—28ನೇ ಜನವರಿ 1937.

ಇಲ್ಲಿ ಕಾಣಿಸಲಾದ ಚೌಕದ ಪ್ರತಿ ಸಾಲು, ಮೂಲೇ ಸಾಲು, ಕಾಲಂಗಳನ್ನು ಕೂಡಿಸಿದರೂ ಜುಮ್ಲಾ ಸಂಖ್ಯೆ 30 ಬರುವಂತೆ, 0ಯಿಂದ 15ರ ವರೆಗಿನ (0 ಮತ್ತೂ 15 ಕೂಡ) ಅಂಕೆಸಂಖ್ಯೆಗಳನ್ನು ಏರ್ಪಡಿಸಿಕೊಂಡು ಈ ಚೌಕವನ್ನು ತುಂಬಿಸಿ. ಒಂದು ಸಂಖ್ಯೆಯನ್ನು ಒಮ್ಮೆ ಮಾತ್ರ ಉಪಯೋಗಿಸಬೇಕು.



ಖಾಲಿ ಕಾಗದದ ಮೇಲೆ ಬರೆದ ಎಷ್ಟು ಉತ್ತರಗಳೊಡನೆಯಾದರೂ, ಪ್ರತಿ ಉತ್ತರಕ್ಕೆ ರೂ. 1ರಂತೆ ಆಗತ್ಯದ ಫೀಸನ್ನು ಮನಿಯಾರ್ಡರ್ ಅಥವಾ ಇಂಡಿಯನ್ ಪೋಸ್ಟಲ್ ಆರ್ಡರಿನ ಮೂಲಕ ಕಳುಹಿಸತಕ್ಕದ್ದು. ಸ್ಥಳೀಯ ಉತ್ತರಗಳನ್ನು ನಮ್ಮ ಆಫೀಸಿನಲ್ಲಿ ಸ್ವೀಕರಿಸಲಾಗುವುದು. ಇದರ ಫಲಿತಾಂಶವು 1937ನೇ ಇಸ್ವಿ ಫೆಬ್ರವರಿ ತಾ. 4ರಲ್ಲಿ ಪ್ರಕಟವಾಗುವುದು. ತಮ್ಮ ಉತ್ತರಗಳೊಡನೆ, ವಿಳಾಸ ಬರೆದು, ಸ್ಟ್ಯಾಂಪ್ ಅಂಟಿಸಿದ ಕವರುಗಳನ್ನು ಕಳುಹುವವರಿಗೆ ಈ ಫಲಿತಾಂಶವನ್ನು ತಿಳಿಸಲಾಗುವುದು. ಕೆಲಸ ಸುಲಭವಾಗುವಂತೆ, ಉತ್ತರಗಳೊಂದಿಗೆ ಮನಿಯಾರ್ಡರ್ ರಶೀದಿಯನ್ನೂ ಲಗ್ತು ಇಡತಕ್ಕದ್ದು.

ಬೇಂಕಿನಲ್ಲಿ ಶೇಖರಣಾತಿಯಾಗಿರಿಸಿರುವ ಸರಿಯಾದ ಸಮ್ಮ ಮೊಹರು ನಿಶಿಯ ಉತ್ತರದೊಡನೆ, ಪ್ರತಿಯೊಂದು ಅಂಕೆಸಂಖ್ಯೆಗೂ ತಾಳೆಬೀಳುವಂತೆ, ಸರಿಯಾದ ಉತ್ತರಗಳನ್ನು ಕಳುಹಿಸುವ ಕೃತಾರ್ಥರಾದ ಸ್ಪರ್ಧೆಗಾರರಲ್ಲಿ ಬಹುಮಾನದ ದ್ರವ್ಯವು ಹಂಚಲ್ಪಡುವುದು. ಬಹುಮಾನದ ಯೋಜನೆಯು ಸ್ವೀಕರಿಸುವ ಉತ್ತರಗಳ ಸಂಖ್ಯೆಯನ್ನು ಅವರಿಸಿಕೊಂಡಿದೆಯಾದರೂ, ಸರಿಯಾದ ಪ್ರತಿ ಉತ್ತರಕ್ಕೆ ಕನಿಷ್ಠ ಮಿತಿಯ ಬಹುಮಾನವು ರೂ. 1,200 ಎಂದು ಭರವಸೆ ಕೊಡಲಾಗುತ್ತದೆ. ಮ್ಯಾನೇಜರರ ತೀರ್ಮಾನವೇ ಕೊನೆಯದು, ಕಾನೂನು ಪ್ರಕಾರ ಸಿಂಧು.

ಮೇಲಿನ ನಗದಿ ಹಣದ ಬಹುಮಾನಗಳಲ್ಲದೆ, ನಮ್ಮ ಸುಪ್ರಸಿದ್ಧ ತಯಾರಿಕೆಗಳಾದ ಸ್ವೀಟೋ, ಸೆಕ್ಸ್-ಒ-ಮೆಕ್ಸ್, ಫೆಟ್ರಿಡ್ ಸೋಪ್, ಲಿಕ್ಕರ್ ಏಕ್ಸ್ ಮುಂತಾದುವುಗಳಲ್ಲಿ ಒಂದನ್ನು, ಎಂಟು ಉತ್ತರಗಳನ್ನು ಕಳುಹಿಸುವ ಸ್ಪರ್ಧೆಗಾರರಿಗೆ ಅವರವರ ಆಪೇಕ್ಷಾನುಸಾರವಾಗಿ, (ಹಲವು ಹೆಸರುಗಳುಳ್ಳ ಒಂದು ಕವರನ್ನೂ ಸ್ವೀಕರಿಸಲಾಗುವುದು) ಬಹುಮಾನವಾಗಿ ಕೊಡಲಾಗುವುದು.

ಕಳೆದ ನಮ್ಮ ಸ್ಪರ್ಧೆಯ
ಮೊಹರು ನಿಶಿಯ ಉತ್ತರ.

14	4	11	9
13	7	16	2
8	10	5	15
3	17	6	12

ನಿಮ್ಮ ಉತ್ತರಗಳನ್ನೂ, ಫೀಸನ್ನೂ ಮ್ಯಾನೇಜರರಿಗೆ ಕಳುಹಿಸಿ,

Sweeto Chemical & Industrial Works

(Competition Department),
Empire Building, Hornby Road,
Fort, BOMBAY.

ಆರೋಗ್ಯ
ಮತ್ತು
ಚೈತನ್ಯ
ಕ್ಕಾಗಿ
ಒಕಾಸಾ
ಸೇವಿಸಿ.

ಈ ಅತ್ಯುತ್ಕೃಷ್ಟವಾದ ಹೊರ್ಮನ್ ಟಾನಿಕನ ಖಾಲಿ ರಿಯೂ ತೀವ್ರವೂ ಆದ ಗುಣಕ್ಕೆ ಹೋಲಿಸಲು ಬರುವ ಅಷ್ಟನಾ ಸವಿೂಪವರ್ತಿಯಾಗಿರುವ ಬೇರಾವುದೂ ಇಲ್ಲ.



ಒಕಾಸಾದಲ್ಲಿ ವಿಪುಲವಾದ ಆರೋಗ್ಯವನ್ನೂ, ಚೈತನ್ಯವನ್ನೂ, ದೊರಕಿಸಿಕೊಡುವ ಪದಾರ್ಥಗಳಿವೆ; ಅದು ನಿಮ್ಮ ದೇಹರಚನೆಯಲ್ಲಿರುವ ನಿಶ್ಯಕ್ತಿ ಮತ್ತು ನಿತ್ರಾಣದ ಪ್ರತಿಯೊಂದು ಚಿಹ್ನೆಯನ್ನೂ ಸಂಪೂರ್ಣವಾಗಿ ಹೋಗಲಾಡಿಸುತ್ತದೆ; ನಿಮ್ಮನ್ನು ಉತ್ತಮ ಆರೋಗ್ಯ, ಬಲವಾದ ನರ, ಹೆಚ್ಚಿನ ಶಕ್ತಿ ಮತ್ತು ವೃದ್ಧಿಯಾದ ಚೈತನ್ಯ ಇವುಗಳಿಂದ ಕೂಡಿದ ಒಬ್ಬ ಹೊಸ ಮನುಷ್ಯನನ್ನಾಗಿ ಮಾಡುತ್ತದೆ.

ತರುಣರಾಗಿರಿ.
ಒಕಾಸಾವೆರೆಡನೆ.

ಅದನ್ನು ಪಡೆಯಿರಿ, ನಿಮ್ಮ ಕೆಮಿಸ್ಟರಿಂದ ಅಥವಾ

OKASA CO., BERLIN (INDIA), LTD.,
12, Rampart Row, Fort,
P. O. Box 396, BOMBAY.

ಪಿತ್ತಕೋಶವನ್ನು ಕಲೋಮಲ್ ಇಲ್ಲದೆ- ಎಚ್ಚರಿಸಿರಿ.

ಮೋಟಾರು ಗಾಡಿಯನ್ನು ನೂಕುವಷ್ಟು ಉತ್ಸಾಹ ಉಂಟಾಗುವುದು.

ಪ್ರತಿ ದಿನವೂ ಎರಡು ಪೌಂಟನಷ್ಟು ಪಿತ್ತರಸವು ಪಿತ್ತಕೋಶದಿಂದ ಜೀರ್ಣಕೋಶಕ್ಕೆ ಹರಿಯಬೇಕು. ಹೀಗೆ ಹರಿಯದಿದ್ದರೆ, ನಿಮ್ಮ ಆಹಾರವು ಜೀರ್ಣವಾಗದೆ ಮಲಕೋಶದಲ್ಲಿ ಕೊಳೆಯುತ್ತದೆ. ಇದರಿಂದ ಹೊಟ್ಟೆಯಲ್ಲಿ ವಾಯು ಉತ್ಪತ್ತಿಯಾಗಿ ಮಲಬದ್ಧತೆಯುಂಟಾಗುತ್ತದೆ. ನಿಮ್ಮ ಶರೀರ ಯಂತ್ರವೆಲ್ಲಾ ವಿಷಮಯವಾಗಿ, ಪ್ರಪಂಚವೇ [illegible]ವೆಂಬ ಮನೋ ಜಿಗುಪ್ಸೆಯುಂಟಾಗುತ್ತದೆ.

ಇಗಳು, ರುಚಿಕರವಾದ ಸೌಮ್ಯ ಮತ್ತು ಜುಲಾಬುಗಳು, ಇವೆಲ್ಲಾ ತಾತ್ಕಾಲಿಕ [illegible] ಉಪಯೋಗವಾದವುಗಳಲ್ಲದೆ ಮೂಲ ಕಾರಣ ತಾಕುವುದಿಲ್ಲ. ಅರೀತಿ ಮಾಡಬೇಕಾದರೆ [illegible] ಸಿದ್ಧವಾದ "ಕಾರ್ಟರ್ಸ್ ಲಿಟಲ್ [illegible]ಗಳು ಮೇಲೆ ಹೇಳಿದ ತೊಂದರೆಯನ್ನು ತಪ್ಪದೆ ಸಲೀಸಾಗಿ ಉತ್ಪತ್ತಿಮಾಡುತ್ತದೆ. ನಿರಪಾಯ, ಸೌಮ್ಯ ಮತ್ತು ಪೂರ್ಣಗುಣಕಾರಿಯಿದೆ. ಯಾವಾಗಲೂ ಕಾರ್ಟರ್ಸ್ ಲಿಟಲ್ ಲಿವರ್ ಪಿಲ್ಸ್‌ಗಳನ್ನೇ ಕೇಳಿರಿ. ಪ್ರತಿಯೊಂದು ಕೆಂಪು ಪೊಟ್ಟಣದ ಮೇಲೆ ಕಾರ್ಟರರ ಹೆಸರನ್ನು ನೋಡಿರಿ ಬೆಲೆ ೧೦ ಆಣೆ.



ತಾ. ೨-೧-೧೯೩೭ರಲ್ಲು ಜರುಗಿದ ದಕ್ಷಿಣ ಕನ್ನಡ ಜಿಲ್ಲಾ ಟೀಚರ್ ಮೆನೇಜರವರ ಸಂಘದ ಕಾರ್ಯನಿರ್ವಾಹಕ ಕಮಿಟಿಯ ಪ್ರೊಸಿಡಿಂಗ್ಸ್—ಜಿ. ಓ. ನಂಬ್ರ ೨೫೬೬ ತಾರೀಕು ೧-೧೨-೧೯೩೬ರ ಹುಕುಮನ್ನು ಓದಲಾಯಿತು.

ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆಗಳ ಪ್ರಾಕೃತಿಕ ಭೂಸ್ಥಿತಿಗಳಿಗೂ ಪೂರ್ವ ಕರಾವಳಿಯ ಜಿಲ್ಲೆಗಳ ಪ್ರಾಕೃತಿಕ ಸ್ಥಿತಿಗತಿಗಳಿಗೂ ಏನೂ ಸಮತ್ವವಿಲ್ಲದಿರುವುದರಿಂದಲೂ, ಮತ್ತು ಜಿಲ್ಲೆಯು ಸಣ್ಣ ಇಳಿಪ್ರದೇಶವಾದ ಬಯಲು ಮತ್ತು ಗುಡ್ಡೆಗಳಾಗಿ ವಿಭಾಗಿಸಲ್ಪಟ್ಟಿರುವುದರಿಂದಲೂ ಮತ್ತು ಸಡಾನಡುವೆ ಕಾಡುಗಳೂ ಅಲ್ಲಲ್ಲಿ ದೂರದೂರವಾಗಿ ಜದರಿರುವುದರಿಂದಲೂ, ಪೂರ್ವ ಕರಾವಳಿಯ ಜಿಲ್ಲೆಗಳಿಗೆ ಸರಿ ಬೀಳುವ ಯಾವ ಕೃಷಿಸಂಬಂಧನೆಗಳು ಪಶ್ಚಿಮ ಕರಾವಳಿಯ ಜಿಲ್ಲೆಗಳ ಶಾಲೆಗಳಿಗೆ ಸಂಪೂರ್ಣವಾಗಿ ಒಳಿತಾಗಲಿಕ್ಕಿಲ್ಲವೆಂದು ತಿಳಿದು ಈ ಕಮಿಟಿಯು ಈ ಕರಾವಳಿಯ ಸ್ಥಿತಿಗಳಿಗೆ ಅನುಕೂಲವಾಗುವಂತೆ ಸರಕಾರದವರಿಂದ ತಯಾರಿಸಲ್ಪಟ್ಟ ರೂಲುಗಳಿಗೆ ಈ ಕೆಳಗಿನ ತಿದ್ದುಪಡಿಗಳನ್ನು ಸೂಚಿಸಲು ನಿರ್ಧರಿಸಿಯದೆ.

'ತಿದ್ದುಪಡಿಗಳು.'

ನಿರ್ಣಯ ನಂಬ್ರ ೧:—Section I ಖಂ(೨) b I/೪—B ಮಂಜೂರಾತಿಯ ರೂಲುಗಳು ಎಂಬ ಶಿರೋನಾಮೆಯ ರೂಲುಗಳಲ್ಲಿ—ಮಂಜೂರಾತಿಯ ವ್ಯಾದೆಯು ಹಾಕಿದ ಆನಂತರ—'ಒಂದು ತಿಂಗಳಿಗಿಂತ ತಡವಾಗದೆ' ಎಂಬುದರ ಸ್ಥಾನದಲ್ಲಿ 'ಮೂರು ತಿಂಗಳಿಗಿಂತ ತಡವಾಗದೆ' ಎಂದು ಇರಿಸುವುದು. ಅಸ್ವಸ್ಥದಿಂದಾಗಲೀ ಅಥವಾ ಇನ್ನಿತರ ಅಕಸ್ಮಾತ್ ಕಾರಣಗಳಿಂದಲೊ ಮೆನೇಜರರ ಮುಂಜೂರಾತಿಯನ್ನು ಮುಂದರಿಸುವ ಬಗ್ಗೆ ಒಂದು ತಿಂಗಳೊಳಗೆ ಅನಾಸುಕೂಲವಾಗಬಹುದೆಂದು ತಿಳಿದು ಈ ತಿದ್ದುಪಡಿಯನ್ನು ಮುಂದಿಡಲಾಗಿದೆ.

ನಿರ್ಣಯ ನಂಬ್ರ ೨:—I c ಪ್ರತಿ ಸರಾಸರಿ ೩೫ ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯನಿರತಕ್ಕದ್ದು. ಹೈಸ್ಕೂಲು ಮತ್ತು ಕೊಲೇಜುಗಳಲ್ಲಾಗಲೀ ಉಪಾಧ್ಯಾಯರ ನೇಮಕವು ಪಟ್ಟಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಅವಲಂಬಿಸಿಯಲ್ಲದೆ ಸರಾಸರಿ ಹಾಜರಿಯನ್ನು ಅವಲಂಬಿಸಿಯಲ್ಲ. ಗ್ರಾಮಗಳಲ್ಲಿರುವ ಪ್ರಾಥಮಿಕ ಶಾಲೆಗಳಲ್ಲಿ ಅಂತಹ ಉನ್ನತವಾದ ಸೂಚಿಸಲ್ಪಟ್ಟ ಹಾಜರಿಯು ಯೋಗ್ಯ ವಿದ್ಯಾಭ್ಯಾಸಕ್ಕೆ ಹಾನಿಕಾರಕವಾಗಿಯೂ, ಮತ್ತು ಖಡ್ಡಾಯವನ್ನು ಜಾರಿಗೆ ತಾರದೆ ವಿನಃ ಉನ್ನತವಾದ ಸರಾಸರಿ ಹಾಜರಿಯು ಸುಲಭಸಾಧ್ಯವಲ್ಲವಾದ ಕಾರಣ ಒಡನೆಯೆ ಈಗಿರುವ ಉಪಾಧ್ಯಾಯರ ಸಂಖ್ಯೆಯನ್ನು ಕಡಿತ ಮಾಡಬೇಕಾಗಿ ಬರುವುದರಿಂದ ಈ ಕೆಳಗಿನ ತಿದ್ದುಪಡಿಯನ್ನು ಸೂಚಿಸಿಯದೆ.

ಈ ಪಟ್ಟಿಯಲ್ಲಿರುವ ಪ್ರತಿ ೩೦ ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯನಿರತಕ್ಕದ್ದು.

ನಿರ್ಣಯ ನಂಬ್ರ ೩:—I c (೧) ಸರಾಸರಿ ಹಾಜರಿಯು ೨೫ಕ್ಕಿಂತ ಕಡಿಮೆ ಬಿದ್ದರೆ, ಯಾರೊಬ್ಬ ಉಪಾಧ್ಯಾಯನಿಗೂ ಗ್ರಾಂಟು ಎಣಿಸೋಣಾಗಲಿಕ್ಕಿಲ್ಲ. ಎಂಬಲ್ಲಿ ೨೫ರ ಬದಲಿಗೆ ೨೦ನ್ನು ಇಡುವುದು.

ಈ ತಿದ್ದುಪಡಿಯು ಅಗತ್ಯವಾಗಿದೆ ಯಾಕೆಂದರೆ ಒಬ್ಬ ಉಪಾಧ್ಯಾಯನಿರುವ ಶಾಲೆಗಳಲ್ಲಿ ನಮ್ಮ ಜಿಲ್ಲೆಯಂತಹ ಜಿಲ್ಲೆಯಲ್ಲಿ ೨೦ಕ್ಕಿಂತ ಹೆಚ್ಚು ಸರಾಸರಿ ಹಾಜರಿಯು ಸಿಗುವುದು ಕೇವಲ ಅಸಾಧ್ಯವಾಗಿದೆ. ಮತ್ತು ಈಗಿನ ಕಾಲದ ಆಗಿಂದಾಗಿನ ಅನಿರೀಕ್ಷಣೆಯ ಸಂದರ್ಶಣೆಗಳು ಯಾವದಾದರೂ, ಒಂದು ಕಾರಣದಿಂದ ಸಂದರ್ಶಣೆಯ ತಾರೀಕಿನಲ್ಲಿ ಮಕ್ಕಳ ಹಾಜರಿಯು ಕಡಿಮೆ ಇದ್ದ ಶಾಲೆಗಳನ್ನು ಸಂಪೂರ್ಣ ನಾಶ ಮಾಡಬಹುದು.

(ಮುಂದುವರಿಯುವುದು)

(ಅನೇ ಪುಟದಿಂದ)

'ಕಸಬರಿಕೆ ನಾಟಕ'ಗಳು ಸಭಿಕರನ್ನು ಸಂತೋಷಗೊಳಿಸಿದುವು. ಶಾಲಾ ರಿಪೋರ್ಟಿನಲ್ಲಿ ಕಾಣುವ ಈ ಶಾಲೆಯ ಮಕ್ಕಳ ಸಂಖ್ಯೆ, ಶಿಕ್ಷಣ ಅಟಗಳ ವ್ಯವಸ್ಥೆ, ಹೊಲಿಗೆ, ಮ ಇತರ ಕೈಗಾರಿಕೆಗಳ ವ್ಯವಸ್ಥೆಯು ಶಾಲೆಯ ಅಭಿವೃದ್ಧಿಯನ್ನು ಸೂಚಿಸುತ್ತವೆ. ಅಧ್ಯಕ್ಷರು ಒಳ್ಳೆಯ ಶಿಕ್ಷಣವು ಬಾಲಕಿಯರಿಗೆ ತಮ್ಮ ಜೀವಮಾನದಲ್ಲಿ ಎಷ್ಟರ ಮಟ್ಟಿಗೆ ಸಹಾಯಕವಾಗುವುದೆಂಬುದನ್ನು ಬಹಳ ಸುರಸವಾಗಿ ಭಾಷಣ ಮಾಡಿದರು.

ಇದೇ ಕಳೆದ ತಾ. ೧೩ನೇ ಬುಧವಾರ ಬೆಳಿಗ್ಗೆ ೮ ಗಂಟೆಗೆ ಸರಿಯಾಗಿ, ನಮ್ಮ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ನಮ್ಮ ದ. ಕ. ಜಿಲ್ಲೆಯ ಶಿಕ್ಷಣ ಪ್ರದರ್ಶನವು, ಇಲ್ಲಿಯ ಟ್ರೈನಿಂಗ್ ಶಾಲೆಯ ವಠಾರದಲ್ಲಿ ಅನೇಕ ಮಂದಿ ಆಧ್ಯ ಮಹನೀಯರ ಮುಂದೆ, ಸಂಭ್ರಮಪೂರ್ವಕವಾಗಿ ತೆರೆಯಲ್ಪಟ್ಟಿತು. ಜಿಲ್ಲೆಯ ಎಲ್ಲಾ ತಾಲೂಕುಗಳಿಂದ, ಬೋರ್ಡು ಮತ್ತೂ ಖಾಸಗಿ ಶಾಲೆಯ ಉಪಾಧ್ಯಾಯರು ಸುಮಾರು ೧ ಸಾವಿರಕ್ಕೂ ಮಿಕ್ಕಿ ಈ ಸಮಾರಂಭದಲ್ಲಿ ಭಾಗಿಗಳಾಗಿದ್ದರು. ಚಿತ್ರಗಳೂ, ತೈಲಚಿತ್ರಗಳೂ, ಕೈಗಾರಿಕೆ ಕೆಲಸಗಳೂ (ಮರ, ಬೆಂಡು, ಕತ್ತ, ಅಪ್ಪೆಮಣ್ಣು, ರಟ್ಟು ಮೊದಲಾದುವು) 'ಫ್ರೆಟ್ ವರ್ಕ್' 'ರಿಲೀಫ್ ಮ್ಯಾಪುಗಳೂ' (ಸೀಮೆ ಸುಣ್ಣ ಮತ್ತು ಲಿನ್‌ಸಿಡ್ ಆಯಿಲ್ ನಿಂದ ಮಾಡಿದುವು) ಇತಿಹಾಸ ಮತ್ತೂ ಭೂಗೋಳದ ಪಠಗಳು, ಹಾಗೂ ಹೆಣ್ಣು ಮಕ್ಕಳ ಕಲಾಕೌಶಲ ಪೂರ್ಣವಾದ, ಬಹು ಅಂದವಾದ ಕಸೂತಿ ಕೆಲಸದ ಸಾಮುಗ್ರಿಗಳು,—ಮುಖ್ಯವಾಗಿ ಕಾನ್ವೆಂಟ್ ಶಾಲೆಗಳಿಂದ—ಬಂದಿದ್ದು, ಹಿಂದಿನ ಎರಡು ಪ್ರದರ್ಶನಗಳಿಗಿಂತಲೂ ಅನೇಕ ಅಂಶಗಳಲ್ಲಿ ಉತ್ಕೃಷ್ಟವೆನಿಸಿದ್ದುವು. ಈ ಸಂದರ್ಭದಲ್ಲಿನ ಕಲೆಕ್ಟರರ ಉತ್ಕೃಷ್ಟ ಭಾಷಣದಲ್ಲಿ 'ಇಂತಹ ಪ್ರದರ್ಶನಗಳ ಔಚಿತ್ಯ ಮತ್ತೂ ಪ್ರಯೋಜನ'ಗಳ ಕುರಿತಾದ ವಿವರಣೆ ಇದ್ದಿತಲ್ಲದೆ, ಹಳ್ಳಿಗಳ ಸುಧಾರಣೆಗಳಿಗೂ, ಮೇಲ್ಮೆಗೂ ಇವುಗಳಿಂದ ಎಂತಹ ಪ್ರೋತ್ಸಾಹವು ಸಿಕ್ಕುವುದೆಂದೂ ಕಲೆಕ್ಟರರು ವಿಶದಗೊಳಿಸಿದರು. ಈ ಪ್ರದರ್ಶನ ಪದಾರ್ಥಗಳನ್ನು ಇಪ್ಪರಲ್ಲಿಯೇ ಸಾವಿರಾರು ಮಂದಿ ವಿದ್ಯಾರ್ಥಿಗಳೂ, ಇತರ ನಾಗರಿಕರೂ ನೋಡಿ ಬಹಳ ಸಂತೋಷಪಟ್ಟರೆಂದು ತಿಳಿದುಬರುವುದಲ್ಲದೆ, ಇಂದು ನಾಳೆಯೂ ಇದೇ ರೀತಿಯಲ್ಲಿ ಪ್ರೇಕ್ಷಕರ ಪ್ರೋತ್ಸಾಹವು ದೊರಕುವ ನಿರೀಕ್ಷಣೆಯೂ ಇದೆ. ಇದರಲ್ಲಿನ ಒಂದು ವಿಶೇಷವೇನೆಂದರೆ,—ಮಧ್ಯಾಹ್ನ ೨ರಿಂದ ೫ ಗಂಟೆಯ ವರೆಗೆ, ವಿದ್ಯಾಂಸರುಗಳಿಂದ ಶಿಕ್ಷಣ ವಿಚಾರದಲ್ಲಿ ಹಲವು ಉದಾತ್ತ ಉಪನ್ಯಾಸಗಳು ನೆರೆದ ಉಪಾಧ್ಯಾಯರಿಗಾಗಿ ನಿತ್ಯವೂ ಏರ್ಪಾಡಾಗಿರುವುದೇ. ಸಂಜೆಯ ವಿನೋದಾವಳಿಗಳಂತೂ ಅತ್ಯಂತ ಆಕರ್ಷಣೀಯವಾಗಿದ್ದು, ಬಗೆಬಗೆಯ ಬಣ್ಣಗಳ ವಿದ್ಯುಚ್ಛಕ್ತಿ ದೀಪಮಾಲೆಗಳು ಈ ಮಹೋತ್ಸವಕ್ಕೊಂದು ಹೊಸ ಮೆರುಗನ್ನು ಕೊಟ್ಟಿದೆ ಎಂದರೆ ಹೆಚ್ಚಲ್ಲ.

ಈ ತಿಂಗಳ ಬೆಳಿಗ್ಗೆ ೧೧ ಗಂಟೆಗೆ ಡಿ॥ ಬೋ॥ ಆಫೀಸಿನಲ್ಲಿ ಡಿ॥ ಬೋ॥ ಮೆಂಬರರ ಸಭೆ ಸೇರಿದ್ದಿತು. ಆದರೆ ಲೋಕಲ್ ಬೋರ್ಡ್ ಅಕ್ಟಿನ ಮೇರೆಗೆ, ಸರಿಯಾಗಿ ೧೦ ದಿನಗಳ ನೋಟೀಸು ಇಲ್ಲವೆಂಬ ಅರ್ಥಕ್ಕೆ ಒಂದು ಠರಾವು ಬಂದು, ಚರ್ಚೆಯಾಗಿ ಕೊನೆಗೆ ವಿಾಟಿಂಗನ್ನು ಮುಂದರಿಸಿಡಲಾಯಿತು.

ಮದ್ರಾಸಿನಲ್ಲಿರುವ ಮೈಸೂರು ಕೆಫೆಯ ಪ್ರಾರಂಭೋತ್ಸವ ಸಮಯದಲ್ಲಿ ತೆಗೆದ ಸಮ್ಮಿಲನ ಭಾವಚಿತ್ರ. ಮಧ್ಯದಲ್ಲಿರುವವರು ಮದ್ರಾಸಿನ ಮೇಯರರಾದ ಶ್ರೀ॥ ಕೆ. ಶ್ರೀರಾಮುಲು ನಾಯುಡುರವರು.

ಇನ್ನು ಎರಡು ವಾರಗಳು ಮಾತ್ರ

ತಾರೀಕು 17—1—1937ನೇ ಭಾನುವಾರ ಸಾಯಂಕಾಲ 6 ಘಂಟೆಗೆ ಅಭಿನಯಿಸುವ "ಭೂ-ಕೈಲಾಸ" ನಾಟಕಕ್ಕೆ ಮಾತ್ರ ಸ್ಥಳಪರಸ್ಥಳಗಳ ಶಾಲಾವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಎಲ್ಲಾ ತರಗತಿಗಳಲ್ಲಿಯೂ ಅರ್ಧ ದರ ಏರ್ಪಡಿಸಿರುತ್ತೆ.

॥ ಶ್ರೀ ರಾಜರಾಜೇಶ್ವರೀ ಪ್ರಸೀದ ॥

ಸಾರಿಂತ್ಯ ಸಾಮ್ರಾಜ್ಯ ನಾಟಕ ಮಂಡಲಿ, ಮೈಸೂರು

ಮಂಗಳೂರು ಮೈದಾನದಲ್ಲಿ ನೂತನವಾಗಿ ಕಟ್ಟಿರುವ
ರಾಜರಾಜೇಶ್ವರೀ ಥಿಯೇಟರಿನಲ್ಲಿ

ತಾ. 16-1-37 ಶನಿವಾರ ರಾತ್ರಿ 9-30 ಗಂಟೆಗೆ — "ರಾಷ್ಟ್ರವೀರ"

ತಾ. 17-1-37 ಭಾನುವಾರ ಸಾಯಂ. 6 ಗಂಟೆಗೆ ಮ್ಯಾಟಿನಿ — "ಭೂಕೈಲಾಸ"

ಎಂಬ ನಾಟಕಗಳನ್ನು ಪ್ರದರ್ಶಿಸುವರು.

ಮಹಾಜನರು ಪ್ರೋತ್ಸಾಹಿಸಬೇಕಾಗಿ ಸವಿನಯ ಪ್ರಾರ್ಥನೆ.

ಯಂ. ವಿ. ಸುಬ್ಬಯ್ಯ ನಾಯಡು,
ಆರ್. ನಾಗೇಂದ್ರ ರಾವ್, } ಪ್ರೊಪ್ರೈಟರ್ಸ್.

ON MYSORE GOVERNMENT APPROVED LIST.



ಮಾಧವಜಿ ಪೀತಾಂಬರ್ ಅಂಡ್ ಸನ್ಸ್.

ಆರ್ಕಾಟ್ ಶ್ರೀನಿವಾಸಾಚಾರ್ ಸ್ಟ್ರೀಟ್ ಬೆಂಗಳೂರು ಸಿಟಿ & ಗದಗ.

ನಮ್ಮಲ್ಲಿ ಒಂದೇ ತಗಡಿನಿಂದ ತಯಾರಿಸಿದ ಸ್ಟೀಲ್ ಕಬ್ಬಿಣದ ಪೆಟ್ಟಿಗೆಗಳು, ಬೀರೂಗಳು, ಮತ್ತು ಕ್ಯಾಷ್‌ಬಾಕ್ಸ್‌ಗಳೂ ಮಾಡಲ್ಪಡುತ್ತವೆ.

ಕಳ್ಳರ ಭಯವಿಲ್ಲ. ಬೆಂಕಿಯ ಅಪಾಯವಿಲ್ಲ.

ಸಚಿತ್ರ ಕ್ಯಾಟಲಾಗಿಗೆ ಬರೆಯಿರಿ—.

12, 15—1. *ADVT. by:*—R. DESAPONDE, Bangalore City.

STAMPS!!!

Rev. Father J. ROMANI, S. J. will send stamps for approval to Bona Fide collectors on stamps under reference. Apply to R. C. Chaplain, Ahmedabad, Camp.

8, 18—12

ಉಚಿತ

ಚೀನಾ ಜಪಾನ್ ಮತ್ತೂ ಬೊಂಬಯಿಯ ಕೆಲವು ಯುವತಿಯರೂ, ಸುಂದರಿಯರೂ ಅದ ನಟಿಯರ ಭಾವಚಿತ್ರಗಳನ್ನು 1937ನೇ ಇಸ್ವಿಯ ನಮ್ಮ ಕ್ಯಾಲೆಂಡರುಗಳ ಮೇಲೆ ಪ್ರಕಟಿಸಿದ್ದೇವೆ. ಎರಡಾಣೆ ಸ್ಟಾಂಪುಗಳನ್ನು ಮತ್ತೂ ನಾಲ್ಕಾಣೆಯ ಸ್ಟಾಂಪುಗಳನ್ನು ಕಳುಹಿಸುವವರಿಗೆ ಅನುಕ್ರಮವಾಗಿ ಒಂದು ಮತ್ತೂ ಮೂರು ಭಾವಚಿತ್ರಗಳನ್ನು ನಾವು ಕಳುಹಿಸುತ್ತೇವೆ. ಕೆಲವು ಪ್ರತಿಗಳು ಮಾತ್ರವೇ ಉಳಿದಿವೆ. ಈ ಸಂದರ್ಭವನ್ನು ಕಳೆದುಕೊಳ್ಳಬೇಡಿ.

ಬರೆಯುವ ವಿಳಾಸ:—

Netar Sanjivan Karyalaya,
Juma Musjid, No. 6,
BOMBAY.

Weldons have transferred their rights of the South Kanara Milk Supply Society to Mr. M. L. S. Kumble from the 1st of January 1937. Utensils, furniture &c will be returned to Weldons' if Mr. M. L. S. Kumble discontinues.

S. S. KARANJE,
For Weldon & Co., Mangalore.

ಚುನಾವಣೆಯ ರಂಗಸ್ಥಳ.

(ಲೇಖಕ:—**ಮಟ್ಟು ಬ್ರಾಹ್ಮಣ.**)

ನರ್ತನಾರಂಭ.

ನಮ್ಮ ಜಿಲ್ಲೆಯಲ್ಲಿ ಚುನಾವಣೆಯ ರಂಗಸ್ಥಳದಲ್ಲಿ ನರ್ತನಾರಂಭವಾಗಿದೆ. ಕಾಂಗ್ರೆಸ್ಸಿನವರು ಪ್ರಚಾರಕಾರ್ಯವನ್ನು ಬಹು ರಭಸದಿಂದ ಮುಂದೊತ್ತುತ್ತಾರೆ. ಜಸ್ಟೀಸ್ ಪಾರ್ಟಿಯು ಗುಟ್ಟಾಗಿ ಕೆಲಸ ಮಾಡುತ್ತದೆ.

ಪ್ರಜಾಪಕ್ಷವು ಈ ಕಡೆಗೆ ಮುಖ ತೋರಿಸಲಿಲ್ಲವೆಂದರೂ ತಪ್ಪಾಗದು. ಹರಿಜನ ಉಮೇದ್ವಾರರೊಬ್ಬರು ಮಾತ್ರ ಪ್ರಜಾಪಕ್ಷವನ್ನು ಅವಲಂಬಿಸಿದಂತೆ ಕಾಣುವುದು. ಮುಖ್ಯವಾಗಿ ಜಸ್ಟೀಸ್ ಪಂಗಡಕ್ಕೂ, ಕಾಂಗ್ರೆಸ್ಸಿಗೂ, ಭಯಂಕರ ಯುದ್ಧವಾಗುವ ಸಂಭವವಿದೆ. ಕುಂದಾಪುರದ ಸಂತೆಯಲ್ಲಿ ಆದ ಗಡಿಬಿಡಿಯ ಸುದ್ದಿಯನ್ನು ಕೇಳಿದರೆ, ಮುಂದೇನಾಗುವುದೊ? ಎಂದು ಹೇಳಲಾಗುವುದಿಲ್ಲ.

ಪ್ರಕಟನೆಗಳು.

ಕೆಲವರ ಪ್ರಕಟನೆಗಳು ಈಗಲೇ ಹೊರಬಿದ್ದಿವೆ. ಇವುಗಳ ವಾಚನದಲ್ಲಿ ಒಳ್ಳೇ ಸ್ವಾರಸ್ಯವುಂಟು. ಶ್ರೀ. ಕೆ. ಎಸ್. ಅಡಿಗರ ಪ್ರಕಟನೆಯು ಯಾವ ಪಕ್ಷದ ಮೇಲೆಯೂ, ವ್ಯಕ್ತಿಗಳ ಮೇಲೆಯೂ ಆರೋಪಣೆಗಳನ್ನು ಹೊರಿಸುವುದಿಲ್ಲ. ಶ್ರೀ. ಪಣಿಯಾಡಿಗಳ ಪ್ರಕಟನೆಯು ವಿಚಾರಾರ್ಹವಾಗಿದೆ. 'ಈಗಿನ ಕಾಂಗ್ರೆಸ್ ಚಳವಳಿಕ್ಕೆ ಧನಿಕರು ಬೇಕಲ್ಲದೆ ದರಿದ್ರರು ಬೇಡ ಎನ್ನುತ್ತಾರೆ. ಕುಂದಾಪುರ ಸರ್ಕಲಿಗೆ ಸೇರಿದ ಇಬ್ಬರು ವ್ಯಕ್ತಿ (ಶ್ರೀ. ಹೆಗ್ಗಡೆ, ಶೆಟ್ಟರು) ಗಳು ತಮ್ಮ ಪೂರ್ವದ್ವೇಷವನ್ನೇ ಚುನಾವಣೆಯ ರಂಗದಲ್ಲಿ ಬೀರುವ ಸಂಭವವಿದೆ' ಎಂದು ಶ್ರೇಯುತರು ಹೇಳುತ್ತಾರೆ. ಇವರ ಮಾತು ನಿರಾಧಾರವಾದುದೆಂದು ಹೇಳಲೂ ಬರುವುದಿಲ್ಲ. ಆದರೂ ಶ್ರೀ. ಪಣಿಯಾಡಿಗಳು ಕಳೆದ ಅನೇಕ ವರ್ಷಗಳಿಂದ ಕಾಂಗ್ರೆಸ್ಸಿನ ಸೇವೆಯನ್ನು ಅತಿಶ್ರದ್ಧೆಯಿಂದ ಮಾಡಿದವರೆಂದೂ, ಸೆರೆಮನೆಗೂ ಹೋದವರೆಂದೂ, ನಿರ್ಭೀತ ಸ್ವಭಾವದವರೆಂದೂ, ಹೇಳಬಹುದು. ಕಾಂಗ್ರೆಸ್ಸಿನ ವಿರುದ್ಧವಾಗಿ ಇವರು ನಿಂತುದು ಸರಿಯೋ ತಪ್ಪೋ ದೇವರೇ ಬಲ್ಲ. ಆದರೆ ಅವರ ಮಾತುಗಳು ಮನನಾರ್ಹವಾಗಿವೆ. ಆದರೆ, ಇವರು ತಮ್ಮ ಹೆಸರನ್ನು ಈಗ ಹಿಂದೆ ತೆಗೆದಿರುತ್ತಾರೆಂತ ಕೇಳುತ್ತೇನೆ. ಶ್ರೀ. ಎ. ಬಿ. ಶೆಟ್ಟರು, ಶ್ರೀ. ಮಹಾಬಲ ಹೆಗ್ಗಡೆಗಳು, ಇವರಿಬ್ಬರೂ ನಮ್ಮ ಜಿಲ್ಲೆಗೆ ಅಪರಿಚಿತರಲ್ಲ. ಸುಪ್ರಸಿದ್ಧರು, ಸಂಭಾವಿತರು, ಗಂಭೀರ ಸ್ವಭಾವದವರು. ಶ್ರೀ. ಹೆಗ್ಗಡೆಗಳು ಬ್ರಾಹ್ಮಣಪಕ್ಷಪಾತಿಗಳೆಂದು ದೂರು ಕೇಳಿದ್ದಾರೆ. ಸ್ವಲ್ಪ ಸಮಯದ ಹಿಂದೆ, ನವಯುಗವು ಮಂಗಳೂರಲ್ಲಿದ್ದಾಗ, ಅದರ ಪುಟದಲ್ಲಿಯೇ ಒಬ್ಬರು ಬಾತ್ಮೀದಾರರು ಪ್ರಶ್ನೆ ಕೇಳಿದ್ದರು. 'ಜಸ್ಟೀಸ್ ಪಂಗಡದ ಆಳಿಕೆಯಲ್ಲಿ ಒಂದೊಂದು ಜಾತಿಗೆ ಇಷ್ಟಿಷ್ಟೇ ನೌಕರಿ ಸಿಕ್ಕಬೇಕೆಂಬ ನಿಯಮವಿದೆ. ಆ ಪ್ರಕಾರ, ನೀವು ಡಿ. ಬೋರ್ಡಿನೊಳಗೆ ನೌಕರಿ ಕೊಟ್ಟಿರುವಿರಾ? ಬ್ರಾಹ್ಮಣರಿಗೇ ಹೆಚ್ಚು ಹುದ್ದೆಗಳನ್ನು ಕೊಟ್ಟಿರಿ, ಬ್ರಾಹ್ಮಣೇತರರಿಗೆ ಕೊಡಲಿಲ್ಲ' ಹೀಗೇನೋ ಆ ಬಾತ್ಮಿಯ ಅಭಿಪ್ರಾಯವಿರಬೇಕು. ಇತ್ತೀಚೆಗೆ ಶ್ರೀ. ಎ. ಬಿ. ಶೆಟ್ಟರು ಬ್ರಾಹ್ಮಣದ್ವೇಷಿಗಳೆಂಬ ಆರೋಪಣೆಗಳು ಕೇಳಲ್ಪಡುತ್ತವೆ. ಇಬ್ಬರೂ ಉತ್ತರಗಳನ್ನು ಸಂಖ್ಯಾಸಮೇತವಾಗಿ ಕೊಟ್ಟಿದ್ದಾರೆ. ಆಧುನಿಕ ಕಾಲದಲ್ಲಿ ಬ್ರಾಹ್ಮಣ್ಯಕ್ಕೆ ಯಾರೂ ಬೆಲೆ ಕೊಡುವುದಿಲ್ಲ. ಚುನಾವಣೆಯ ಕಾಲದಲ್ಲಾದರೂ ಬೆಲೆ ದೊರೆಯುತ್ತದಲ್ಲ, ಅದೇ ಸಂತೋಷ, ಇರಲಿ.

ಇನ್ನೂ ಸ್ವಲ್ಪ ವಿಚಾರ.

ಬ್ರಾಹ್ಮಣರು ಹೆಚ್ಚಾಗಿ ಕುತಂತ್ರಗಾರರೆಂಬ ಆರೋಪಣೆಯು ಒಬ್ಬಿಬ್ಬರ ಬಾಯಿಯಿಂದ ಮಾತ್ರ ಕೇಳಿಬರುವ ಮಾತಲ್ಲ. ಈ ಕುರಿತು ಸ್ವಲ್ಪ ಉದ್ಧವಾಗಿ ಬರೆಯಬೇಕಾಗಿದೆ. ಕೆಲವು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಗಣಪತಿ ವಿಗ್ರಹದ ಗಲಭೆಯಾಯಿತು. ಹಿಂದು-ಮುಸಲ್ಮಾನರ ದಂಗೆಯಾಯಿತು. ಆಗ ಮಂಗಳೂರಿನಲ್ಲಿಯೂ ಸ್ವಲ್ಪ ಗಲಭೆಯಾಗಿತ್ತು. ದಂಗೆಯಲ್ಲ! ಪತ್ರಿಕೆಗಳ ಯುದ್ಧ. ರಾಷ್ಟ್ರಬಂಧುವು ದಂಗೆಯ ಸಂಬಂಧವಾಗಿ, ಅಬ್ಬಾಸ್ ಖಾನರನ್ನೂ ಅವರ ಕೆಲ ಮಂದಿ ಅನುಯಾಯಿಗಳನ್ನೂ ಆರೋಪಣೆಗೆ ಈಡು ಮಾಡಿದ ನೆನಪಿದೆ. ಆಗ ನವಯುಗವು (ಆಗ ಶ್ರೀ. ಎ. ಬಿ. ಶೆಟ್ಟರೇ ಅದಕ್ಕೆ ಸಂಪಾದಕರಾಗಿದ್ದರು) ಬ್ರಾಹ್ಮಣರೇ (ನಮ್ಮ ಜಿಲ್ಲೆಯವರಲ್ಲ, ಬೆಂಗಳೂರು, ಮೈಸೂರಿನವರು) ದಂಗೆಯ ಹಿಂದೆ ಇದ್ದರೆಂದು ಹೇಳಿತ್ತು. ರಾ.ಬಂಧುವು ಇದನ್ನು ನಿರಾಕರಿಸಿತು. ಆಗ ನವಯುಗವು ಬ್ರಾಹ್ಮಣರನ್ನು ಕುರಿತು ಪದ್ಯ ಮೂಲಕವಾಗಿ ಹಾಡಿತು. 'ಜಾತಿ ವಾತ್ಸಲ್ಯಮಂ ಬಿಡುವರೆ ಹಾರ್ವರು' ಎಂದು. ಕೊನೆಗೆ ಬೆಂಗಳೂರಿನ ದಂಗೆಯ ನ್ಯಾಯ ನಿರ್ಣಯವಾಯಿತು. ಅಬ್ಬಾಸ್ ಖಾನರು ತಾವು ತಮ್ಮ ಕೆಲ ಮಂದಿ ದುರ್ಮಿತ್ರರ ಪ್ರೇರಣೆಯಿಂದ, ಬ್ರಾಹ್ಮಣರೇ ದಂಗೆಯ ಮೂಲದಲ್ಲಿದ್ದರೆಂದು ಹೇಳಿದುದಾಗಿಯೂ, ಹಾಗೆ ಹೇಳಿದ್ದು ತಪ್ಪಾಯಿತೆಂದೂ, ಕ್ಷಮೆ ಬೇಡಿದರು. ಈ ಕ್ಷಮಾಯಾಚನೆಯ ಕುರಿತು, ದಂಗೆಯ ಮೂಲ ಕಾರಣವನ್ನು ಹುಡುಕಿ ತೆಗೆದ ನವಯುಗದಲ್ಲಿ, ಯಾವ ಸುದ್ದಿಯೂ ಬರಲಿಲ್ಲವೆಂದು ನನ್ನ ನೆನಪು. ಇರಲಿ ಇದು ಹಳೇ ಸುದ್ದಿ, ಈಗ ನವಯುಗವು ಶ್ರೀ. ಶೆಟ್ಟರದಲ್ಲ. ಹಾಗೂ ಶ್ರೀ. ಶೆಟ್ಟರು ಕಾಂಗ್ರೆಸ್ಸಿಗೆ ಸೇರಿದ್ದಾರೆ, ತಮ್ಮ ಬಿರುದು ಬಾವಲಿಗಳನ್ನು ಹಿಂದೆ ಕಳುಹಿಸಿದ್ದಾರೆ. ಹಾಗೂ ಕಾಂಗ್ರೆಸ್ಸಿನ ಉಗ್ರತತ್ವಗಳನ್ನು ಅನುಸರಿಸುವವರಾಗಿದ್ದಾರೆ. ಶ್ರೀ. ಶೆಟ್ಟರು ಕಾಂಗ್ರೆಸ್ಸಿನ ಕಡೆಯಿಂದ ನಿಲ್ಲಲು ಯೋಗ್ಯರೆಂದು ನನ್ನ ಹೇಳಿಕೆಯಲ್ಲ. ಅವರು ನಿಲ್ಲಲು ಯೋಗ್ಯರಾದ ಕಾರಣವೇ ಅವರನ್ನು ಆ ಸ್ಥಾನಕ್ಕೆ ನೇಮಿಸಿದ್ದಾರೆ. ಅದರಲ್ಲಿ ಏನೇನೂ ಸಂದೇಹವಿಲ್ಲ. ಆದರೆ ಚುನಾವಣೆಯಲ್ಲಿ ಜಾತೀಯ ಪ್ರಶ್ನೆ ಹೆಚ್ಚಾಗಿ ಏಕೆ ಬರಬೇಕು? ಅದು ಗೊತ್ತಾಗುವುದಿಲ್ಲ. ನಮ್ಮೂರ ಕಡೆ ಹಂಚಲ್ಪಟ್ಟ ಕಾಂಗ್ರೆಸ್ಸಿನ ಚುನಾವಣಾಪ್ರಚಾರದ ಕರಪತ್ರದಲ್ಲಿ, ಶ್ರೀ. ರಾಮರಾಯ ಮಲ್ಯರ ಹೆಸರನ್ನೊಳಗೊಂಡ ಪತ್ರದಲ್ಲಿ, ಜಸ್ಟೀಸ್ ಪಾರ್ಟಿಯ ಮೇಲೆ, ಕ್ರಿಮಿನಲ್ ದಾವೆಗೆ ಎಡೆಯಾಗುವಷ್ಟು ಆರೋಪಣೆಗಳಿದ್ದುವು. ಅವುಗಳಲ್ಲಿ ಜಸ್ಟೀಸ್ ಪಂಗಡವು ಬ್ರಾಹ್ಮಣದ್ವೇಷದಿಂದ ಉಂಟಾದ ಪಕ್ಷವೆಂದು ಕಾಣುತ್ತದೆ. ದೇವಸ್ಥಾನಗಳಿಗೆ 'ಎಂಡೋಮೆಂಟು'ಗಳನ್ನು ಮಾಡಿ, ಹಿಂದೂ ಸಮಾಜಕ್ಕೆ ಅದರಲ್ಲಿಯೂ ಮುಖ್ಯವಾಗಿ ಬ್ರಾಹ್ಮಣರಿಗೆ ಅನ್ಯಾಯ ಮಾಡಿತೆಂದು ಕಾಣುತ್ತದೆ. ಮೊದಲಿನ ಆರೋಪ ನಿಜವಿರಬಹುದು, ಎರಡನೆಯದರ ಕುರಿತು ನನಗೆ ಸಂದೇಹ. ನಮ್ಮ ದೇವರ ದುರ್ದೈವದಿಂದ, ಹೆಚ್ಚಾಗಿ ದೇವಾಲಯಗಳ ಮೊಕ್ತೇಸರರು ಬ್ರಾಹ್ಮಣರೆಂಬುದು ನಿಜ. ಆದ ಕಾರಣ ಎಂಡೋಮೆಂಟಿನ ಏಟು ಅವರಿಗೆ ಬಲವಾಗಿ ಬಿತ್ತು. ಜಸ್ಟೀಸ್ ಪಾರ್ಟಿಯು ಅಧಿಕಾರವನ್ನು ಕಿತ್ತುಕೊಳ್ಳುವ ಕುತೂಹಲದಿಂದ ಎಂಡೋಮೆಂಟಿನ ಬಿಲ್ಲನ್ನು ಹೊರಡಿಸಿತಲ್ಲದೆ, ಬ್ರಾಹ್ಮಣರಿಗೆ ಒಂದೇಟು ಹಾಕಬೇಕೆಂದು ಮಾಡಿದ್ದೆಂದು ನಾನು ಭಾವಿಸುವುದಿಲ್ಲ. ಶ್ರೀ. ಮುಲ್ಯರು, ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡಿನವರು ಹಾಗೆ ಹೇಳುತ್ತಾರೆ. ಬ್ರಾಹ್ಮಣೇತರರ ಆಡಳಿತೆಯಲ್ಲಿರುವ ಧರ್ಮಸ್ಥಳ ದೇವಸ್ಥಾನಕ್ಕೆ ಏಟು ಬೀಳುತಿತ್ತು. ಆಗ ಶ್ರೀಮಂತ ಹೆಗ್ಗಡೆಯವರು ನ್ಯಾಯವಿಧಾಯಕ ಸಭೆಯನ್ನು ಪ್ರವೇಶಿಸಿ ಜಸ್ಟೀಸ್ ಪಾರ್ಟಿಯ ಅನುಗ್ರಹದಿಂದ ಏಟನ್ನು ತಪ್ಪಿಸಿಕೊಂಡರು. ಕಾಂಗ್ರೆಸ್ಸು ಅವ(ಎಂಡೋಮೆಂಟ್)ನ್ನು ವಿರೋಧಿಯುವುದಕ್ಕಾಗಿ ನ್ಯಾಯಸಭೆಗಳನ್ನು ಪ್ರವೇಶಿಸುವುದೆ? ಅದು ಹೋಗುವುದು ನ್ಯಾಯಸಭೆಗಳನ್ನೇ ಮುರಿಯುವುದಕ್ಕಾಗಿಯೆ? ಜಾತೀಯ ಪ್ರಶ್ನೆಗೆ ಇದು ಸಂದರ್ಭವಲ್ಲ, ಒಬ್ಬರ ಆರೋಪಣೆಗೆ ಇನ್ನೊಬ್ಬರ ಪ್ರತ್ಯಾರೋಪಣೆ ಬರುತ್ತದೆ. ಆಗ ಮುಖ್ಯ ಪ್ರಶ್ನೆ ಮೂಲೆಗೆ ಬೀಳುತ್ತದೆ. ಶ್ರೀ. ಎ. ಬಿ. ಶೆಟ್ಟರು ಕಾಂಗ್ರೆಸ್ ಪಕ್ಷದವರು ಎಂದರೆ ಸಾಕು. ಅವರು ಕಾಂಗ್ರೆಸ್ ಪಕ್ಷದಲ್ಲಿರುವಷ್ಟು ಕಾಲ ಯಾವ ಜಾತಿಗೂ ಅನ್ಯಾಯ ಮಾಡಲು ಅವರಿಂದ ಸಾಧ್ಯವಿಲ್ಲ. ಮನುಷ್ಯರ ಭಾರವನ್ನು ತೂಗಿದರೆ ಶ್ರೀ. ಹೆಗ್ಗಡೆಗಳಿಗೇ ಓಟು ಕೊಡಬೇಕೆಂದು ಸ್ವಾರ್ಥದೃಷ್ಟಿಯ ಬ್ರಾಹ್ಮಣರು ಭಾವಿಸಬಹುದು. ಪಕ್ಷಗಳ ಭಾರವನ್ನು ತೂಗಿದರೆ, ಕಾಂಗ್ರೆಸ್ ಪಕ್ಷದ ಶ್ರೀ. ಎ. ಬಿ. ಶೆಟ್ಟರಿಗೇ ಓಟು ಕೊಡಬೇಕೆಂದು ಭಾವಿಸಬಹುದು. ಶ್ರೀ. ಪಣಿಯಾಡಿಗಳ ವಿಷಯವನ್ನು ಹಿಂದೆಯೇ ಸೂಚಿಸಿದ್ದೇನೆ.

(೧೩ನೇ ಪುಟ ನೋಡಿ)

ದಿ ಎವರ್ ರೆಡಿ ಕಂಪೆನಿ
(ಇಂಡಿಯಾ) ಲಿಮಿಟೆಡ್

ಡಿಸ್ಟ್ರಿಬ್ಯೂಟರ್ಸ್
ದಿ ಬೊಂಬೇ ಕಂಪನಿ ಲಿಮಿಟೆಡ್
ಮದ್ರಾಸ್, ಅಲಪ್ಪಿ, ಕೊಚ್ಚಿ,
ಕಲಿಕೊಟೆ, ಪ್ಲೈಲೋನ್.

ಹೆಚ್ಚುಪ್ರಕಾಶವುಳ್ಳದೂ ಹೆಚ್ಚುಬಾಳುವಂಥಾದ್ದೂ

C

THE GERMAN MADE

Holder Sprayers

will be available again by the middle of January 1937.

Basel Mission Book Depot,
MANGALORE.

ಅತ್ಯುತ್ತಮ ತರಗತಿಯ ಜರ್ಮನ್

ಹೋಲ್ಡರ್ ಸ್ಪ್ರೇಯರುಗಳು

ಇದೇ 1937ನೇ ಜನವರಿ ತಿಂಗಳ ಮಧ್ಯದೊಳಗಾಗಿ
ನಮ್ಮಲ್ಲಿ ದೊರೆಯಲಾಗುವುದು

ಬಾಸೆಲ್ ಮಿಶ್ಶನ್ ಬುಕ್ ಡಿಪೋ,
ಮಂಗಳೂರು.

3, 1-1.

(೧೦ನೇ ಪುಟದಿಂದ ಮುಂದುವರಿಸಿದ್ದು)

ಮಧ್ಯದ ರಂಗಸ್ಥಲ.

ಮಂಗಳೂರಿನ ಸಮರದಲ್ಲಿ ಹೆಚ್ಚಿನ ಉದ್ವೇಗವೇನೂ ಇಲ್ಲದಂತೆ ಕಾಣುತ್ತದೆ. ಕಾಂಗ್ರೆಸ್ ಪಕ್ಷದಿಂದ ಶ್ರೀ. ಕಾರ್ನಾಡ್ ಸದಾಶಿವ ರಾಯರನ್ನು ನಿಲ್ಲಿಸಬೇಕಾಗಿತ್ತು, ಎಂಬ ಆರೋಪಣೆ ಎಂದಿನಿಂದಲೇ ಕೇಳುತ್ತಿತ್ತು. ಅದು ಕಾಂಗ್ರೆಸ್ಸಿನ ತಪ್ಪಲ್ಲ, ಅವರ ತಪ್ಪು. ಅವರು ಸಕಾಲದಲ್ಲಿ ಮಂಗಳೂರಿಗೆ ಬರಲಿಲ್ಲವೆಂದೋ, ಅರ್ಜಿಯನ್ನು ಕಳುಹಿಸಲಿಲ್ಲವೆಂದೋ, ಏನೋ ಒಂದು ಸಮಾಧಾನವನ್ನು ಕೊಡುತ್ತಾರೆ. ಹಾಗೆ ಹೇಳಲಿಕ್ಕೆ ಕಾರಣವಿಲ್ಲವೆಂದು ನಾನು ಹೇಳುವುದಿಲ್ಲ, ಕಾನೂನಿನ ಮಟ್ಟಿಗೆ ಇರಬಹುದು, ಆದರೆ ಕಾನೂನನ್ನು ಮಾಡುವವರಾರು? ದೇವರೊ? ಮನುಷ್ಯರೊ? ಮನುಷ್ಯರಾದರೆ ಸಂದರ್ಭಕ್ಕೆ ಸರಿಯಾಗಿ ನಿಯಮವನ್ನು ಬದಲಾಯಿಸಬಹುದು. ಅಪ್ಪರ್ ಕೌನ್ಸಿಲಿನ ಬಗ್ಗೆ ಆ ನಿಯಮಗಳ ಪ್ರತಿಬಂಧಕವಿತ್ತೆ? ಡಿಸೆಂಬರ್ ೧೫ರ ವರೆಗೂ ಯಾರಾದರೊಬ್ಬರನ್ನು ಅಪ್ಪರ್ ಹೌಸಿಗೆ ನೇಮಿಸಬೇಕೆಂಬ ಆಸೆ, ಅಲ್ಲವಾದರೂ ಮಾತು ಕೇಳಿಬರುತ್ತಿತ್ತು. ಈ ಮೊದಲೇ ಎಷ್ಟೋ ಮೊದಲೇ ಒಳಗಿನ ಗುಟ್ಟನ್ನು ತಿಳಿದ ಕಾಂಗ್ರೆಸ್ ವಾಲರು 'ಕಾಂಗ್ರೆಸಿನ ಕಡೆಯಿಂದ ಅಪ್ಪರ್ ಹೌಸಿಗೆ ಯಾರೂ ಇರಲಿಕ್ಕಿಲ್ಲ'ವೆಂದು, ಇತರ ಉಮೇದ್ವಾರರ ವಕಾಲತ್ತನ್ನು ವಹಿಸಿದುದೂ ಉಂಟು. ಇದನ್ನು ನಾನು ಹೇಳಿದುದೇಕೆಂದರೆ, ಶ್ರೀ. ಸದಾಶಿವರಾಯರನ್ನು ಕಾಂಗ್ರೆಸ್ಸಿನ ಕಡೆಯಿಂದ ನಿಲ್ಲಿಸದಿರುವುದಕ್ಕೆ ಕಾನೂನುಗಳಿಂದಾದ ವಿರೋಧ ಒಂದೇ ಕಾರಣವೆಂದು ಹೇಳಬರುವುದಿಲ್ಲ. ಬೇರೆ ಕಾರಣಗಳೂ—ಅವುಗಳಲ್ಲಿ ಹಣದ್ದೂ ಒಂದು—ಇರಬಹುದೆಂದು ಕಾಣುತ್ತದೆ.

ಶ್ರೀ. ಸದಾಶಿವರಾಯರು ಮಂಗಳೂರಿನಲ್ಲಿ, ಈಗಿನ ಕಾಂಗ್ರೆಸ್ ಧುರೀಣರನೇಕರ ಅನಾದರಕ್ಕೆ ಪಾತ್ರರಾಗಿರಬಹುದು. ಆದರೆ ಬಡವರಿನ್ನೂ ಅವರನ್ನು ಸ್ಮರಿಸುತ್ತಾರೆ. ಅವರು ಎಸೆಂಬ್ಲಿಗೆ ಹೋಗಿದ್ದರಾಗಬಹುದಿತ್ತು ಎನ್ನುವ ಜನರೇ ಹೆಚ್ಚು. ಈ ಪ್ರಕರಣವು ಹೇಗಿದ್ದರೂ, ಶ್ರೀ. ಬಿ. ವಿ. ಬಾಳಿಗರ ಯೋಗ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ. ಕಾಂಗ್ರೆಸ್ಸಿನವರು ಅವರನ್ನು ಉಮೇದ್ವಾರಿಕೆಗಾಗಿ ಪ್ರಾರ್ಥಿಸಿದರು. 'ದಮ್ಮಯ್ಯ ನಾನು ಬರುವುದಿಲ್ಲ' ಎಂದರಂತೆ ಅವರು. ಹತ್ತು ಸಲ ಕರೆದಾಗಲೂ ಬರಲಿಲ್ಲ. ಹನ್ನೊಂದನೆಯ ಸಲ ಕರೆದಾಗ ಬಂದರು. ಕಾಂಗ್ರೆಸ್ ಮೆಂಬರರಾದರು; ಉಮೇದ್ವಾರರಾಗಿ ಆರಿಸಲ್ಪಟ್ಟರು. ಇವರು ಸುಪ್ರಸಿದ್ಧರು, ವಕೀಲರು, ಸಭ್ಯಗೃಹಸ್ಥರು. ಈ ಖ್ಯಾತಿಗೆ ಸರಿಯಾಗಿ ಅವರು ಎಸೆಂಬ್ಲಿಯೊಳಗೆ ವರ್ತಿಸಬಹುದೆಂದು ನಿರೀಕ್ಷಿಸಲಾಗಿದೆ.

ಕಾಸರಗೋಡು, ಪುತ್ತೂರು.

ಇದು ದೊಡ್ಡ ಯುದ್ಧಭೂಮಿ, ಇಲ್ಲಿಂದ ಕಾಂಗ್ರೆಸಿನ ಉಮೇದ್ವಾರಿಕೆಗಾಗಿಯೇ ಮೊತ್ತ ಮೊದಲು, ಶ್ರೀ. ಯು. ಸಿ. ಯಸ್. ಭಟ್ಟರಿಗೂ, ಶ್ರೀ. ಕಾರಂತರಿಗೂ ಜಗಳ ಹತ್ತಿತ್ತು. ಕಾರಂತರ ಉಮೇದ್ವಾರಿಕೆಯನ್ನೇ ಪಾರ್ಲಿಮೆಂಟರಿ ಬೋರ್ಡಿನವರು ಒಪ್ಪಿದರು. ಆಗ ಧರ್ಮಸ್ಥಳ ಹೆಗ್ಗಡೆಯವರು ವಿರೋಧಕರಾಗುವ ಭೀತಿಯಿತ್ತು. ಆ ಭೀತಿ ಹೇಗೋ ಹೋಯಿತಂತೆ. ಶ್ರೀ. ಹೆಗ್ಗಡೆಗಳ ಅಭಿಪ್ರಾಯದಂತೆ (ಅವರು ಮೊನ್ನೆ ಇದೇ ಪತ್ರಿಕೆಯಲ್ಲಿ ಕೊಟ್ಟ ಹೇಳಿಕೆಯಂತೆ) ಈ ಸರ್ಕಲಿನಲ್ಲಿ ಬ್ರಾಹ್ಮಣ ಮತದಾರರೇ ಹೆಚ್ಚು. ಅವರಲ್ಲಿ ಹೆಚ್ಚಿನವರು ತಮಗೇ ಮತ ಕೊಡುವಂತೆ ಶ್ರೀ. ಕಾರಂತರು 'ಉಪಾಯ' ಮಾಡಿದರಂತೆ, ಈ ಉಪಾಯಗಳೇನೆಂದು ಗೊತ್ತಾಗುವುದಿಲ್ಲ. ಎಂದರೆ ಶ್ರೀ. ಕಾರಂತರ ಉಮೇದ್ವಾರಿಕೆಗೆ ಇಲ್ಲಿ ಬ್ರಾಹ್ಮಣ ಮತದಾರರ ಪ್ರಾಬಲ್ಯವೇ ಕಾರಣವೆಂಬ ಅಭಿಪ್ರಾಯವು ಶ್ರೀ. ಮಂಜಯ ಹೆಗ್ಗಡೆಗಳ ಮಾತಿನಲ್ಲಿದೆ. ಇಲ್ಲಿಯೂ ಜಾತೀಯ ಪ್ರಶ್ನೆ, ಅಲ್ಲಿ ಜಸ್ಟೀಸ್ ಮಂಗಡದ, ದಿ. ಬ. ಹೆಗ್ಗಡೆಗಳಿಗೆ ಸಹಾಯ ಮಾಡುವ ಬ್ರಾಹ್ಮಣರೇ ಇಲ್ಲಿ ಸಹಾಯ ಮಾಡುತ್ತಾರಂತೆ. ಸಾರಾಂಶ ಇಲ್ಲಿ ಹೆಗ್ಗಡೆ-ಶೆಟ್ಟರೊಳಗಿನ ಕಲಹದಲ್ಲಿಯೂ, 'ಬ್ರಾಹ್ಮಣ ಪಕ್ಷಪಾತ' 'ಬ್ರಾಹ್ಮಣದ್ವೇಷ'ದ ಮಾತುಗಳು, ಅಲ್ಲಿಯೂ ಅದುನೆ! ಆದರೆ, ಶ್ರೀ. ಕಾರಂತರ ಕುರಿ ಬ್ರಾಹ್ಮಣಪಕ್ಷಪಾತವು ಅವರಲ್ಲಿರುವಂತೆ ತೋರುವುದಿಲ್ಲ. ಹಿಂದೆ ಡಾ. ವಿಟ್ಟಲ ಶೆಟ್ಟರು ನಗರಸಭಾಧ್ಯಕ್ಷರಾಗಿ ಆರಿಸಲ್ಪಟ್ಟ ಸಂದರ್ಭದಲ್ಲಿ, ಯಾರೋ ಒಬ್ಬರು, ಶ್ರೀ. ಕಾರಂತರನ್ನು ಹೇಯವಾಗಿ ಟೀಕಿಸಿದ್ದನ್ನು ಓದಿದ ನೆನಪು. ಆಗ ಹರಿಜನರಿಗೂ ಆಮಂತ್ರಣವನ್ನು ಕೊಟ್ಟ 'ಟಿಫೀನ್' ಒಂದಕ್ಕೆ, ಇವರು ಆಮಂತ್ರಿತರಾಗಿ ಹೋಗಲಿಲ್ಲ, ಎಂಬ ಕಾರಣದಿಂದ 'ನವಯುಗದ ಸೊಲ್ಲಿಗ'ನು 'ತಕ್ಕು ಮದ್ರಾಸಿನ ಅಯ್ಯರ್ ಬ್ರಾಹ್ಮಣ'ನೆಂಬ ಆರೋಪಣೆ ಮಾಡಿದ್ದುಂಟು. ಅಲ್ಲದೆ ಬೇರೆ ಯಾರೂ ಇವರನ್ನು ಆರೋಪಿಸಿದ ನೆನಪು ಕಾಣೆ. ಬ್ರಾಹ್ಮಣ ಮತದಾರರು ಅವರಿಗೇ ಮತ ಕೊಡುವ ಉಪಾಯವನ್ನಿವರು ಮಾಡಿದರು, ಎನ್ನುವುದಕ್ಕೂ, ಜಾತೀಯ ಪಕ್ಷಪಾತದಿಂದ ಬ್ರಾಹ್ಮಣರು ತಾವಾಗಿಯೇ ಇವರಿಗೆ ಮತದಾನ ಮಾಡಬಹುದು ಎನ್ನುವುದಕ್ಕೂ, ಶುಂಠ ಬ್ರಾಹ್ಮಣನೆಂದು ಬೇರೆಯವರು ಹೀಯಾಳಿಸಿದ್ದಿದ್ದರೂ, ಇವುಗಳ ಪರಸ್ಪರ ಸಂಬಂಧಗಳನ್ನು ಕಲ್ಪಿಸಲು ನನಗರಿಯದು! ಇನ್ನು ಅರ್ಥದಲ್ಲಿ ವ್ಯತ್ಯಾಸವಿದೆ. ಕಾಂಗ್ರೆಸ್ಸಿನವರಾಗಿ ಇಂತಹ ಉಪಾಯವನ್ನು ಮಾಡಿದ್ದರೆ ಅದು ಕಾರಂತರ ತಪ್ಪು, ಉಪಾಯ ಮಾಡಿಲ್ಲವಾದರೆ ತಪ್ಪಿಲ್ಲ. ಈಗ ಶ್ರೀ. ಹೆಗ್ಗಡೆಗಳ ವಿರೋಧವು ಹೋಗಿ, ಶ್ರೀ. ಬಿ. ನರಸಿಂಗರಾಯರ ವಿರೋಧವು ಶ್ರೀ. ಕಾರಂತರಿಗೆ ಒದಗಿದೆ. ಇದರ ಗುಣದೋಷಗಳೇನೆಂದು ಹೇಳಬರುವುದಿಲ್ಲ.

ಶ್ರೀ. ಬಿ. ನರಸಿಂಗರಾಯರು ದಕ್ಷಿಣ ಕನ್ನಡ ಜಿಲ್ಲೆಯ ಅತಿಪ್ರಸಿದ್ಧರಾದ, ಕ್ರಿಮಿನಲ್ ವಕೀಲರು. ಸಂಭಾವಿತ ಸದ್ಗೃಹಸ್ಥರು. ಸತ್ಯಾಗ್ರಹದ ಕಾಲದಲ್ಲಿ, ಲಾಠಿ ಪೆಟ್ಟು ತಿಂದ ಸತ್ಯಾಗ್ರಹಿಗಳ ಕಡೆಯಿಂದ ರುಸುಮಿಲ್ಲದೆ ವಾದಿಸಿದ ವಕೀಲರು ಇವರೊಬ್ಬರೇ, ಎಂದು ಆ ಕಾಲದಲ್ಲಿ ಜನರು ಆಡಿಕೊಳ್ಳುತ್ತಿದ್ದರು. ಇದೆಷ್ಟರ ಮಟ್ಟಿಗೆ ನಿಜವೆಂದು ನಾನರಿಯೆ. ಇವರು ಖಾದಿ ಬಟ್ಟೆ ಧರಿಸಿಕೊಂಡಿರುವುದನ್ನು ನಾನು ನೋಡಿದ್ದೇನೆ. 'ಶ್ರೀ. ಕಾರಂತರು ಜನರಿಗಾಗಿ ಕಷ್ಟಪಟ್ಟು ಕೆಲಸ ಮಾಡಿದ್ದಾರೆ, ಇವರು ಕೆಲಸ ಮಾಡುವ ಶಕ್ತಿಯುಳ್ಳವರಾಗಿದ್ದಾರೆ. ಶ್ರೀ. ಕಾರಂತರು ಕಾಂಗ್ರೆಸ್ಸಿನ ಪಕ್ಷದವರು, ಇವರು ಸ್ವತಂತ್ರ ಪಕ್ಷದವರು' ... ಇಷ್ಟೇ ಸದ್ಯಕ್ಕೆ ಹೇಳಬಹುದು.

ಅಪ್ಪರ್ ಹೌಸಿನ ಉಮೇದ್ವಾರರು.

ಕಾಂಗ್ರೆಸ್ಸಿನವರು ಈ ಸ್ಥಾನವನ್ನು ವ್ಯರ್ಥವಾಗಿ ಬಿಟ್ಟುಕೊಟ್ಟರೆಂದು ಕೆಲವರ ಹೇಳಿಕೆ. ಅದು ಹೇಗೆ? ಏನು? ಇತ್ಯಾದಿ ವಿಷಯಗಳನ್ನು, ಬರೆಯುವ ಸಮಯವು ಬಂದಿಲ್ಲ. ಶ್ರೀ. ಯು. ಸಿ. ಯಸ್. ಭಟ್ಟರು, ಅಪ್ಪರ್ ಹೌಸಿಗೆ ನಿಂತರೆಂತಲೂ, ಕೂಡಲೇ ತಳ್ಳಿಹಾಕಲ್ಪಟ್ಟರೆಂತಲೂ ಕೇಳಲ್ಪಡುತ್ತದೆ. ಅದು, ಏನೋ ಮುಂದೆ ತಿಳಿಯುವುದು. ಈಗ ಎಲ್ಲರ ಕಿವಿಗೂ, ಕಣ್ಣಿಗೂ ಕೇಳುವ, ಕಾಣುವ, ಉಮೇದ್ವಾರರಿಬ್ಬರೂ ಸ್ವತಂತ್ರ ಪಕ್ಷದವರು. ಶ್ರೀ. ಅಡಿಗರು ತಮ್ಮ ಪ್ರಕಟನೆಯಲ್ಲಿ ತಾನು ಸಾರ್ವಜನಿಕ ಸಂಸ್ಥೆಗಳಲ್ಲಿ ಹೇಗೆ ಕೆಲಸ ಮಾಡಿರುವೆನೆಂಬ ಪಟ್ಟಿಯನ್ನು ಮಾತ್ರ ಕೊಟ್ಟು ಮತವನ್ನು ಅಪೇಕ್ಷಿಸಿದ್ದಾರೆ. ಪುತ್ತೂರು ಕಾಸರಗೋಡುಗಳಲ್ಲಿ, ಶ್ರೀ. ಕಾರಂತರಿಗೂ, ಶ್ರೀ. ಅಡಿಗರಿಗೂ, ಒಂದು ಬಗೆಯ ಒಪ್ಪಂದವಿರುವುದೆಂದೂ ಉತ್ತರ ದಿಕ್ಕಿನ ಎಂದರೆ ಕುಂದಾಪುರ ಡಿವಿಜನಿನಲ್ಲಿ, ದಿ. ಬ. ಹೆಗ್ಗಡೆಗಳಿಗೂ ಶ್ರೀ. ಅಡಿಗರಿಗೂ ಒಡನಾಟವುಂಟೆಂದೂ, ಶ್ರೀ. ಮಂಜಯ ಹೆಗ್ಗಡೆಗಳು ಕೊಟ್ಟ ಪ್ರಕಟನೆಯಿಂದ ತಿಳಿದುಬರುತ್ತದೆ. ಶ್ರೀ. ಮಂಜಯ ಹೆಗ್ಗಡೆಗಳ ಪತ್ರವು ಸ್ಪಷ್ಟವಾಗಿದೆ ಎಂದು ಹೇಳಲು ಅಡ್ಡಿಯಿಲ್ಲ. ಈ ಚುನಾವಣೆಗಳಲ್ಲಿ ವ್ಯಕ್ತಿದ್ವೇಷ, ಜಾತಿಪಕ್ಷಪಾತಗಳನ್ನು ಉಮೇದ್ವಾರರೂ ಇತರರೂ ಕೆದರಿ ಹಾಕಿರುವರೆಂಬ ಅಭಿಪ್ರಾಯವೂ ಶ್ರೀ. ಮಂಜಯ ಹೆಗ್ಗಡೆಗಳ ಪತ್ರದಿಂದ ತಿಳಿದುಬರುತ್ತದೆ. ಆದರೆ ಹೆಗ್ಗಡೆಗಳು ಬರೆದ ಕೆಲವು ಸಂಗತಿಗಳನ್ನು ನೋಡಿ ಯಾರಿಗೂ ಕನಿಕರವಾಗದಿರದು. ಕುಂದಾಪುರ ಸರ್ಕಲಿನಿಂದ ಅವರು ನಿಲ್ಲಬೇಕೆಂದು ಬಯಸಿದಾಗ, ಶ್ರೀ. ಅಡಿಗರು 'ಅದು ಕೂಡದೆ'ಂದು ಸುಗ್ರೀವಾಜ್ಞೆಯನ್ನು ಕೊಟ್ಟರಂತೆ. ಅಪ್ಪರ್ ಹೌಸಿಗೆ ನಿಲ್ಲುವ ಆಸೆಯನ್ನು, ಮಂಜಯ ಹೆಗ್ಗಡೆಗಳು ದಿ. ಬ. ಹೆಗ್ಗಡೆಯವರಲ್ಲಿ ತೋರಿಸಿದಾಗ 'ಡಾ. ಯು. ರಿಗೆ ವಿರೋಧವಾಗಿ ಕೆಲಸ ಮಾಡಲಾಗುವುದಿಲ್ಲ' ಎಂದರಂತೆ. ಪುತ್ತೂರು, ಕಾಸರಗೋಡಿಗೆ ನಿಲ್ಲುವ ಸಂದರ್ಭದಲ್ಲಿ, ಅಲ್ಲಿ ಶ್ರೀ. ಕಾರಂತರು 'ಉಪಾಯ' ಮಾಡಿದರು, ಶ್ರೀ. ಅಡಿಗರು ಸಹಾಯ ಮಾಡಲಿಲ್ಲ. ಇತ್ಯಾದಿ ಅಭಿಪ್ರಾಯಗಳು, ಶ್ರೀ. ಮಂಜಯ ಹೆಗ್ಗಡೆಯವರದು. ಇಷ್ಟೆಲ್ಲಾ ಸಂಚುಗಳಾದ ಮೇಲೆ, ಶ್ರೀ. ಹೆಗ್ಗಡೆಗಳು ಬಹಿರಂಗವಾಗಿ ಪ್ರಕಟನೆ ಕೊಟ್ಟು ಎಲ್ಲ ಮತದಾರರ ಓಟುಗಳನ್ನು ಅಪೇಕ್ಷಿಸುತ್ತಾರೆ, ಎಂಬುದರಲ್ಲಿ ಸ್ವಾರಸ್ಯವಿದೆ. ಮೊದಲೇ ಹೀಗೆ ಅಪೇಕ್ಷಿಸುತ್ತಿದ್ದರೆ—ಇವರು? ಎಂಬುದೊಂದು ಪ್ರಶ್ನೆಯು ಸಹಜವಾಗಿ ಮೂಡುತ್ತದೆ. ಶ್ರೀ. ಮಂಜಯ ಹೆಗ್ಗಡೆಗಳ ಒಂದು ಮಾತು ಸಹಜ. 'ನ್ಯಾಯಸಭೆ ಸ್ವರ್ಗವಲ್ಲ. ಹೋದವರಿಗೆ ಪುಣ್ಯ ಬರುವುದಿಲ್ಲ. ಉತ್ತಮ ಪುನರ್ಜನ್ಮವೂ ಬರಲಾರದು' ಇದು ಹತ್ತರಲ್ಲಿ ಒಂದು ಮಾತು. ಚುನಾವಣೆಗೆ ನಿಂತ ಉಮೇದ್ವಾರರು ಯಾವ ಪಕ್ಷದವರೇ ಆಗಿರಬಹುದು, ಅವರಲ್ಲಿ 'ಹೀಗೇಕೆ ಮಾಡಿದಿರಿ?' ಎಂದು ಕೇಳಿದರೆ, 'ಹೇಗಾದರೂ ಓಟು ಸಿಕ್ಕಿದರಾಯಿತು. ವ್ಯವಹಾರದಲ್ಲಿ, ಸುಳ್ಳು, ಸತ್ಯ, ಒಳಸಂಚು, ಹೊರಸಂಚು ಎಂದೇನು? ಗೆಲ್ಲಬೇಕೆಂಬುದೇ ನೀತಿ. ಇದರಿಂದ ನರಕವು ದೊರೆತರೂ ಚಿಂತೆಯಿಲ್ಲ I don't care' ಎಂದು ಹೇಳಬಹುದೆಂಬುದನ್ನು ಒಪ್ಪಿಕೊಳ್ಳಬೇಕಾದೀತು.

ಪಜಲ್ ನಂಬ್ರ 31. ಪೋಸ್ಟ್ ಮಾಡುವ ಕೊನೆಯ ತಾರೀಕು 11-2-

11,000 ರುಪಾಯಿಗಳನ್ನು ಗೆಲ್ಲುತ್ತಿದೆ.

1ನೇ ಬಹುಮಾನವಾದ ರೂ. 7,000 ಎಲ್ಲ ಉತ್ತರಗಳೂ ಸರಿಯಾದುದಕ್ಕೂ, 2ನೇ ಬಹುಮಾನವಾದ ರೂ. 3,000 ಒಂದು ತಪ್ಪಿನದಕ್ಕೂ, ರೂ. 500 ಅತ್ಯಧಿಕ ಸಂಖ್ಯೆಯ ಉತ್ತರಗಳನ್ನು ಕಳುಹಿದವರಿಗೂ (ಇದಕ್ಕೆ ಗ್ಯಾರಂಟಿ ಇದೆ) ದೊರಕುವುದು. ಉಚಿತ ಸಂಭಾವನೆಗಳಿಗಾಗಿ ರೂ. 500 ಕೂಡ ಇದೆ. **ಸರಿಯಾದ ಉತ್ತರವನ್ನು ಮದ್ರಾಸ್ ಯುನೈಟೆಡ್ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಮೊಹರು ಮಾಡಿ ಇಟ್ಟಿದೆ.**

ಪ್ರತಿ ಒಂದು ಸಾಲೂ:—34.



ಪ್ರವೇಶ ಹಾಸಲು:—ಪ್ರತಿ ಉತ್ತರಕ್ಕೆ ರೂಪಾಯಿ. 1ರಂತೆ ಎರಡು ಉತ್ತರಗಳನ್ನು ಕಳುಹಿಸುವವರಿಗೆ ಒಂದು ಸುಂದರವಾದ ಕ್ಯಾಲೆಂಡರನ್ನೂ, 15 ಅಥವಾ ಅದಕ್ಕೂ ಮೇಲ್ಪಟ್ಟು ಉತ್ತರಗಳನ್ನು ಕಳುಹಿಸುವ ಪ್ರತಿಯೊಬ್ಬರಿಗೂ ಒಂದೊಂದು ಬೆಳ್ಳಿಯ ಟೀ-ಸೆಟ್ಟೂ ಉಚಿತವಾಗಿ ಕಳುಹಿಸಲಾಗುವುದು. ಪ್ರವೇಶಧನದ ಜುಮ್ಲಾ ಮೊತ್ತವನ್ನು ಮನಿಯಾರ್ಡರ್ ಮೂಲಕವೇ ಕಳುಹಿಸತಕ್ಕದ್ದು, ಸ್ಟ್ಯಾಂಪಿನ ರೂಪದಲ್ಲಿ ಅಲ್ಲ. ಖಾಲಿ ಕಾಗದದ ಮೇಲೆ ಬರೆದ ಉತ್ತರಗಳನ್ನು ಸ್ವೀಕರಿಸಲಾಗುವುದು.

ನಿಯಮಗಳು:—1 ರಿಂದ 16ರ ವರೆಗಿನ ಅಂಕೆಗಳಿಂದ ಖಾಲಿ ಅಂಕಣಗಳನ್ನು ತುಂಬಿಸಿ. ಒಮ್ಮೆ ಉಪಯೋಗಿಸಿದ ಸಂಖ್ಯೆಯನ್ನು ಇನ್ನೊಮ್ಮೆ ಉಪಯೋಗಿಸಕೂಡದು. ಹೀಗೆ ಪ್ರತಿ ಸಾಲಿನಲ್ಲಿ (ಉದ್ದಕ್ಕೆ, ಆಗಲಕ್ಕೆ, ಮೂಲೆ ಸಾಲಿನಲ್ಲಿ) 34ನ್ನು ತೋರಿಸಿ. ಯೋಜನೆಯು ಸಮಪ್ರಮಾಣದ್ದಾಗಿದೆ. ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿರುವಲ್ಲಿ, ಬಹುಮಾನಗಳನ್ನು ಸಮಪಾಲಾಗಿ ಹಂಚಲಾಗುವುದು. ಗೆಲ್ಲುವ ಒಬ್ಬ ಸ್ಪರ್ಧೆಗಾರನಿಗೆ ಒಂದು ಬಹುಮಾನ ಮಾತ್ರ. ನಿಮ್ಮ ಉತ್ತರಗಳೊಡನೆ ಮನಿಯಾರ್ಡರ್ ರಶೀದಿಯನ್ನು ಲಗ್ತೀಕರಿಸಿರಿ. ಹಣವನ್ನು ಕಳುಹಿಸದೆ ಉತ್ತರ ಕಳುಹಿಸಬೇಡಿ. ಒಂದು ವಾರದ ಮೇಲೆ ತಿಳಿಯುವ ಫಲಿತಾಂಶವನ್ನು ಕಳುಹಿಸಬೇಕಾದಲ್ಲಿ ಒಂದಾಣೆಯನ್ನು ಹೆಚ್ಚಿಗೆಯಾಗಿ ಕಳುಹಿಸಿ. ಮ್ಯಾನೇಜರರ ತೀರ್ಮಾನವೇ ಸಿಂಧು ಮತ್ತು ಕೊನೆಯದು.

ಪ್ರವೇಶಧನವೂ, ಉತ್ತರಗಳೂ ಈ ವಿಳಾಸಕ್ಕೆ:—To THE MANAGER,
Venus Easy Puzzle Solving Bureau,
No. 12, Manikanda Mudally St.,
G. T., MADRAS.

4, 8-1

"Coffee growers desirous of getting, free and post free, copies of the Monthly Bulletin issued by the Committee are requested to register their names with the

Secretary,
INDIAN COFFEE CESS COMMITTEE,
BANGALORE.

Exquisite Workmanship—Prompt Execution can be had only at
The Crown Rubber Stamp Company,
L. BALMATTA, MANGALORE.
(Estd. 1926.)
Manufacturers of Air Cushion Rubber Stamps, Revolving Date Stamps, Brass, Glass & Wood Sign-boards, Badges, Belts, Wax Seals, Blocks, Painters, Designers & Engravers on Marble, Wood Etc.
Awarded Medals & Certificates of Merit.
Thumb Impression Sets & Facsimile Stamps a Speciality.
Repairs of fountain pens undertaken.

ಮದ್ರಾಸ್ ಕೌನ್ಸಿಲ್ ಓಟರರುಗಳಲ್ಲಿ ವಿನಂತಿ.

ಈ ಮೊದಲು ನಾನು ನನ್ನ ಕೌನ್ಸಿಲು ಉಮೇದುವಾರಿಕೆಯ ಕುರಿತು ಪತ್ರಿಕೆಯಲ್ಲಿ ಜ್ಞಾಪಿಸಿರುವುದಾಗಿ ಎಲ್ಲಾ ಓಟರರುಗಳಿಗೂ ಕಾಗದ ಮೂಲಕ ಪ್ರೋತ್ಸಾಹವನ್ನು ಅಪೇಕ್ಷಿಸಿದ್ದೆನಷ್ಟೆ! ನಾನು ಸ್ವತಃ ಕೂಡಿದಷ್ಟು ಓಟರರುಗಳನ್ನು ನೋಡಬೇಕೆಂದಿದ್ದೇನೆ. ಶ್ರೇಷ್ಠಳವನ್ನು ಬಿಟ್ಟು ಹೆಚ್ಚಿನ ದಿವಸ ಜಿಲ್ಲೆಯಲ್ಲಿ ತಿರುಗಾಡಲು ಅನುಕೂಲವಾಗದ ಕಾರಣವೂ ನಾನು ಹೋದ ಸಮಯ ಕೆಲವು ಓಟರರುಗಳು ತಮ್ಮ ಕಾರ್ಯಕ್ಕೋಸ್ಕರ ಬೇರೆ ಕಡೆಗೆ ಹೋಗಿದ್ದುದರಿಂದಲೂ ಅವರನ್ನು ನೋಡಲು ಅವಕಾಶವಾಗಲಿಲ್ಲ. ಕಾಲಸಂಕೋಚದಿಂದ ಅಥವಾ ಶರೀರ ಅಸೌಖ್ಯತೆಯಿಂದ ಹೆಚ್ಚು ದೂರ ನಡೆದು ಹೋಗಿ ಕೆಲವು ಓಟರರುಗಳನ್ನು ನೋಡಲು ಅನಾನುಕೂಲವಾದರೆ ಅವರು ಯಾವ ಭೇದ ಅಥವಾ ವಿರೋಧಾಭಿಪ್ರಾಯವನ್ನು ಹೊಂದಬಾರದಾಗಿ ವಿನಂತಿ.

ಇಷ್ಟರ ತನಕ ಓಟರರುಗಳೂ ಮತ್ತು ಇತರ ಸ್ನೇಹಿತರೂ ತೋರಿಸಿರುವ ಗೌರವ ಸಹಾನುಭೂತಿ ಮತ್ತು ಪ್ರೋತ್ಸಾಹಕ್ಕೆ ಕೂಡಾ ತುಂಬಾ ಆಭಾರಿಯಾಗಿರುವೆನು. ಇಂಥ ಪರಸ್ಪರ ಪ್ರೇಮವಾತ್ಸಲ್ಯವು ಅಚ್ಚಳಿಯದೆ ವೃದ್ಧಿಯಾಗಲೆಂದು ಶ್ರೀಸ್ವಾಮಿಯಲ್ಲಿ ಪ್ರಾರ್ಥನೆ.

Dharmastal, } **D. Maniava Heede**

OMNIUM-GATHERUM.

THE MARCH OF PROGRESS

Tea Propaganda in India

The most encouraging feature of tea propaganda in India is the increasing interest which is being taken by public in the efforts which are being made to popularize tea. The significance of this is twofold: firstly, that Indians, both the classes and the masses, are learning to appreciate the benefits of tea drinking, and secondly, that the general intelligentsia are becoming conscious of the value of the tea industry to the country's economic progress.

Tea propaganda has continued unabated since the beginning of this century, and as the years have passed, its pace has been accelerated and its fields of operation extended. The methods pursued throughout the last 33 years have been those of peacefull penetratin—removing prejudices from quarters where they formerly existed, and spreading knowledge about tea in such a manner as to make its recognition permanent in the lives of millions of people.

Quite consistently with these methods, the tea propagandists' appeal to the public has been primarily of educational nature. Batches of trained workers have penetrated into the most remote parts of the country to endeavour to reach the masses at every conceivable place where they regularly congregate for business and pleasure—village hats, melas, fairs, bazaars, etc. On all occasions and at all places, the object is to show the public, by practical demonstration, the uses and benefits of tea, and eventually to carry conviction in their minds, to make them partake of well-prepared cups of tea. Thus thousands of cups of free tea are daily given away with the sole object of inducing those who are uninitiated to share the delights of tea drinking.

The last five years, especially, witnessed a marked intensification of propaganda in the existing heatres of operation, as well as in many new directions. While practical demonstation work, accompanied by the free distribution of hot tea at rural centres and special gatherings has continued to constitute the backbone of the work, new avenues of propaganda, such as cinema films, outdoor publicity and press campaigns have been carried out with marked success.

The establishment of model tea shops is another important part of the new propaganda programme. These model tea shops, though nothing elaborate, are run on clean and hygienic lines, demonstrating to the public how pleasant it is to drink tea in comfortable and clean surroundings. They are proving themselves of great value in popularizing tea among the masses; and referring to this, Mr. W. H. Miles, Commissioner for India, Indian Tea Cess Committee, in his last Half-yearly Report states: 'I firmly believe that the establishment of tea shops on these lines is of the greatest importance to our work.'

The Commissioner's report revealed that during the period of six months from February to July, 1936, 18,670,455 cups of tea were distributed free—an increase over the same period of last year of 11 million cups. The propaganda staff were able to sell to the public 5,035,048 pice packets of tea, which is double the quantity sold during the same period of last year. 'This increase,' observes Mr. Miles, 'is very satisfactory.' Continuing, he explains that

'a portion of this increase is attributable to the fact that the gradual expansion which I mentioned in my report in March last has been effective during the whole of the current period, and a portion is also attributable to the fact that improved methods of working have made it possible to distribute and sell tea in larger quantities, without in any way departing from our policy of confining the distribution of tea and the sale of pice packets, as far as possible, to non-tea drinkers.

'I regard this increase as very satisfactory. The period during which it took place consisted almost entirely of the hot weather months, when normally great difficulty is experienced in inducing the public to take hot tea. The fact that we have been able to increase our distribution points conclusively, in my opinion, to the fact that tea is becoming more and more popular as a beverage.'

The nett cumulative effect of propaganda during this period under review has been an all-round increase in the popularity of the beverage, together with a wide diffusion of knowledge about Indian tea in all its aspects.

(From Indian Tea Bulletin No. 2.)

A CUP OF HOSPITALITY

Are people to-day less hospitable than their forbears? Much is heard nowadays to the contrary; but it is probable that people on the average are still living up to the tradition of the good old days when the cup of hospitality was always full.

Time, of course, has somewhat changed the outlook of people in the matter of hospitality—particularly in its lavish and indiscriminate forms. It is no longer regarded necessary to give away much, so long as one gives away the right thing that really pleases. So, quite possibly, the meaning of hospitality is coming to be confined to the offering of a few things which we, to-day, regard as the best.

By far the best offering, and one which would please anybody, is a cup of tea—in itself a very simple and inexpensive thing, but very important in the present-day mode of hospitality.

When a friend calls, we offer him a cup of tea, and feel confident that this will please him. In our social contact with people, we have therefore given to this cup of hospitality the foremost position.

Recent news of a legacy which had come to a Canadian lady seems to corroborate this. In 1900, we learn, one Miss Kelly of Boston attended the funeral ceremony of a sister in a cemetery directly adjoining the home of a Mrs. Cate in Prince Edward Island. Mrs. Cate noticed Miss Kelly standing near the grave overcome with grief, and though a complete stranger, she invited Miss Kelly to come and have a cup of tea. Miss Kelly accepted the invitation, and later remarked that she would never forget this incident in her life. Now, after 35 years this boston lady has died at the age of 80, and left Mrs. Cate $1,000.

Great deeds never die, and thus has the cup of hospitality, offered to one in great distress, survived even beyond death.

(From Indian Tea News & Views No.6)

LOOK OUT

YE YOUTHS OF THE COUNTRY
IT'S COMING WITH A BOOM

The greatest picture ever produced in INDIA
and that has been selected for the
INTERNATIONAL FILM EXPOSITION AT VENICE

AMARJYOTI

— OR —

IMMORTAL FLAME

An Immortal Picture of PRABHAT

ಪುನಃ

ಪ್ರಭಾತ ಕಂಪೆನಿಯ ಚಿತ್ರಜ್ಯೋತಿ

ಅಮರಜ್ಯೋತಿ

ದುರ್ಗಾ ಖೋಟೆ—ಶಾಂತಾ ಆಪ್ಟೆ—ವಸಂತಿ—ಚಂದ್ರಮೋಹನ
ಅಲ್ಲದೆ ಸಾವಿರಾರು ಮುಂದಿ ಇತರ ನಟಶ್ರೇಷ್ಠರು.
ಭಾರತದ ಮೊದಲನೇ ಸಮುದ್ರ ಚಿತ್ರ.

ಶ್ರೀ ಚಿತ್ರಾ ಟಾಕೀಸ್,

ಮಂಗಳೂರು.

ಇದುವರೆಗೆ ಭಾರತದಲ್ಲಿ ತಯಾರಾದ ಚಿತ್ರಗಳಲ್ಲೆಲ್ಲಾ
ಅತೀ ಶ್ರೇಷ್ಠವಾದುದು.

QUALITY IS THE BEST SELLING STORY!
THAT IS WHY
"RAJA CYCLE"
IS THE BEST SELLING BICYCLE.



The Specification
includes the best of everything
in materials, construction
and finish.

STOCKISTS:-
— MESSRS.
The City Cycle Co.,
Mangalore.

ಸುಸಂಧಿ! ಕಳೆದುಕೊಳ್ಳಬೇಡಿರಿ!

ಶ್ರೀ ಸರಸ್ವತೀ ಭಂಡಾರ.

ಕೆಳಗೆ ಕಂಡ ಪುಸ್ತಕಗಳ ಪೈಕಿ 3 ಪುಸ್ತಕಗಳನ್ನು ಕೊಂಡುಕೊಳ್ಳತಕ್ಕವರಿಗೆ 'ಸೌಭಾಗ್ಯ ಲಲಿತೆ' ಎಂಬ ರೂ. 0—8—0 ಬೆಲೆಯುಳ್ಳ (ಸ್ವಾರಸ್ಯವಾದ ಕಥೆ) ಪುಸ್ತಕವನ್ನು (ಪುಕ್ಕಟೆ) ಕಳುಹಿಸುತ್ತೇವೆ.

ಕಾದಂಬರಿಗಳು.

ಧರ್ಮಸಾಮ್ರಾಜ್ಯ ರೂ. 1-4-0; ಯುಗಳಾಂಗುರಿಯ ರೂ. 0-6-0; ವಿಮಲಾದೇವಿ ರೂ. 1-12-0; ವಿವೇಕೋದಯ ರೂ. 0-12-0; ಸಂಸಾರ ಚಿತ್ರ ರೂ. 0-12-0; ಜಗನ್ಮೋಹಿನಿ ರೂ. 1—0—0; ಮಿಂಚು ರೂ. 0-12-0; ಅಂತರಂಗ ರೂ. 1-0-0; ಬ್ಯಾ. ರಾಮಚಂದ್ರನ್ ರೂ. 0-6-0; ತುಲಸೀದಾಸ ರಾಮಾಯಣ ರೂ. 2-8-0. (ನಮ್ಮ ಕ್ಯಾಟಲಾಗು ಉಚಿತ.)

ಸಮ್ಮು ವಿಳಾಸ:—ಶ್ರೀ ಸರಸ್ವತೀ ಭಂಡಾರ,
ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು,
ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಶ್ರೀ ಶೇಷಾಚಲ ಗ್ರಂಥಮಾಲೆಯ
ಹೊಸ ಪುಸ್ತಕಗಳು.

೧. ಊರ್ಮಿಳೆ
ಉಜ್ವಲವಾದ ಐತಿಹಾಸಿಕ ಕಥೆ.
ಬೆಲೆ ೧.೦ ಆಣೆ.

೨. ತುಬ್ಬುಗಾರ ಸುಬ್ಬಣ್ಣ
ಹೃದಯವಿದಾರಕವಾದ ಪತ್ತೆದಾರಿ ಕಾದಂಬರಿ.
ಬೆಲೆ ರೂ. ೧—೪—೦.

ಕಾಯಂ ಗ್ರಾಹಕರಿಗೆ ಅಂಚೆ ವೆಚ್ಚ ಇಲ್ಲ.
೨ ರೂ. ವ. ಆ. ಕಳುಹಿಸಿ ಬರೆಯಿರಿ.
ವಿಳಾಸ:—
ಶ್ರೀ ಶೇಷಾಚಲ ಪ್ರೆಸ್ಸ್,
ಪೋಸ್ಟ್ ಆನಂದವನ,
ಜಿ. ಧಾರವಾಡ.

WISHING YOU A VERY HAPPY & PROSPEROUS NEW YEA.

THE ASIAN ASSURANCE CO., LTD., BOMBAY.

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಬೊಂಬಯಿ.

Has completed its long 26 years of Humanitarian service having its Branches and Agencies all over India, Ceylon and East Africa.

Most beneficial schemes are ever ready to suit the individua purse.

WRITE FOR TERMS OF AGENCIES:

Branch Manager,
HAMPANKATTA, MANGALORE.

Obtain 100% Satisfaction!

By using our Famous, Regd. Deer Brand, Flower Vase Brand, Steamer (King George) Brand and Gold Mohar Brand

Roofing Tiles, Ridges, Ventilators, Skylights, Flooring Tiles, Building Bricks, etc.

They are hall marks of perfection—genuine in quality and superb in kind.

That is why we want you to insist on buying them.

Buy only goods bearing our genuine Trade Marks & Names.

Also superfine fish oil, manure & dried fish available,

Messrs. C. Abdurahiman & Coragappa,
MANGALORE.
Props: HAMEEDIAH TILE WORKS, MANGALORE,
Mang. Props: ISLAMIAH TILE CO., KASARAGODE.

THE BANK OF MANGALORE, LTD.
MANGALORE.
ESTD. 1931.

Head Office:-MANGALORE.
Branches:-
MANGALORE, PANEMANGALORE, MUDABIDRI & PADUBIDRI.
Chairman:—**Philip J. Chandran, Esq.**, B. A..
Retd. Dt. Registrar & Asstt. Registrar of Joint Stock Companies, S.K.

On & from 1st of January 1937
Fixed Deposits will be received at following rates of interest.

For	3 months		3½%
,,	6 ,,		4 %
,,	12 ,,		5 %
,,	24 ,,	& upwards	5½%

Interest Payable Quarterly.
SAVINGS BANK DEPOSITS: 3½% on daily balance.
All kinds of banking business transacted.
U. R. PAI.
N. UPENDRA PAI. } *MANAGING DIRECTORS.*

ಶ್ರೀ ದುರ್ಗಾಪರಮೇಶ್ವರೀ ಮೋಟರ್ ಸರ್ವೀಸ್,
ಮಂಗಳೂರು.

ಸ್ಥಾಪಿತವಾದುದು 1927ರಲ್ಲಿ!

ನಮ್ಮ ಮೋಟಾರು ಬಸ್ಸುಗಳು ಕ್ರಮವಾಗಿ ಪ್ರತಿನಿತ್ಯವೂ ಮಂಗಳೂರಿಂದ ಮರವೂರು, ಬಜಪೆ, ಕಟೀಲ್, ಕಿನ್ನಿಗೋಳಿ ಮಾರ್ಗವಾಗಿ ಮೂಲ್ಕಿಗೂ; ಗುರುಪುರ, ಬಜಪೆ, ಕಟೀಲ್ ಮಾರ್ಗವಾಗಿ ಮೂಲ್ಕಿಗೂ; ಮರವೂರು, ಬಜಪೆ, ಕಟೀಲ್ ಮತ್ತು ಮುಂಡ್ಕೂರಿಗಾಗಿ ಬೆಳ್ಮಣ್ಣಿಗೂ; ಅಡ್ಯಾರ್, ಫರಂಗಿಪೇಟೆ ಮಾರ್ಗವಾಗಿ ಬಂಟ್ವಾಳಕ್ಕೂ; ಮೂಲ್ಕಿಯಿಂದ ಪಡುಬಿದ್ರೆ, ಬೆಳ್ಮಣ್ಣು, ಕಾರ್ಕಳಕ್ಕೂ; ಕಾರ್ಕಳದಿಂದ ಬೆಳ್ಮಣ್ಣು, ಮಂಚಿ ಕಲ್ಲು ಮಾರ್ಗವಾಗಿ ಉಡುಪಿಗೂ ಚಲಾವಣೆಯಾಗುವುವು.

ನಮ್ಮ ಹೊಸ ಲೈನುಗಳು.

ಮೂಲ್ಕಿ—ಕಿನ್ನಿಗೋಳಿ—ಮೂಡಬಿದರೆ ಮಾರ್ಗವಾಗಿ ಕಾರ್ಕಳಕ್ಕೂ; ಕಾರ್ಕಳದಿಂದ ಸೀದಾ ಸೋಮೇಶ್ವರಕ್ಕೂ ಬೆಳಿಗ್ಗೆ ಮತ್ತು ಮಧ್ಯಾಹ್ನ ಎರಡು ಸರ್ವೀಸುಗಳು ಹೊಸದಾಗಿ ನಡೆಯುತ್ತಿವೆ. ಶಿವಮೊಗ್ಗಾ—ತೀರ್ಥಹಳ್ಳಿ—ಕೊಪ್ಪ—ಹರಿಹರ ಮೊದಲಾದ ಪ್ರದೇಶಗಳಿಗೆ ಹೋಗುವವರಿಗೆ ಇದರಿಂದ ತುಂಬ ಅನುಕೂಲ.

ವಿ. ಸೂ.—ಮಂಗಳೂರು, ಮೂಲ್ಕಿ, ಮಂಚಕಲ್, ಉಡ್ಪಿ, ಕಿನ್ನಿಗೋಳಿ ಮೊದಲಾದ ಕಡೆಗಳಿಂದ ಹೊರಡುವ ಬೆಳಿಗ್ಗಿನ ಮತ್ತು ಮಧ್ಯಾಹ್ನದ 'ಸರ್ವೀಸು'ಗಳು, ಸಮಯಕ್ಕೆ ಸರಿಯಾಗಿ ಸೋಮೇಶ್ವರಕ್ಕೆ ತಲುಪಿ, ಮೇಲಿನ ಬಸ್ಸು ಸರ್ವೀಸುಗಳಲ್ಲಿ ಕೂಡಲೇ ಪ್ರಯಾಣ ಮಾಡುವಂತೆ ಏರ್ಪಡಿಸಲಾಗಿದೆ.

ಪ್ರಯಾಣಿಕರ ಸೌಕರ್ಯವೇ ನಮ್ಮ ಮುಖ್ಯಧ್ಯೇಯ!
ಇದಕ್ಕಾಗಿಯೇ ಹೊಸ ಬಸ್ಸುಗಳು!

ಹೆಚ್ಚಿನ ಮಾಹಿತಿ ಈ ಸರ್ವೀಸಿನ ಏಜಂಟರುಗಳಿಂದ ತಿಳಿದುಕೊಳ್ಳಬಹುದು.

ಗುಣ ಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ **[ಹಣ ಪರತ.**

ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ್)

ಈ ಚೂರ್ಣವು ಕೆಂಪು, ಬಿಳಿ ಶರಗಿಗೆ ಶತ್ರುವಾಗಿರುವದು! ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ, ಮೈಯಲ್ಲಿ ನೋವು, ಉಷ್ಣತಾ, ಕ್ಷೀಣತಾ, ಗರ್ಭಾಶಯದಲ್ಲಿಯ ದೋಷ, ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ, ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವುದು. ಮಕ್ಕಳಾಗುವುದಿಲ್ಲೆಂದು ತನೇ ಲಗ್ನವಾಗುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟು, ಮಾ। ರಾ। ಎ. ಎಂ. ಇನ್ಸ್‌ಪೆಕ್ಟರ್ ಬೆಳಗಾಂವ—'ಈ ಚೂರ್ಣದಿಂದ ನನ್ನ ಐಟುಂಬದ ಹೊಟ್ಟೆಯೊಳಗಿನ ರಕ್ತಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳೂ ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಬಿಳಿ ಶರಗು ಇಲ್ಲದಂತಾದವು.' ೨೧ ದಿವಸದ ಡಬ್ಬಿಯ ಕಿ. ರೂ. ೩. ಟ. ಖ. ಆಣೆ ೮.

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರಿಗೆ ಅಶಕ್ತಿಯಾಗುತ್ತದೆ. ಬಡತನದಲ್ಲಿ ಮಕ್ಕಳಾಗುವದರಿಂದ ದುಃಖವಾಗುತ್ತದೆ, ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವದು ಬಂಧಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲೆ ವಿಚಾರ ಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು—ಡಾಕ್ಟರ್ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್., ಕೆಳವಾಮಾಹಿಮ, ಠಾಣೇ— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ, ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ. ಡಬ್ಬಿ ಕಿಮ್ಮತು ರೂ. ೪; ವಿ. ಪಿ. ಆಣೆ ೮.

ವಿಳಾಸ:—**ಸಂಜೀವಿನೀ ಔಷಧಾಲಯ, ಮು. ಪೊ. ಮಿರಜಿ, (S. M. C.)**



ಈ ಎಲ್ಲಾ ನೋವುಗಳಿಂದ ನರಳುವವರಿಗೆ ಈ ಔಷಧವು ಪೂರ್ವದ ಅನುಭವದಿಂದ ಒಟ್ಟಾಗಿಯೂ ಖಂಡಿತ ಗುಣಕಾರಿಯೆಂದು ಪ್ರತ್ಯೇಕವಾಗಿ ಶಿಫಾರಸು ಮಾಡಲ್ಪಟ್ಟಿದೆ.

ಇತರ ಎಲ್ಲಾ ಒಳಗಣ ಮತ್ತು ಬಾಹ್ಯ ಔಷಧಗಳು ನಿಷ್ಪ್ರಯೋಜಕವಾದಲ್ಲಿ, ಈ ಮಾತ್ರೆಗಳು ಬಾರಿಬಾರಿಗೂ ಶಮನವನ್ನುಂಟುಮಾಡಿರುತ್ತವೆ. ಯಾವ ರೀತಿಯಲ್ಲಿಯೂ ಅವುಗಳ ಗುಣವು ಬಾಧಕರವಾಗಿರದೆ, ಸಾಮಾನ್ಯ ಆರೋಗ್ಯಕ್ಕೆ ಯಾವಾಗಲೂ ಕಳೆಗೊಳಿಸುವ ಔಷಧವಾಗಿರುತ್ತದೆ.

Madras Stockists:—**Messrs. DADHA & CO.,**
52, Nainiappa Naick Street, Madars.

ಸಿದ್ಧವಾಗಿದೆ! ಸಿದ್ಧವಾಗಿದೆ!!

ಪಂಡಿತ ಜವಹರಲಾಲರ ಆತ್ಮಕಥೆ

[ಕನ್ನಡ ಭಾಷಾಂತರ] ನವಜೀವನ ಕನ್ನಡ ಗುಂಪಿನಿಂದ ಪ್ರಕಟನೆಯ ಸಂಪುಟ ಸಿದ್ಧವಾಗಿದೆ.

ಡಿಸೆಂಬರು ತಿಂಗಳ ಕೊನೆಗೆ ಗ್ರಂಥವು ಪೂರ್ತಿಯಾಗುವುದು.

			ಟಪಾಲು ಖರ್ಚು ಪ್ರತ್ಯೇಕ.
ಅತ್ಯುತ್ತಮ ಪ್ರತಿ	....	....	ರೂ. ೧೦-೦-೦
ವಾಚನಾಲಯ ಪ್ರತಿ	....	....	,, ೭-೦-೦
ಸಾಮಾನ್ಯ ಪ್ರತಿ	....	....	,, ೫-೦-೦

ಡಿಸೆಂಬರ್ ತಿಂಗಳೊಳಗಾಗಿ ಒಟ್ಟಿಗೆ ಹಣ ಕಳುಹಿಸುವವರಿಗೆ ಟಪಾಲು ಖರ್ಚು ಮುಕ್ತವು.
ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್ ಕೊಡಲ್ಪಡುವುದು.

ಪ್ರಕಾಶಕರು:—**ಸಿ. ಅಶ್ವತ್ಥನಾರಾಯಣರಾವ್**, ಬಿ.ಎ.,
ಸಂಪಾದಕರು: "ನವಜೀವನ" ಮತ್ತು "ಮುಕ್ಕಳ ಪುಸ್ತಕ",
ಬಳೇಪೇಟೆ, **ಬೆಂಗಳೂರು ಸಿಟಿ.**

Printed and published by U. Ganesh Shenai, Superintendent at the Saraswathi Printing Works, Ltd., Mangalore. Editor:—B. Vittal Rau.